ಗೊಂದಲಿಗರ ದೇವೇಂದ್ರಪ್ಪನ ಆಟಗಳು: ಒಂದು ಅಧ್ಯಯನ

(ಶ್ರೀಮುದೇನೂರು ಸಂಗಣ್ಣನವರು ಸಂಪಾದಿಸಿದ ಕೃತಿಯನ್ನು ಅನುಲಕ್ಷಿಸಿ)

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕ

ರಂಗನಾಥ .ಕೆ

ಮಾರ್ಗದರ್ಶಕರು

ಡಾ.ಹರಿಶ್ಚಂದ್ರ ದಿಗ್ಸಂಗೀಕರ್

ಹಿರಿಯ ಶ್ರೇಣಿ ಅಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೭-೦೮

"ಗೊಂದಲಿಗರ ದೇವೇಂದ್ರಪ್ಪನ ಆಟಗಳು : ಒಂದು ಅಧ್ಯಯನ"

(ಶ್ರೀಮುದೇನೂರು ಸಂಗಣ್ಣನವರು ಸಂಪಾದಿಸಿದ ಕೃತಿಯನ್ನು ಅನುಲಕ್ಷಿಸಿ)

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕ

ರಂಗನಾಥ .ಕೆ

ಮಾರ್ಗದರ್ಶಕರು

ಡಾ.ಹರಿಶ್ಚಂದ್ರ ದಿಗ್ಸಂಗೀಕರ್

ಹಿರಿಯ ಶ್ರೇಣಿ ಅಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೭-೦೮

ಪ್ರಮಾಣ ಪತ್ರ

"ಗೊಂದಲಿಗರ ದೇವೇಂದ್ರಪ್ಪ ಆಟಗಳು : ಒಂದು ಅಧ್ಯಯನ" **(ಶ್ರೀಮುದೇನೂರು ಸಂಗಣ್ಣನವರು ಸಂಪಾದಿಸಿದ ಕೃತಿಯನ್ನು ಅನುಲಕ್ಷಿಸಿ)** ಎಂಬ ಸಂಪ್ರಬಂಧವನ್ನು **'ಡಾ.ಹರಿಶ್ಚಂದ್ರ ದಿಗ್ಸಂಗೀಕರ್'** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ರಂಗನಾಥ .ಕೆ
ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ :

ಸ್ಥಳ : ವಿದ್ಯಾರಣ್ಯ

ದೃಢೀಕರಣ ಪತ್ರ

"**ಗೊಂದಲಿಗರ ದೇವೇಂದ್ರಪ್ಪ ಆಟಗಳು : ಒಂದು ಅಧ್ಯಯನ**" (**ಶ್ರೀಮುದೇನೂರು ಸಂಗಣ್ಣನವರು ಸಂಪಾದಿಸಿದ ಕೃತಿಯನ್ನು ಅನುಲಕ್ಷಿಸಿ**) ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು **ರಂಗನಾಥ .ಕೆ** ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ.ಹರಿಶ್ಚಂದ್ರ ದಿಗ್ಸಂಗಿಕರ್)
ಮಾರ್ಗದರ್ಶಕರು
ಹಿರಿಯ ಶ್ರೇಣಿ ಉಪನ್ಯಾಸಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ :
ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

"ಗೊಂದಲಿಗರ ದೇವೇಂದ್ರಪ್ಪ ಆಟಗಳು : ಒಂದು ಅಧ್ಯಯನ" (ಶ್ರೀಮುದೇನೂರು ಸಂಗಣ್ಣನವರು ಸಂಪಾದಿಸಿದ ಕೃತಿಯನ್ನು ಅನುಲಕ್ಷಿಸಿ) ಎಂಬ ಸಂಶೋಧನೆ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಒಪ್ಪಿಸಲು ಅವಕಾಶಮಾಡಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಹಾಗೂ ಕುಲಸಚಿವರಾದ ಡಾ.ಹಿ.ಚಿ.ಬೋರಲಿಂಗಯ್ಯನವರಿಗೆ ವಂದನೆಗಳು.

ಅಧ್ಯಯನ ಕೈಗೊಳ್ಳಲು ಆಡಳಿತಾತ್ಮಕ ಅನುಮತಿ ನೀಡಿ. ಸೂಕ್ತ ಸಲಹೆಗಳನ್ನು ಸಹಾಕಾರ ನೀಡಿದ ಅಧ್ಯಯನಾಂಗದ ನಿರ್ದೇಶಕರಾದ ಡಾ.ಡಿ.ಪಾಂಡುರಂಗಬಾಬು ಹಾಗೂ ಜಾನಪದ ವಿಭಾಗದ ಮುಖ್ಯಸ್ಥರಾದ ಡಾ.ಹೆಬ್ಬಾಲೆ ಕೆ.ನಾಗೇಶ್ ಅವರುಗಳಿಗೆ ಅನಂತ ಧನ್ಯವಾದಗಳನ್ನು ಸಲ್ಲಿಸುವುದು ಆದ್ಯ ಕರ್ತವ್ಯವೆಂದು ಭಾವಿಸುತ್ತೇನೆ.

ಅಧ್ಯಯನ ಕೈಗೊಳ್ಳಲು ನನಗೆ ನಿಬಂಧದ ವಿಷಯ ಸೂಚಿಸಿ ಅಧ್ಯಯನದುದ್ದಕ್ಕೂ ತಪ್ಪುಗಳನ್ನು ತಿದ್ದುತ್ತಾ. ತಿಳಿ ಹೇಳಿ ತಾಳ್ಮೆಯ ಮಾರ್ಗದರ್ಶನ ನೀಡಿದ ಮಾರ್ಗದರ್ಶಕರಾದ ಡಾ.ಹರಿಶ್ಚಂದ್ರ ದಿಗ್ಸಂಗಿಕರ ಅವರಿಗೆ ನನ್ನ ವಂದನೆಗಳು.

ನನ್ನ ಅಧ್ಯಯನಕ್ಕೆ ಸ್ಫೂರ್ತಿ ಮತ್ತು ಸಲಹೆ–ನೀಡಿದ ಹಾಗೂ ನನ್ನನ್ನು ಪ್ರೀತಿಯಿಂದ ಕಂಡು ವಿಚಾರಿಸಿ ಅಧ್ಯಯನದ ತಾತ್ವಿಕ ಬೋಧನೆಯನ್ನು ನೀಡಿದ ಜಾನಪದ ಅಧ್ಯಯನ ವಿಭಾಗದ ಗುರುಗಳಾದ ಪ್ರೊ.ಮಂಜುನಾಥ ಬೇವಿನಕಟ್ಟಿ ಅವರಿಗೂ ಪ್ರೊ.ಸ.ಚಿ.ರಮೇಶ್ ಅವರಿಗೂ ಮತ್ತು ಡಾ.ಮೊಗಳ್ಳಿಗಣೇಶ್, ಡಾ.ಸಿ.ಟಿ.ಗುರುಪ್ರಸಾದ್ ಅವರುಗಳಿಗೆ ಹೃದಯಪೂರ್ವಕ ವಂದನೆಗಳು ಹಾಗೂ ಗುಲಬರ್ಗ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಗುರುಗಳಿಗೆಲ್ಲರಿಗೂ ನನ್ನ ವಂದನೆಗಳು, ವಿಭಾಗದ ಸಿಬ್ಬಂದಿ ವರ್ಗದವರಾದ ಬಸವರಾಜು ಸಿ, ಎಂ.ಅಬ್ದುಲ್ ನಬಿ ಅವರಿಗೂ ನನ್ನ ವಂದನೆಗಳು.

ಡಾ.ಬಿ.ಜಿ.ಕನಕೇಶಮೂರ್ತಿ, ಡಾ.ಶಂಕರಮೂರ್ತಿ, ಡಾ.ಉದ್ದಟ್ಟಿವೆಂಕಟೇಶ, ಡಾ.ವಿ.ಸಿ.ಮಾರುತಿ, ಹಾಗೂ ಜಿ.ಅಂಜಿನಿ ಟೈಲರ್, ಉಮಾದೇವಿ ಸೇಡಂ ಹಾಗೂ ನನ್ನೂರಿನ ಹಿರಿಯರಾದ ಅಂಗಡಿ ಗೌವಸಿದ್ದಪ್ಪ, ಬಿ.ಶ್ಯಾಮಸುಂದರ್, ವಕೀಲರಾದ ಕೆ.ದೊಡ್ಡಬಸವರಾಜ ಅವರಿಗೂ ನನ್ನ ಹೃದಯ ಪೂರ್ವಕ ಅಭಿನಂದನೆಗಳು.

ನನ್ನ ಅಧ್ಯಯನಕ್ಕೆ ಸಂಪೂರ್ಣ ಸಹಕರಿಸಿದ ಚಿಗಟೇರಿಯ ಶ್ರೀ ಮುದೇನೂರು ಸಂಗಣ್ಣನವರಿಗೂ ಮತ್ತು ಗೆಳೆಯ ಅಪ್ಲಂಡರ್ ದೇವೇಂದ್ರಕುಮಾರ ಅವರಿಗೂ ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಹಲವಾರು ಕಷ್ಟಗಳ ನಡುವೆಯಲ್ಲಿ ಹಗಲು-ಇರುಳು ಮಗನ ಓದನ್ನು ಮತ್ತು ಏಳ್ಗೆಯನ್ನು ಸದಾ ಬಯಸುತ್ತಿರುವ ತಂದೆ-ತಾಯಿ ಹಾಗೂ ಅತ್ತೆ-ಅತ್ತಿಗೆ, ಅಣ್ಣ-ತಮ್ಮಂದಿರುಗಳಿಗೂ ಅಕ್ಕ-ತಂಗಿಯರಿಗೂ ನನ್ನ ನಮನಗಳು.

ಅಧ್ಯಯನದುದ್ದಕ್ಕೂ ಸಕಲ ರೀತಿಯಿಂದ ಸಹ ಮನಸ್ಕ ಸ್ನೇಹಿಗಳಾದ ಜಗದೀಶಕುಮಾರ ನಾಯಕ, ಡಿ.ಓಬಯ್ಯ, ಚಂದ್ರಪ್ಪಸೊಬಟಿ, ರಾಘವೇಂದ್ರ ಹಾರಣಗೇರಾ, ರಾಮಲಿಂಗಪ್ಪ ಯರಗೋಳ ಹಾಗೂ ಎಂ.ಫಿಲ್ ತರಗತಿಯ ಸಹಪಾಠಿಗಳಾದ ಅನಿತಾ ಕೆ, ಅಂಜಲದೇವಿ, ಮಂಗಳಾ ಬಿ.ಎನ್., ಪರಮೇಶ್ವರ ಜಾನೆ, ವೆಂಕಟೇಶ ಸಿ, ನಿಂಗಪ್ಪ ಎಮ್.ಎಸ್, ಹೊನ್ನೂರ ಸಾಬ್, ನಿಷಾರ ಡಿ, ಎಲ್.ಡಿ.ದೂರಣ್ಣನವರ ಇವರೆಲ್ಲರಿಗೂ ನನ್ನ ವಂದನೆಗಳು.

ಗೆಳೆಯರಾದ ರವಿಗೋಮ್ಯ, ಮಹಾಂತಗೌಡ, ಯರಿಯಪ್ಪ, ಯಾಸ್ಮೀನ್, ಲಾವಣ್ಯ, ಜೆ.ಕಲ್ಯಾಣಕುಮಾರ, ಚಿಂತಾಮಣಿ, ಮಹೇಶ, ರಮೇಶಹುಗ್ಗಿ, ಗದುಗಿನ ವಿಶ್ವನಾಥ ಹಾಗೂ ನನ್ನ ಯಶಸ್ಸಿಗೆ ಪ್ರೋತ್ಸಾಹಿಸುತ್ತಿರುವ ಮೀನಾಕ್ಷಿ ಎಸ್. ಹಿರೇಮಠ ಅವರಿಗೂ ನನ್ನ ವಂದನೆಗಳು.

ಅಚ್ಚು ಕಟ್ಟಾಗಿ ಅಕ್ಷರ ಜೋಡಣೆ ಮಾಡಿದ **'ಮಾನಸ ಗ್ರಾಫಿಕ್ಸ್,** ಕಮಲಾಪುರ ಅವರಿಗೂ ನನ್ನ ವಂದನೆಗಳು.

ಸ್ಥಳ : ವಿದ್ಯಾರಣ್ಯ

ರಂಗನಾಥ ಕೆ.
(ಎಂ.ಫಿಲ್.ಸಂಶೋಧನಾ ವಿದ್ಯಾರ್ಥಿ)
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅನೇಕ ವರ್ಷಗಳ ಹಿಂದೆ ಗೊಂದಲಿಗರ ಆಟಗಳು ಉಚ್ಛ್ರಾಯ ಸ್ಥಿತಿಯನ್ನು ಪಡೆದುಕೊಂಡಿದ್ದವು. ಜಾನಪದ ಕಲಾಪ್ರಕಾರದ ಪ್ರಮುಖ ಅಂಗವಾದ ಈ ಗೊಂದಲಿಗರ ಆಟವು. ಶತಮಾನಗಳ ಹಿಂದಿನಿಂದ ಭಾರತೀಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸುತ್ತಾ ವಿಶ್ವದ ಗಮನವನ್ನು ಸೆಳೆದಿವೆ. ಗ್ರಾಮೀಣ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ ಈ ಗೊಂದಲಿಗರ ಆಟಗಳು ಪುರಾಣೇತಿಹಾಸಗಳನ್ನು ಸಾಮಾನ್ಯ ಜನರಿಗೆ ಮನವರಿಕೆ ಮಾಡಿಕೊಡವುದರಲ್ಲಿ ಅಮೋಘ ಪಾತ್ರವಹಿಸುತ್ತವೆ. ಶಾತವಾಹನ, ಚಾಲುಕ್ಯ, ರಾಷ್ಟ್ರಕೂಟ ಹಾಗೂ ವಿಜಯನಗರ ಸಾಮ್ರಾಜ್ಯಗಳ ಪ್ರೋತ್ಸಾಹದಿಂದ ವಿಶ್ವವ್ಯಾಪಿಯಾಗಿ ಪ್ರಚಾರಗಿಟ್ಟಿಸಿದ ಗೊಂದಲಿಗರ ಆಟಗಳು ಇಂದು ಉಚ್ಛ್ರಾಯ ಸ್ಥಿತಿಯಿಂದ ಕೇವಲ ಹೆಸರಿಗೆ ಮಾತ್ರ ಉಳಿದಿವೆ.

ಪ್ರಸ್ತುತ ದಿನಗಳಲ್ಲಿ ಅದನ್ನೇ ನಂಬಿಕೊಂಡು ಬದುಕಿದ್ದ ಅದೆಷ್ಟೋ ಕಲಾವಿದರು ಇಂದು ಬೀದಿಪಾಲಾಗುತ್ತಿದ್ದಾರೆ. ಇವರಲ್ಲಿ ಅನೇಕ ಕುಟುಂಬಗಳು ಜೀವನ ನಿರ್ವಹಣೆಗೆ ಬೇರೆ ದಾರಿಯನ್ನು ನೋಡಿ ಕೊಂಡಿದ್ದು ಈ ಪ್ರದರ್ಶನಕ್ಕೆ ಬಂದೊದಗಿದ ದೊಡ್ಡ ವಿಪತ್ತೆಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಈ ಹಿಂದೆ ಕಲೆಗೆ ಗೌರವ ದೊರೆಯುತ್ತಿತ್ತು. ವರ್ಷದ ಎಲ್ಲಾ ದಿನಗಳಲ್ಲಿ ಇವರನ್ನು ಕರೆಯಿಸಿ. ಆಟ ಪ್ರದರ್ಶಿಸುವ ಸಂಸ್ಕೃತಿ ಇತ್ತು ಅದರದೇ ಆದ ನಂಬಿಕೆಗಳಿದ್ದವು. ಕನಿಷ್ಠ ವರ್ಷಕ್ಕೆ ಒಂದು ಸಾರೆಯಾದರು ಆಡಿಸುವಂತಹ ಪರಿಪಾಠವಿತ್ತು ಈ ರೀತಿ ಆಟ ಆಡಿಸಿದರೆ ಊರಿಗೆ ಸಮೃದ್ಧಿ ಶಾಂತಿ ಸಿಗುತ್ತದೆ. ಮಳೆಯು ಸಕಾಲಕ್ಕೆ ಬಂದು ಬೆಳೆಯು ಚೆನ್ನಾಗಿ ಬರುತ್ತವೆ. ನಮ್ಮ ಆರ್ಥಿಕ ಪರಿಸ್ಥಿತಿಯು ಸುಧಾರಿಸುತ್ತದೆ ಎಂದು ನಂಬಿಕೊಂಡಿದ್ದರು. ಆದರೆ ಇಂದು ಇಂತಹ ಎಷ್ಟೋ ನಂಬಿಕೆಗಳು ಅಳಿದುಹೋಗಿವೆ.

ಅದರಂತೆ ಈ ಗೊಂದಲಿಗರ ಆಟಗಳಿಗೆ ದೊಡ್ಡ ವಿಪತ್ತೇ ಸರಿ ವರ್ಷಕ್ಕೆ ಒಮ್ಮೆಯಾದರೂ ಇಂತಹ ಆಟಗಳನ್ನು ಆಡಿಸುವ ಆಡಿತೋರಿಸುವ ಪರಿಪಾಠವನ್ನು ನಾವು ತಂದುಕೊಳ್ಳಬಹುದಾಗಿದೆ. ಏಕೆಂದರೆ ಈ ಕಲೆಯು ಸಾಮಾನ್ಯವಾಗಿರದೆ ಅದರ ಒಳ ಹೊಕ್ಕು ನೋಡಿದರೆ ನಮಗೆ ಅದರಲ್ಲಿನ ತಿರುಳು ಅರ್ಥವಾಗುತ್ತದೆ.

ಜನಪದ ಕಲೆಗಳಲ್ಲಿ ಒಂದಾದ ಈ ಗೊಂದಲಿಗರ ಆಟಗಳನ್ನು ಬರಿಪುಸ್ತಕ ರೂಪದಲ್ಲಿ ಕ್ರೂಢೀಕರಿಸದೆ ಇವರ ಆಟಗಳನ್ನು ಜಾನಪದ ಕತೆಗಳಂತೆ ವಸ್ತು, ರೂಪ, ಸಂದರ್ಭ, ಉದ್ದೇಶ, ಸಾಂಸ್ಕೃತಿಕ ಸಮಾಜಶಾಸ್ತ್ರ, ಮಾನವಶಾಸ್ತ್ರ, ಭಾಷಾಶಾಸ್ತ್ರಗಳ ದೃಷ್ಟಿಕೋನದಿಂದ, ಪ್ರಯೋಗದ ಹಿನ್ನಲೆಯಲ್ಲಿ ಪರಾಮರ್ಶಿಸಲು ಅವಕಾಶವಿದೆ. ಈ ಹಿನ್ನಲೆಯ ಅವರಲ್ಲಿರುವ ಮಹತ್ವದ ಅಂಶಗಳನ್ನು ಬಯಲಿಗೆ ತರುವಂತಹದ್ದು. ಅತ್ಯಗತ್ಯವಾಗಿದೆ. ಯಾವುದೇ ಒಂದು ಕಲೆಯು ಅದು ಜೀವಂತವಾಗಿರಬೇಕಾದರೆ ಇಂತಹ ಕೆಲಸಗಳು ನಡೆಯಬೇಕಿದೆ. ಅಂದಾಗ ಆ ಕಲಾವಿದನ ಮತ್ತು ಆ ಕಲೆಯು ಉಳಿಯಲು ಸಾಧ್ಯವಾಗುತ್ತವೆ.

ಹೀಗಿರುವಾಗ ಈ ಜನಪದ ಕಲೆಯಲ್ಲಿ ಒಂದಾದ ಈ ಗೊಂದಲಿಗರ ಆಟಗಳು ಇಂದು ನಶಿಸಿ ಹೋಗುತ್ತಿವೆ. ಕಾರಣ ಅದನ್ನು ಇತ್ತೀಚಿನ ದಿನಗಳಲ್ಲಿ (ವರ್ಷಗಳಲ್ಲಿ) ಅಷ್ಟಾಗಿ ಮಾನ್ಯ ಮಾಡದೇ ಹೋಗಿರುವಂತಹದ್ದು. ಹಲವು ವರ್ಷಗಳಲ್ಲಿ ನಾವು ಇದನ್ನು ನೋಡಲು ಸಾಧ್ಯವಾಗದೇ ಇರುವಂತಹ ವಾತಾವರಣವನ್ನು ನಾವೇ ನಿರ್ಮಿಸಿಕೊಳ್ಳುತ್ತಿದ್ದೇವೇನೋ ಎಂದು ಅನ್ನಿಸುತ್ತದೆ. ಈ ಕಲೆಯನ್ನು ಮತ್ತು ಕಲಾವಿದನ ಕಲಾಚಾತುರ್ಯವನ್ನು ಹಾಗೂ ಜನಪದ ಆಸಕ್ತನ ಕಾಳಜಿಯನ್ನು ಹೇಗಾದರೂ ಮಾಡಿ ಜೀವಂತ ಉಳಿಸಿಕೊಳ್ಳಬೇಕೆಂಬ ಹಂಬಲದಿಂದ ಈ ಅಧ್ಯಯನವನ್ನು ಆಯ್ದುಕೊಂಡಿದ್ದೇನೆ. ಮೊದಲಿನಿಂದಲೂ ಈ ಜನಪದ ಪ್ರದರ್ಶಕ ಕಲೆಗಳ ಬಗ್ಗೆ ಅಪಾರ ಕಾಳಜಿ ಇತ್ತು. ಮಾನವ ತನ್ನ ಅನಿಸಿಕೆ ಅಭಿಪ್ರಾಯಗಳನ್ನು ಮತ್ತೊಬ್ಬರಿಗೆ ವಿವರಿಸಿ ಹೇಳಲು ಯಾವುದಾದರೊಂದು ಮಾಧ್ಯಮವನ್ನು ಅನುಕರಿಸಬೇಕಿದೆ. ಹಾಗಾಗಿ ಅವನು ತನ್ನ ಇಂಗಿತವನ್ನು ತಿಳಿಸಲು ಈ ಆಟಗಳನ್ನು ಆಯ್ದುಕೊಂಡು ಅವುಗಳ ಮೂಲಕ ಒಳಿತು ಕೆಡುಕುಗಳನ್ನು ಜನರಿಗೆ ತಿಳಿಸಿದ್ದಾನೆ ಜನರಲ್ಲಿ ಬದಲಾವಣೆಯನ್ನು ನೀತಿ–ಅನೀತಿ ಧೈರ್ಯವನ್ನು ತುಂಬುವಲ್ಲಿ ಸೃಜನ ಶೀಲತೆಯನ್ನು ಮೈಗೂಡಿಸಿಕೊಂಡು ಜನರಿಗೆ ತಿಳಿಸುತ್ತಿದ್ದಾನೆ.

ಈ ಗೊಂದಲಿಗರ ಆಟ ಒಂದು ವಿಸ್ಮಯವೇ ಸರಿ ಮಾನವ ಡಪ್ಪಿನ ವಾದ್ಯವನ್ನು ಹಿಡಿದು ಸಂದರ್ಭಕ್ಕೆ ತಕ್ಕಂತೆ ಸಂಭಾಷಣೆಯ ಮೂಲಕ ಚಿತ್ರಿಸುವ ಪರಿಯನ್ನು ಮೆಚ್ಚಲೇಬೇಕಾದದ್ದು ಮತ್ತು ಸಂದರ್ಭಕ್ಕೆ ಹೊಂದಿಕೊಂಡಂತೆ ಪಾತ್ರಗಳ ಪ್ರವೇಶ ಅವುಗಳ ಪ್ರತಿಬಿಂಬಿಸುವ ಚಿತ್ರಣವನ್ನು ಗಮನಿಸಿದಾಗ ಅವುಗಳ ಮಹತ್ವ ನಮಗೆ ತಿಳಿದು ಬರುತ್ತದೆ.

ಈ ಅಧ್ಯಯನದ ಪ್ರಧಾನ ಉದ್ದೇಶ ಸಾಂಸ್ಕೃತಿಕ ಮಾನವ ವಿಜ್ಞಾನ ಮತ್ತು ಸಮಾಜಶಾಸ್ತ್ರದ ಹಿನ್ನಲೆಯಲ್ಲಿ ಒಂದು ಪ್ರದರ್ಶನ ಕಲೆಯನ್ನು ಒಳಗೊಂಡು ಹಾಗೂ ರಚನಾತ್ಮಕ ಸಿದ್ಧಾಂತದ ಹಿನ್ನಲೆಯಲ್ಲಿ ಹಾಗೂ ಪ್ರದರ್ಶನದ ಹಿನ್ನಲೆಯಲ್ಲಿ ಅದರ ಪ್ರಾಚೀನತೆ, ಕತೆಗಳು, ಪಾತ್ರಗಳು, ಭಾಷಾಶೈಲಿ, ಸಾಹಿತ್ಯ, ಹಾಗೂ ದೇವೇಂದ್ರಪ್ಪನ ಆಟಗಳು; ಮುದೇನೂರು ಸಂಗಣ್ಣನವರ ಜೀವಪರವಾದಂತಹ ಮಿಡಿತಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸಿದ ಈ ಸಂಗ್ರಹಕಾರರ ಕುರಿತಾಗಿ ಅಧ್ಯಯನ ನಡೆಸಲಾಗಿದೆ.

ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಮುದೇನೂರು ಸಂಗಣ್ಣನವರು ಸಂಪಾದಿಸಿದ ಗೊಂದಲಿಗರ ದೇವೇಂದ್ರಪ್ಪನವರ ಆರುಡಪ್ಪಿನಾಟಗಳು ಕೃತಿಯನ್ನು ಅಧ್ಯಯನ ಮಾಡುವುದರ ಮೂಲಕ ಅಲ್ಲಿರುವ ವಿವಿಧ ಆಟಗಳ ಮಗ್ಗಲುಗಳನ್ನು ಪರಿಶೀಲಿಸಲಾಗಿದೆ. ಈ ಪ್ರಬಂಧದಲ್ಲಿ ಇಡಿ. ದೇವೇಂದ್ರಪ್ಪನ ಆರು ಆಟಗಳನ್ನು ಅಧ್ಯಯನಮಾಡಿ ವಿಷಯವನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ ಶ್ರೀ ಮುದೇನೂರು ಸಂಗಣ್ಣನವರು ಜಾನಪದಕ್ಕೆ ತೋರಿಸುವ ಕಾಳಜಿಯನ್ನು ಮತ್ತು ಅವರು ಈ ಕೃತಿಯನ್ನು ಸಂಪಾದಿಸುವ ಸಂದರ್ಭದಲ್ಲಿ ಆದಂತಹ ಅನುಭವಗಳನ್ನು ಹೇಳುವುದರ ಮೂಲಕ ಈ ಕೃತಿಗೆ ಅವರು ಎಷ್ಟರ ಮಟ್ಟಿಗೆ ಶ್ರಮಿಸಿದ್ದಾರೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿ ವಿವರಿಸಲಾಗಿದೆ. ಹೀಗೆ ಇಡಿ ಕೃತಿಯು ಪ್ರಸ್ತುತ ದಿನಮಾನಗಳಲ್ಲಿ ಹೇಗೆ ಉಳಿದುಕೊಳ್ಳಬಹುದು ಎಂಬುದನ್ನು ತಿಳಿಸಲಾಗಿದೆ.

ಸ್ವರೂಪ

ಜಾನಪದ ಸಾಹಿತ್ಯವು ಎಲ್ಲಾ ಸಾಹಿತ್ಯ ಪ್ರಕಾರಗಳಿಗೆ ತಾಯಿಬೇರಾಗಿದೆ. ಪ್ರತಿಯೊಂದು ವಿಷಯವನ್ನು ತೆಗೆದುಕೊಂಡರೂ ಅದರಲ್ಲೂ ಜಾನಪದ ಸತ್ವಗಳಿದ್ದೇ ಇರುತ್ತವೆ. ಈ ಹಿನ್ನಲೆಯಲ್ಲಿ ನೋಡುವುದಾದರೆ ನಮ್ಮ ದಿನನಿತ್ಯದ ಬದುಕು ಜಾನಪದ ಅಂಶಗಳಿಂದ ಕೂಡಿದ್ದು ಪ್ರತಿಯೊಂದು ವಿಷಯ ವಸ್ತು ಜಾನಪದದ ತಳಹದಿಯ ಮೇಲೆ ನಿಂತಿರುವುದು ನಮಗೆ ಕಂಡುಬರುತ್ತದೆ.

ಈ ಡಪ್ಪಿನಾಟಗಳು ಹಿಂದೆ ರಾಜಾಶ್ರಯವನ್ನು ಪಡೆದುಕೊಂಡಿದ್ದವು ಏಕೆಂದರೆ ಅಂದಿನ ದಿನಗಳಲ್ಲಿ ಈ ಗೊಂದಲಿಗರನ್ನು ತಮ್ಮ ಯುದ್ದದ ಸಂದರ್ಭದಲಿ ಗುಪ್ತಚರ್ಯ ವಿಷಯಗಳನ್ನು ಕಂಡು ಹಿಡಿಯಲು ಬಳಸಿಕೊಳ್ಳುತ್ತಿದ್ದರು ಗೂಡಚಾರ್ಯ ಕಾರ್ಯದಲ್ಲಿ ಅವರು ತಮ್ಮ ಕಲೆಯನ್ನು ಉಳಿಸಿಕೊಂಡು ಬರುತ್ತಿದ್ದದು ನಮಗೆ ಕಂಡು ಬರುತ್ತದೆ.

ಗೊಂದಲಿಗರ ಆಟಗಳು ಮತ್ತು ಕಲಾವಿದರು ಮಹಾರಾಷ್ಟ್ರಕ್ಕೆ ಸೇರಿದ್ದು ಪರಿಸ್ಥಿತಿಗಳ ಅಸಮತೋಲನೆಯಿಂದಾಗಿ ಅವರು ಬೆಳಗಾವಿಯಲ್ಲಿ ಹುಟ್ಟಿ ಬಿಜಾಪುರದಲ್ಲಿ ಗೊಂದಲಿಗರು

ಬಂದು ನೆಲಸಿದರೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಮಹಾರಾಷ್ಟ್ರದಿಂದ ಆಂಧ್ರಕ್ಕೆ ಆನಂತರ ಕರ್ನಾಟಕ ಹಾಗೂ ಇತರ ರಾಜ್ಯಗಳಿಗೆ ಬಂದು ನೆಲೆಸಿದರೆಂದು ತಿಳಿದು ಬರುತ್ತದೆ. ಅದರಂತೆ ಕರ್ನಾಟಕದಲ್ಲಿ ಬೆಳಗಾಂವ, ಬಿಜಾಪುರ, ಧಾರವಾಡ, ಗುಲಬರ್ಗ, ಬಳ್ಳಾರಿ, ರಾಯಚೂರು, ಕೊಪ್ಪಳ, ಬಾಗಲಕೋಟೆ, ಮತ್ತು ದಕ್ಷಣ ಕರ್ನಾಟಕದಲ್ಲಿ ಕರಾವಳಿ, ಪ್ರದೇಶದಲ್ಲಿ ಈ ಆಟಗಳು ಪ್ರಚಲಿತದಲ್ಲಿರುವುದು ಕಂಡುಬರುತ್ತದೆ. ಮುಖ್ಯವಾಗಿ ಉತ್ತರಕರ್ನಾಟಕದಲ್ಲೇ ಹೆಚ್ಚಾಗಿ ಆಟಗಳನ್ನು ಆಡುವುದು ಕಂಡುಬರುತ್ತದೆ. ಗೊಂದಲಿಗರ ಆಟವನ್ನು ನಿರ್ಧಿಷ್ಟವಾಗಿ ಗೊಂದಲಿಗರ ಸಮುದಾಯಕ್ಕೆ ಸೇರಿದವರು ಆಡುತ್ತಾರೆ. ಇವರು ಮಾತ್ರ ಈ ಕಲೆಯಲ್ಲಿ ಪರಿಣಿತರಾಗಿದ್ದಾರೆ, ಮೊದಲು ಗೊಂದಲಿಗರ ಆಟಗಳು ಕರ್ನಾಟಕದಲ್ಲಿ ಜನಿಸಿ, ಆನಂತರ ಉಳಿದ ದೇಶಗಳಿಗೆ, ವ್ಯಾಪಿಸಿತು. ಜಾಕೋಬ್ ಎಂಬ ವಿದ್ವಾಂಸನೂ ೧೯೭೫ರಲ್ಲಿ ಇದರ ಬಗ್ಗೆ ಆಳವಾದ ಅಧ್ಯಯನ ಮಾಡಿ ತನ್ನದೇ ಆದ ನಿರ್ಧಾರಕ್ಕೆ ಬರುತ್ತಾನೆ. ಈ ಕಲೆಗಳು ಮೊದಲು ಭಾರತದಲ್ಲಿ ಜನಿಸಿ ನಂತರ ಕರ್ನಾಟಕದಲ್ಲಿ ಒಂದೇ ಮೂಲದಿಂದ ಹೊರಟು ಬೇರೆ ಬೇರೆ ಪ್ರಾದೇಶಿಕ ರೂಪಗಳಲ್ಲಿ ಉಳಿದುಕೊಂಡಿದೆ ಭಾರತೀಯ ಜಾನಪದ ಕಲೆಗಳನ್ನು ನಾವು ಅವಲೋಕಿಸಿದಾಗ ಇವರ ಪರಂಪರೆ ತಿಳಿದು ಬರುತ್ತದೆ.

ಈ ಹಿನ್ನಲೆಯಲ್ಲಿ ದೇವೇಂದ್ರಪ್ಪನ ಆಟಗಳು, ಬೆಳೆದು ಬಂದಿವೆ, ಇಂತಹ ಆಟಗಳ ಮೌಖಿಕ ರೂಪದಲ್ಲಿರುವಂತಹದ್ದು ಬೆಳೆದು ಬಂದಂತವುಗಳಾಗಿವೆ. ಆದರೆ ಈ ಗೊಂದಲಿಗ ಕಲಾವಿದರು ಇಲ್ಲವಾದಾಗ ಈ ಕಲೆಗಳು ನಶಿಸಿಹೋಗುತ್ತವೆ. ಮೊದಲಿನಿಂದ ಜಾನಪದ ಕಲೆಗಳ ಬಗ್ಗೆ ಅಪಾರ ಆಸಕ್ತಿಯನ್ನು ಇರಿಸಿಕೊಂಡು ಶ್ರೀ ಮುದೇನೂರು ಸಂಗಣ್ಣನವರು ಗೊಂದಲಿಗರ ದೇವೇಂದ್ರಪನನ್ನು ತಮ್ಮ ಊರಿಗೆ ಕರೆಯಿಸಿಕೊಂಡು ಆತನ ಆಟಗಳನ್ನು ಆಡಿಸುವುದರ ಮೂಲಕ ಆತನ ಆಟಗಳನ್ನು ಧ್ವನಿ ಸುರುಳಿಯಲ್ಲಿ ಹಿಡಿದಿಟ್ಟು ಅವುಗಳನ್ನು ಸಂಕಲಿಸಿ ಪ್ರಕಟಿಸಿರುವುದು. ಮಹತ್ವದ್ದಾಗಿದೆ. ಅವರಿಗೆ ಜಾನಪದ ಮೇಲೆ ಇರುವ ಅಭಿಮಾನವನ್ನು ಮೆರೆದಿದ್ದಾರೆಂದು ಹೇಳಬಹುದಾಗಿದೆ. ಜನಪದ ಕಲೆಗಳನ್ನು ಬರೀ ಪುಸ್ತಕ ರೂಪದಲ್ಲಿ ಬರೆದಿಡುವಂತಹದ್ದು ಕಂಡುಬರುತ್ತದೆ. ಇದು ಒಂದು ಕಡೆ ಜನಪದ ಪ್ರದರ್ಶನ ಕಲೆಗಳನ್ನು ಎಂದೆಂದು ಅಳಿಯದಂತೆ ಉಳಿಸುವ ಒಂದು ಬಗೆಯದಾದರೆ ಈ ಆಟಗಳಲ್ಲಿ ಇಂದಿನ ದಿನಮಾನಕ್ಕೆ ತಕ್ಕ ಹಾಗೆ ಅವು ಜನರ ಮನದಲ್ಲಿ ನಿಲ್ಲುತ್ತವೆಯೇ ಎಂಬುದು ಮುಖ್ಯವಾಗುತ್ತದೆ ಮತ್ತು ಇದರಲ್ಲಿರುವ ಸೃಜನಶೀಲ ಮನೋಭಾವನೆಯನ್ನು ಸ್ಪಷ್ಟಪಡಿಸಬೇಕಾಗುತ್ತದೆ.

ಇಂತಹ ಮಹತ್ತರವಾದ ಸಂಪಾದಿತ ಕೃತಿಯನ್ನು ಮಾನವ ಶಾಸ್ತ್ರದ ಹಿನ್ನಲೆಯಲ್ಲಿ ಸಾಮಾಜಿಕ ಶಾಸ್ತ್ರದ ಹಿನ್ನಲೆಯಲ್ಲಿ ಅಧ್ಯಯನ ಮಾಡಬೇಕಾಗಿದೆ.

ಅಧ್ಯಯನದ ಅಧ್ಯಾಯಗಳು

ಪ್ರಸ್ತುತ ಅಧ್ಯಯನವು ಏಳು ಅಧ್ಯಾಯಗಳನ್ನು ಹೊಂದಿದೆ.

ಅಧ್ಯಾಯ ಒಂದು

"ಗೊಂದಲಿಗರ ದೇವೇಂದ್ರಪ್ಪನ ಆಟಗಳು: ಒಂದು ಅಧ್ಯಯನ" ಎಂಬ ವಿಷಯದ ಬಗ್ಗೆ ಕೈಗೊಂಡ ಅಧ್ಯಯನದ ಉದ್ದೇಶ ವ್ಯಾಪ್ತಿಗೆ ಒಳಗೊಂಡ ವಿಷಯಗಳನ್ನು ಚರ್ಚಿಸಲಾಗಿದೆ. ಹಾಗೆಯೇ ಅದರ ಸ್ವರೂಪದೊಂದಿಗೆ ಅಧ್ಯಯನಕ್ಕೆ ಒಳಪಡಿಸಿದ ವಿಧಾನಗಳ ವಿವರಣೆಯನ್ನು ನೀಡಲಾಗಿದೆ.

ಅಧ್ಯಾಯ ಎರಡು

ಈ ಅಧ್ಯಾಯದಲ್ಲಿ "ಗೊಂದಲಿಗರ ದೇವೇಂದ್ರಪ್ಪನ ಆಟಗಳು: ಮುದೇನೂರು ಸಂಗಣ್ಣ" ಎನ್ನುವ ಶೀರ್ಷಿಕೆಯನ್ನು ಹಾಕಿಕೊಂಡು ಮುದೇನೂರು ಸಂಗಣ್ಣನವರು ಈ ಆಟಗಳನ್ನು ಸಂಪಾದಿಸಿ ಸಂಕಲಿಸಿ ಪ್ರಕಟಿಸುವಲ್ಲಿ ವಹಿಸಿದ ಪಾತ್ರ ಎಂತಹುದು ಮತ್ತು ಅವರಿಗೆ ಜಾನಪದದ ಬಗ್ಗೆ ಇದ್ದ ಆಸಕ್ತಿಯ ಹಿನ್ನಲೆಯಲ್ಲೂ ಅವರು ರಚಿಸಿದಂತಹ ಕೃತಿಗಳನ್ನು ತಿಳಿಸಲಾಗಿದೆ ಮತ್ತು ಅವರು ವಿವಿಧ ರಂಗದಲ್ಲೂ ಸಲ್ಲಿಸಿದ ಸೇವೆಗಳ ಅವರಿಗೆ ಸಂದ ಗೌರವಗಳನ್ನು ತಿಳಿಸಲಾಗಿದೆ.

ಅಧ್ಯಾಯ ಮೂರು

ಈ ಅಧ್ಯಾಯದಲ್ಲಿ "ಸಣ್ಣಾಟಗಳ ಪ್ರಾಚೀನತೆ" ಬಗ್ಗೆ ಚರ್ಚಿಸಲಾಗಿದೆ. ಸಣ್ಣಾಟಗಳು ಮೂಲದಿಂದ ಹೇಗೆ ಬೆಳೆದುಕೊಂಡು ಬಂದವು ಎಂಬುದನ್ನು ಮತ್ತು ಅವು ಯಾವ ಪ್ರದೇಶದಲ್ಲೂ ಹೆಚ್ಚಾಗಿ ಕಂಡು ಬರುತ್ತವೆ ಎಂಬುದರ ಬಗ್ಗೆ ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕು

ಈ ಅಧ್ಯಾಯದಲ್ಲಿ "ಗೊಂದಲಿಗರ ಆಟಗಳ ಕಥಾವಸ್ತು ಮತ್ತು ಪಾತ್ರಪರಿಚಯ ಕುರಿತು ಪರಾಮರ್ಶಿಸಲಾಗಿದೆ. ಈ ಕೃತಿಯಲ್ಲು ಬರುವ ಆರು ಆಟಗಳನ್ನು ಆಧರಿಸಿ ಅಲ್ಲಿ ಬರುವಂತಹ ಸ್ತ್ರೀ ಪಾತ್ರಗಳು ಮತ್ತು ಪುರುಷಪಾತ್ರಗಳು ಕುರಿತು ಚರ್ಚಿಸಲಾಗಿದೆ. ಇದರಲ್ಲಿ ಬರುವಂತಹ ರಾಜ, ರಾಣಿ, ಮಂತ್ರಿ, ಪ್ರಜೆಗಳು ತೊರಂಗಿಬಾವಾ ರಾಕ್ಷಸರು ಈ ಎಲ್ಲಾ ಪಾತ್ರಗಳ ಬಗ್ಗೆ ವಿಶ್ಲೇಷಿಸಲಾಗಿದೆ.

ಅಧ್ಯಾಯ ಐದು

ಈ ಅಧ್ಯಾಯದಲ್ಲಿ "ಕಥೆಗಳ ಅಕರ ಭಾಷಾ ಶೈಲಿ ಮತ್ತು ಸ್ವರೂಪವನ್ನು" ಕುರಿತು ಚರ್ಚಿಸಲಾಗಿದೆ. ಅಂದರೆ ಗೊಂದಲಿಗರ ಆಟಗಳಿಗೆ ಯಾವ ಕೃತಿಗಳ ಮೂಲ ಅಕರಗಳಾಗಿವೆ

ಎಂಬುದರ ಕುರಿತು ವಿವರಿಸಲಾಗಿದೆ. ಈ ಆಟಗಳು ಪ್ರಯೋಗವಾಗುವಂತಹ ಭಾಷಾಶೈಲಿ ಎಂಥಹುದು ಎಂಬುದನ್ನು ಚರ್ಚಿಸಲಾಗಿದೆ.

ಅಧ್ಯಾಯ ಆರು

ಪ್ರಸ್ತುತ ಅಧ್ಯಾಯದಲ್ಲಿ "ಆಧುನಿಕತೆಯ ಸಂದರ್ಭದಲ್ಲಿ ಡಪ್ಪಿನಾಟಗಳು" ಎಂಬುದನ್ನು ಕುರಿತು ಚರ್ಚಿಸಲಾಗಿದೆ ಅಂದರೆ ಇವತ್ತಿನ ಸಂದರ್ಭದಲ್ಲಿ ಈ ಆಟಗಳು ಹೇಗಿವೆ. ಮತ್ತು ಹಿಂದೆ ಹೇಗೆ ಉಳಿದುಕೊಂಡು ಬಂದಿದ್ದವು ಎಂಬುದನ್ನು ಮತ್ತು ಇವುಗಳ ಮೇಲೆ ಯಾವ ಪ್ರಭಾವ ಬೀರಿವೆ ಎಂಬುದನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಏಳು

ಈ ಮೇಲಿನ ಅಧ್ಯಾಯನದಲ್ಲಿ ಕಂಡುಕೊಂಡಂತಹ ಅಂಶಗಳನ್ನು ಮತ್ತು ಅವು ಮುಂದೆ ಹೇಗೆ ಬೆಳೆದುಕೊಂಡು ಬರಬೇಕೆಂಬ ಅಂಶವನ್ನು ಸಮಾರೋಪ ಎಂಬ ಏಳನೆಯ ಅಧ್ಯಯದಲ್ಲಿ ಚರ್ಚಿಸಲಾಗಿದೆ.

ಈ ಪ್ರಸ್ತುತ ಅಧ್ಯಯನವು ಈ ಮೇಲೆ ನಿರೂಪಿಸಿದಂತ ತಾತ್ವಿಕ ಚೌಕಟ್ಟಿನಲ್ಲಿ ತನ್ನನ್ನು ಮಂಡಿಸಿಕೊಳ್ಳುತ್ತದೆ. ಹಾಗೂ ಈವತ್ತಿನ ದಿನಗಳಲ್ಲಿ ಜಾನಪದ ಕಲಾವಿದರಲ್ಲಿ ಕಲೆಯನ್ನು ಪರಿಚಯಿಸುತ್ತಿರುವ ಸಂಗ್ರಹಿಸುತ್ತಿರುವ, ಪ್ರಯತ್ನಗಳಲ್ಲಿ ನನ್ನದೊಂದು ವಿಭಿನ್ನ ಚಿಕ್ಕ ಪ್ರಯತ್ನವೆಂದು ಭಾವಿಸುತ್ತೇನೆ.

ಅಧ್ಯಾಯ–ಎರಡು

ಗೊಂದಲಿಗರ ದೇವೇಂದ್ರಪ್ಪನ ಆಟಗಳು:

ಶ್ರೀ ಮುದೇನೂರು ಸಂಗಣ್ಣ





ಆಟಗಳನ್ನು ಪ್ರದರ್ಶಿಸುತ್ತಿರುವ ಗೊಂದಲಿಗರ ದೇವೇಂದ್ರಪ್ಪ

ಅಧ್ಯಾಯ–ಎರಡು

ಗೊಂದಲಿಗರ ದೇವೇಂದ್ರಪ್ಪನ ಆಟಗಳು:

ಶ್ರೀ ಮುದೇನೂರು ಸಂಗಣ್ಣ

ಜನಪದರಲ್ಲಿ ಪ್ರಮುಖವಾಗಿ ಸಣ್ಣಾಟಗಳೆಂದು ಪ್ರಸಿದ್ಧಿಯನ್ನು ಪಡೆದಂತಹ ಈ ಡಪ್ಪಿನಾಟಗಳು. ಮೂಲದಲ್ಲಿ ಬೆಳಗಾವಿಯಲ್ಲಿ ಹುಟ್ಟಿ ಬಿಜಾಪುರದಲ್ಲಿ ತೇಲಿದಂತಹವು. ಅದರಂತೆ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಗೊಂದಲಿಗರ ಆಟಗಳ ಕಲಾವಿದರು ಇರುವುದು ನಮಗೆ ಕಂಡುಬರುತ್ತದೆ. ಅದರಲ್ಲಿ ಮುಖ್ಯವಾಗಿ ಗೊಂದಲಿಗರ ದೇವೇಂದ್ರಪ್ಪ. ಪ್ರಮುಖವಾದ ಕಲಾವಿದ ಈತನ ಆಟಗಳು ಪ್ರಸ್ತುತ ದಿನಗಳಲ್ಲಿ ಜನರ ಮನಸ್ಸನ್ನು ತಟ್ಟುವಂತಹವು ಈ ಒಂದು ಹಿನ್ನೆಲೆಯಲ್ಲಿ ಈ ಆಟಗಳ ಪ್ರಚಲಿತದಲ್ಲಿ ಉಳಿದುಕೊಂಡು ಬಂದಿವೆ. ಈ ಗೊಂದಲಿಗ ಕಲಾವಿದನ. ಆರು ಆಟಗಳಿವೆ ಇವುಗಳನ್ನು ಮುದೇನೂರು ಸಂಗಣ್ಣನವರು ಸಂಪಾದಿಸಿ ಸಂಕಲಿಸಿ ಪ್ರಕಟಿಸಿದ್ದು ಕೃತಿ ರೂಪದಲ್ಲಿರುವುದು ನಮಗೆ ಕಂಡು ಬರುತ್ತದೆ. ಇವರು ಈ ಸಂಪಾದನ ಕಾರ್ಯದಲ್ಲಿ ಬಹಳ ಶ್ರಮ ವಹಿಸಿರುವುದು ನಮಗೆ ಮಹತ್ವದ್ದಾಗಿದೆ. ಅವರು ಹೇಳುವ ಮಾತು. "ದಿವಂಗತ ದೇವೇಂದ್ರಪ್ಪನ ಆಟಗಳನ್ನು ಅವರು ಬದುಕಿರುವಾಗಲೇ ಸಂಗ್ರಹಿಸಿ ಸಂಕಲಿಸಿ ಪ್ರಕಟಿಸುವ ಆಸೆ ನನ್ನದಾಗಿತ್ತು. ಅಂದರೆ ಅವರಿಗಿದ್ದ ಜನಪದ ಆಸಕ್ತಿಯು ಎಂಥವುದು ಎಂಬುದು ನಮಗೆ ಕಂಡು ಬರುತ್ತವೆ. ಇದಕ್ಕೂ ಮುನ್ನ ಗೊಂದಲಿಗರ ಸಂಸ್ಕೃತಿ ಮತ್ತು ಕಥೆಗಳು ಆಟದ ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಡಾ.ಕ್ಯಾತನಹಳ್ಳಿ ರಾಮಣ್ಣ. ಡಾ.ನಿಂಗಣ್ಣ ಸಣ್ಣಕ್ಕಿ, ಪ್ರೊ.ಜ್ಯೋತಿ ಹೊಸರೂರವರ ಬಿಡಿಲೇಖನಗಳು ಮತ್ತು ಕೃತಿಗಳು. ಈ ಗೊಂದಲಿಗರ ಆಟಗಳ ವೈಶಿಷ್ಟ್ಯ ಮತ್ತು ಮೂಲವನ್ನು ಎತ್ತಿ ಹಿಡಿಯುತ್ತದೆ. ಆದರೆ ಕಿನ್ನರಿ ಜೋಗಿಗಳ ಆಟಗಳಂತೆ ಗೊಂದಲಿಗರ ಆಟಗಳು ಪ್ರತ್ಯೇಕವಾಗಿ

ಈವರೆಗೆ ಗ್ರಂಥರೂಪದಲ್ಲಿ ಪ್ರಕಟವಾಗಿರಲಿಲ್ಲ. ಈ ಒಂದು ಕೊರತೆಯನ್ನು ಮುದೇನೂರು ಸಂಗಣ್ಣನವರು ಆಗು ಮೂಡಿದ್ದಾರೆ.

ವಿಜಯನಗರ ಅರಸರ ಕಾಲದಲ್ಲಿ ಕಲಾ ಪ್ರಜಾ ಪ್ರಭುತ್ವವಿತ್ತು. ಶಿಷ್ಟಕಲೆಗಳಿಗೆ ಇದ್ದಂತೆ ಜನಪದ ಜನಸಾಮಾನ್ಯರ ಕಲೆಗಳಿಗೂ ಸಮಾನವಾದ ಪೋಷಣೆ ಪ್ರೋತ್ಸಾಹ ದೊರೆಯುತ್ತಿದ್ದವು ಈಗ ಇಂತಹದೊಂದು ಪ್ರೋತ್ಸಾಹ ದೊರೆಯಬೇಕಿದೆ. ಅದರಂತೆ ಪಂಡಿತರಿಗೆ ಮತ್ತು ಅಕ್ಷರವಿಲ್ಲದ ಜನಪದ ಕಲಾವಿದರಿಗೆ ಗೌರವಗಳಿದ್ದವು ಎಂಬುದು ಇಲ್ಲಿ ಗಮನಾರ್ಹ.

ಜನಪದ ಕಲೆಗಳನ್ನು ಉಳಿಸುವಲ್ಲಿ ಮುದೇನೂರು ಸಂಗಣ್ಣನವರು ಮೊದಲಿಗರು. ಶ್ರೀ ಗೊಂದಲಿಗರ ದೇವೇಂದ್ರಪ್ಪನು. ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಹಂಪಾಪಟ್ಟಣ ಎಂಬ ಗ್ರಾಮದಲ್ಲಿ ವಾಸವಾಗಿದ್ದು ಇವನು ತಮ್ಮ ಮೂಲ ಕಲೆಯನ್ನೇ ವೃತ್ತಿಯನ್ನಾಗಿಸಿಕೊಂಡು ಜೀವನ ನಡೆಸಿಕೊಂಡು ಬಂದಿದ್ದಾನೆ. ಈತನಲ್ಲಿ ಕಲಾತ್ಮಕತೆ ಮತ್ತು ಸೃಜನಶೀಲತೆಗಳನ್ನು ಮೈಗೂಡಿಸಿಕೊಂಡು ಬೆಳೆದಿರುವಂತಹದ್ದು ಈ ಆಟಗಳನ್ನು ಓದಿದವರಿಗೆ ಮತ್ತು ಇವರು ನೀಡುವ ಪ್ರದರ್ಶನವನ್ನು ನೋಡಿದವರಿಗೆ, ಅನ್ನಿಸದಿರದು ತನ್ನ ಆಟಗಳನ್ನು ಸಮಯ ಸಂದರ್ಭಕ್ಕೆ ತಕ್ಕಂತೆ ಪ್ರತಿಬಿಂಬಿಸುವ ಚಾತುರ್ಯ ಹೊಂದಿದ್ದಾನೆ ಎಂಬುದು ಆಟಗಳಿಂದ ತಿಳಿದುಬರುತ್ತದೆ.

ಇಂತಹ ಮಹಾನ್ ಕಲಾವಿದನ ಆಟಗಳನ್ನು ನಶಿಸಿ ಹೋಗಲು ಬಿಡಬಾರದೆಂಬ ಸದುದ್ದೇಶದಿಂದ ಶ್ರೀಮುದೇನೂರು ಸಂಗಣ್ಣನವರು ಈ ಗೊಂದಲಿಗರ ದೇವೇಂದ್ರಪ್ಪನ ಆಟಗಳನ್ನು ಧ್ವನಿ ಸುರುಳಿಯ ಮೂಲಕ ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸಿರುವುದು ಮಹತ್ವದ ಸಂಗತಿ ಇಂತಹ ಒಂದು ಕಾರ್ಯವನ್ನು ಬಳ್ಳಾರಿ ಜಿಲ್ಲೆಯಲ್ಲಿ ಮಾಡಿದವರು ಸಂಗಣ್ಣನವರು ಇವರು ಸಂಗ್ರಹಿಸಿದ ಆಟಗಳನ್ನು ಈ ಕೆಳಗಿನಂತೆ ನೋಡಬಹುದು. ಈ ಕೃತಿಯಲ್ಲಿ ಒಬ್ಬನೇ ಕಲಾವಿದನ ಆರು ಆಟಗಳ ಜೊತೆಗೆ ನಡುನಡುವೆ ಬರುವಂತಹ ಅಡ್ಡ ಕತೆಗಳನ್ನು ಪೀಠಿಕೆ ಭಾಗದಲ್ಲಿ ಗೊಂದಲಿಗರ ಆಟಗಳಿಗೆ ಸಂಬಂಧಿಸಿದಂತೆ ಒಂದು ಪಿಎಚ್.ಡಿ., ಪ್ರಬಂಧವಾಗುವಷ್ಟು ವಿಷಯವನ್ನು ನೀಡಿದ್ದಾರೆ.

ಗೊಂದಲಿಗರ ದೇವೇಂದ್ರಪ್ಪನ ಆಟಗಳು

೧. ಮಹಾಸತಿ ಶಿವಲೋಚನಾ

೨. ಬಾಳ ಬಿಕ್ಷುಕ

೩. ಸತ್ಯ ಶೀಲಾವತಿ

೪. ರಾಜವೀರ ಪರಾಕ್ರಮ

೫. ವಿಘ್ನಾವತಿ

೬. ದುರಾಸೆಯ ಭಕ್ತ

೭. ಅಡ್ಡ ಕತೆಗಳು

೭.೧. ಜಗಳಗಂಟಿ ಚಿಕ್ಕವ್ವ

೭.೨. ಸಂತ ದಂಪತಿಗಳು

ಈ ಎಲ್ಲಾ ಆಟಗಳನ್ನು ನಾನು ಒಂದಕ್ಕಿಂತ ಹೆಚ್ಚು ಸಲ ಓದಿದ್ದೇನೆ ಇವರ ಆಟಗಳನ್ನು ನೋಡಿದರೆ ಇವು ಪ್ರದರ್ಶನವಾದಂತಹ ಸಂದರ್ಭ ಮತ್ತು ನೋಡುಗರ ಅಭಿರುಚಿಯನ್ನು ಗಮನದಲ್ಲಿಟ್ಟುಕೊಂಡು ಸೃಜನಶೀಲತೆ ಮಾನವೀಯ ಮೌಲ್ಯಗಳ ಹಿನ್ನೆಲಯಲ್ಲಿ ಇವುಗಳನ್ನು ಚಿತ್ರಿಸಲಾಗಿದೆ ಎನ್ನಿಸುತ್ತದೆ. ಈ ಆಟಗಳನ್ನು ಸಂಗ್ರಹಿಸುವ ಸಂದರ್ಭದಲ್ಲಿ ಶ್ರೀ ಮುದೇನೂರು ಸಂಗಣ್ಣನವರು ದೇವೇಂದ್ರಪ್ಪನವರನ್ನು ನಿಮ್ಮ ಆಟಗಳಲ್ಲಿ ಯಾವುದು ಅಧಿಕೃತ ಎಂದು ಕೇಳಿದರೆ ಅವೆಲ್ಲ ನನಗೆ ಗೊತ್ತಿಲ್ಲ ಎಲ್ಲಾ ಆ ದೇವಿ ನಡೆಸುತ್ತಾಳೆ ಎಂಬ ಈ ಮಾತಿನಲ್ಲಿ ಅರ್ಥವಾಗುವುದೇನೆಂದರೆ ಇವರು ತಮ್ಮ ಆಟಗಳನ್ನು ಪ್ರದರ್ಶಿಸುವ ಸಂದರ್ಭ ಮತ್ತು ನೋಡುಗರ ಅಭಿರುಚಿಯನ್ನು ಗ್ರಹಿಸಿಕೊಂಡು ಆಟವನ್ನು ಪ್ರದರ್ಶಿಸುವುದು ಕಂಡು ಬರುತ್ತದೆ. ಇದರ ಅನುಭವ ನಾನು ನಮ್ಮ ಊರಿನಲ್ಲಿ ಆಟಗಳನ್ನು ಅಂದರೆ ತೊಗಲುಗೊಂಬೆಯಾಟವಾಗಿರಬಹುದು. ಈ ಗೊಂದಲಿಗರ ಆಟಗಳಾಗಿರಬಹುದು. ನೋಡುವಾಗ ನನ್ನ ಗಮನಕ್ಕೆ ಬಂದ ವಿಷಯ ಹಾಗೆಯೇ ಇವರ ಮಾತಿನಲ್ಲಿ ಬದಲಾವಣೆಗಳು ಸಹ ಕಂಡುಬರುವುದು ಸಹಜವಾಗಿದೆ. ಇವರು ಹಗಲು ನಡೆಸುವ ಆಟಗಳಿಗೂ ಮತ್ತು ರಾತ್ರಿಯ ವೇಳೆ ನಡೆಸುವ ಆಟಗಳಿಗೂ ಭಿನ್ನತೆಯನ್ನು ಕಾಣಬಹುದು. ಆದರೆ ಮೂಲಕಥೆಯ ಆಶಯನ್ನು ಮಾತ್ರ ಕೆಡಿಸದೆ. ಜನರ ಮನಸ್ಸನ್ನು ಮುದಗೊಳಿಸುವ ಸಲುವಾಗಿ ಕೆಲವೊಂದು ಹಾಸ್ಯ ಚಟಾಕಿಗಳನ್ನು ಅಶ್ಲೀಲ ಪದಗಳನ್ನು ಬಳಸುವುದುಂಟು. ಈ ಕೃತಿಯನ್ನು ನೋಡಿದರೆ ಭಾಷೆಯ ಬಳಕೆ ಮತ್ತು ಕಥೆಯ ಮೂಲ ಸ್ವರೂಪ, ಸಂಭಾಷಣೆಯಲ್ಲಿ ನೈಪುಣ್ಯತೆಗಳಿರುವುದು. ಕಂಡುಬರುತ್ತದೆ ಅದರಂತೆ ಸೃಜನ ಶೀಲತೆಯನ್ನು ತಮ್ಮಲ್ಲಿಯ ಆಟಗಳಿಗೆ ನೀಡಿ ಆಟಗಳನ್ನು ಆಡಿ ತೋರಿಸುವುದು ಕಂಡು ಬರುತ್ತದೆ.

ದೇವೇಂದ್ರಪ್ಪನವರು ತಮ್ಮ ಆಟಗಳಲ್ಲಿ ಪಾತ್ರ ಪೋಷಣೆಯಲ್ಲಿ ಪ್ರಸಂಗಗಳ ಸರಳತೆಯಲ್ಲಿ ಪ್ರಖರತೆಯಲ್ಲಿ ಸನ್ನಿವೇಶಗಳ ನಿರೂಪಣಾ ಸಂವಿಧಾನದಲ್ಲಿ ಸರಳಶೈಲಿ ನಿರರ್ಗಳತೆಯಲ್ಲಿ ವಾಕ್ಯ ರಚನಾ ವಿನ್ಯಾಸ ಮಾಡುವುದರಲ್ಲಿ ಪದ ಪುಂಜಗಳನ್ನು ಜೋಡಿಸುವುದರಲ್ಲಿ ಅವರ ಕಲ್ಪನಾ ಶಕ್ತಿ ಕುತುಹಲ ಜಾಣ್ಮೆ ತಮ್ಮ ಸ್ವಂತಿಕೆಯನ್ನು ಮೆರೆಯುತ್ತಿರುವುದು ಇಲ್ಲಿ ಬಹಳ ಮುಖ್ಯವೆನಿಸುತ್ತದೆ. ಅವರು ಇಡಿ ತಮ್ಮ ಆಟಗಳ ಸಮಸ್ಥ

ಪಾತ್ರಗಳೆಲ್ಲವು ಕೂಡ ತಮ್ಮ ಹಿಡಿತದಲ್ಲಿಟ್ಟುಕೊಂಡು ತಮ್ಮ ಅಂಗಾಂಗಗಳೆಂದು ಅವುಗಳನ್ನು ಪೋಷಣೆ ಮಾಡಿಕೊಂಡು ಬಂದಿದ್ದಾರೆ ಎಂದು ಮುದೇನೂರು ಸಂಗಣ್ಣನವರು ಹೇಳಿರುವುದು ಸಮಂಜಸವೆನಿಸುತ್ತದೆ ಅದರಂತೆ ಚಿತ್ರಿತವಾಗಿವೆ ಎಂದು ಹೇಳಬಹುದಾಗಿದೆ.

ಇಂತಹ ಪ್ರತಿಭಾ ಸಂಪನ್ನ ಶಕ್ತಿ ಪ್ರತಿಯೊಬ್ಬರಲ್ಲಿ ಇರುವುದಿಲ್ಲ ದೇವೇಂದ್ರಪ್ಪನವರಲ್ಲಿ ಇಂತಹ ಶಕ್ತಿ ಇದೆ. ಯಾವುದೇ ಒಂದು ಶಕ್ತಿಯು ಮೂಡಿಬರಬೇಕಾದರೆ ಜನಪದ ಸಾಹಿತ್ಯವೇ ಮೂಲ ಬೇರಾಗಿ ಇನ್ನುಳಿದವೆಲ್ಲ ರೆಂಬೆ ಕೊಂಬೆಗಳಾಗಿ ಬೆಳೆದು ಬರುತ್ತವೆ. ಅದರಂತೆ ದೇವೇಂದ್ರಪ್ಪನವರ ಆಟಗಳಿಗೆ ತನ್ನ ಪ್ರೇಕ್ಷಕರೊಂದಿಗೆ ಮತ್ತು ಅವರ ಅನುಭವಗಳಿಗೆ ಹೊಂದಿಕೊಂಡು ಸಾಗುವಗುಣವಿದೆ ಇವರ ಆಟಗಳಲ್ಲಿ ಧಾರ್ಮಿಕ ದೃಷ್ಠಿಕೋನಕ್ಕಿಂತ ಲೌಕಿಕ ದೃಷ್ಠಿಕೋನವೇ ಹೆಚ್ಚಾಗಿರುವುದು ಕಾಣಬಹುದಾಗಿದೆ.

ಮಾನವ ತನ್ನ ಜೀವನದಲ್ಲಿ ಅರ್ಥವನ್ನು ಪಡೆಯಬೇಕಾದರೆ ಹುಟ್ಟಿದ್ದಕ್ಕೆ ಸಾರ್ಥಕವಾಗಬೇಕಾದರೆ ಈ ಭೂಲೋಕದಲ್ಲಿಯೇ ಹುಡುಕಬೇಕು ಅದು ಇಲ್ಲಿಯೇ ಸಿಗುತ್ತದೆ. ನ್ಯಾಯ ನೀತಿ, ವಿವೇಕ ಮುಂತಾದ ಇತ್ಯಾತ್ಮಕ ಜೀವನ ಮೌಲ್ಯಗಳನ್ನು ಕಂಡುಕೊಳ್ಳಲು ಸಾಧ್ಯ ಎಂಬುದನ್ನು ಇವರ ಆಟಗಳು ಮನವರಿಕೆ ಮಾಡಿಕೊಡುತ್ತವೆ ಮತ್ತು ಪ್ರಮಾಣಿಕ ಜೀವನವನ್ನು ನಡೆಸಲು ಇವು ಅನುವು ಮಾಡಿಕೊಡುತ್ತವೆ. ಮತ್ಯಾವುದನ್ನು ಇವು ನೀಡುವುದಿಲ್ಲವೆಂದೇ ಹೇಳಬಹುದಾಗಿದೆ.

ಇವರ ಆಟಗಳು ಮಾನವೀಯತೆಯ ಘನತೆಯನ್ನು ಎತ್ತಿ ಹಿಡಿಯುತ್ತವೆ. ಯಾರು ಈ ವ್ಯವಸ್ಥೆಯ ವಿರುದ್ದ ಹೋರಾಡುವರೋ ಅಂಥವರಿಗೆ ಉಳಿಗಾಲವಿಲ್ಲವೆಂಬುದನ್ನು ಅವರು ಆ ನರಕಯಾತನೆಯನ್ನು ಇಲ್ಲಿಯೇ ಅನುಭವಿಸಿ ಇಹಲೋಕವನ್ನು ತ್ಯಜಿಸುತ್ತಾರೆ ಎಂಬುದನ್ನು ದೇವೇಂದ್ರಪ್ಪನ ಆಟಗಳು ಮನವರಿಕೆ ಮಾಡಿಕೊಡುತ್ತವೆ. ಮುಖ್ಯವಾಗಿ ಇವರ ಆಟಗಳು ಸ್ತ್ರೀಯರನ್ನು ಕುರಿತು ಬಹಳ ಮೌಲ್ಯಯುತವಾದ ವಿಚಾರಗಳನ್ನು ಪ್ರತಿಬಿಂಬಿಸುತ್ತವೆ. ಈ ಆಟಗಳಲ್ಲಿ ಸ್ತ್ರೀಯೇ ಪ್ರಮುಖ ಪಾತ್ರವಾಗಿ ಕಂಡುಬರುವಂತಹದ್ದು ಅವರು ಅನುಭವಿಸುವ ನೋವು ಸಹಿಸುವ ಕಷ್ಟಗಳು ಯಾವ ಮಟ್ಟದ್ದು ಎಂಬುದನ್ನು ತಿಳಿಸುತ್ತವೆ. ಇಲ್ಲಿ ಒಳ್ಳೆಯದನ್ನು ಪತಿವ್ರತಾ ಸ್ತ್ರೀಯರನ್ನು ಮೇಲ್ವಗದವರ ರಾಕ್ಷಸಿ ಪ್ರವೃತ್ತಿ ಕಾಡುತ್ತವೆ ಅಥವಾ ಪೀಡಿಸುತ್ತವೆ ಎಂಬುದನ್ನು ತೋರಿಸುವ ಮೂಲಕ ವ್ಯಕ್ತಿ ಶೋಷಣೆ ರಾಗದ್ವೇಷಗಳಿಗೆ ಕುಲವರ್ಗಗಳ ಬೇಧವಿಲ್ಲವೆಂಬುದನ್ನು ಇಲ್ಲಿಯ ಆಟಗಳು ಪ್ರತಿಬಿಂಬಿಸುತ್ತವೆ.

ಕೌಟುಂಬಿಕ ಸಾಮಾಜಿಕ ಜೀವನದ ಸಂದರ್ಭದಲ್ಲಿ ಜನಸಾಮಾನ್ಯರು ಅನುಭವಿಸುವ ಕಷ್ಠ ನಷ್ಟಗಳು ಹೆಚ್ಚಿನ ರೀತಿಯವು ಅವೆಲ್ಲವನ್ನು ನಿಭಾಯಿಸಿಕೊಂಡು ಜೀವನದಲ್ಲಿ ಶ್ರದ್ದೆ ಸಂಯಮ ಬೆಳೆಸಿಕೊಂಡು ನಡೆಯುವುದು ಮುಖ್ಯವಾಗಿದೆ. ಅದಕ್ಕಾಗಿಯೇ ಗೊಂದಲಿಗರ

ದೇವೇಂದ್ರಪ್ಪನ ಆಟಗಳು ಅವರಿವರೆನ್ನದೇ ಇಡೀ ಜನ ಸಮುದಾಯದ ಒಳಿತಿಗಾಗಿ ಕಾಳಜಿ ತೋರಿಸುತ್ತಾ ಅವರ ಘನತೆಯನ್ನು ಎತ್ತಿ ಹಿಡಿಯುತ್ತ ಬಂದಿವೆ ಇವರ ಆಟಗಳು ಜನ ಸಾಮಾನ್ಯರಲ್ಲಿ ಧೈರ್ಯ, ಸಾಹಸ, ಕರ್ತವ್ಯ ಪ್ರಜ್ಞೆ, ಉದಾತ್ತತೆ, ಪ್ರೀತಿ, ಆತ್ಮವಿಶ್ವಾಸ, ದೈವಿಭಕ್ತಿಗಳನ್ನು ಪ್ರೇರೇಪಿಸಬಲ್ಲಂತಹವುಗಳಾಗಿವೆ ತಮ್ಮ ಪರಿಮಿತಿ ಪ್ರೇಕ್ಷಕ ಸಮಾಜಕ್ಕೆ ಅವರ ಸಾಮಾಜಿಕರಣ ಪ್ರಕ್ರಿಯೆಯಲ್ಲಿ ಮಹತ್ವದ ಬದಲಾವಣಿ ಮಾಡುವ ಸತ್ವವೂ ಅವುಗಳಿಗೆ ಇದೆ.



ಶ್ರೀ ಮುದೇನೂರು ಸಂಗಣ್ಣನವರು

ಶ್ರೀ ಮುದೇನೂರು ಸಂಗಣ್ಣನವರು

ಶ್ರೀ ಮುದೇನೂರು ಸಂಗಣ್ಣನವರು ಈಗಿನ ದಾವಣಗೇರಿ ಜಿಲ್ಲೆಯ ಅಪರೂಪದ ವ್ಯಕ್ತಿಯಾಗಿದ್ದಾರೆ. ಕೆಲವು ವ್ಯಕ್ತಿಗಳಿಂದಾಗಿ ಅವರ ಊರುಗಳಿಗೆ ಪ್ರಚಾರ ದೊರೆಯುತ್ತದೆ. ಚಿಗಟೇರಿ ಇಂಥದೊಂದು ಊರು ದಾವಣಗೇರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಒಳಮೂಲೆಯಲ್ಲಿರುವ ಚಿಗಟೇರಿ ಕರ್ನಾಟಕದ ಜನಪದ ಸಾಹಿತ್ಯಕ್ಕೆ ಅದರಲ್ಲಿ ದುಡಿಯುತ್ತಿರುವಂತಹ ಅನೇಕ ಸಾಹಿತಿಗಳಿಗೆ, ಕಲಾವಿದರಿಗೆ ಬುದ್ದಿಜೀವಿಗಳಿಗೆ ಮುದೇನೂರು ಸಂಗಣ್ಣನವರು ಚಿರಪರಿಚಿತರು ಮುದೇನೂರು ಸಂಗಣ್ಣನವರ ಆಕರ್ಷಣೆ ಅಂಥಹದ್ದು.

ಇವರು ಆಡಂಬರದ ವ್ಯಕ್ತಿಯಲ್ಲ ಸದಾ ಹಸನ್ಮುಕಿಗಳು ದೈಹಿಕವಾಗಿ ವಯಸ್ಸಾಗಿದ್ದರೂ ಮಾನಸಿಕವಾಗಿ ಹದಿನಾರರ ಹರೆಯ ತುಂಬುತುಳುಕಾಡುತ್ತದೆ ಅಷ್ಟರ ಮಟ್ಟಿಗೆ ಸಾಹಿತ್ಯದಲ್ಲಿ ಆಸಕ್ತಿಯನ್ನು ಹೊಂದಿದವರಾಗಿದ್ದಾರೆ. ಸಾಹಿತ್ಯವನ್ನು ಕುರಿತು ಅಪಾರ ಜ್ಞಾನ ಹೊಂದಿದ್ದಾರೆ. ಹೀಗಿದ್ದರೂ ಇವರಿಗೆ ಯಾವುದೇ ಹಮ್ಮಿಲ್ಲಿ ಬಿಮ್ಮಿಲ್ಲಿ ಇವರು ಶೃಜನ ಶೀಲತೆಗೆ ಹೆಚ್ಚಿನ ಮಹತ್ವ ಕೊಡುತ್ತಾರೆ ಅದರಂತೆಯೇ ಬದುಕು ಸಾಗಿಸುತ್ತಾರೆ.

ಸಾದಾ ಅಂಗಿ ದೋತರ, ಮೇಲೊಂದು ಶಾಲು, ಕ್ಷೌರ ಕಾಣದ ಮುಖ, ಇವರನ್ನು ನೋಡಿದ ಕೂಡಲೇ ರಿಟೈರ್ಡ್ ಶಾಲಾ ಮಾಸ್ತರನಂತೆ ಕಾಣುತ್ತಾರೆ. ಯಾರಾದರೂ ಅಪರಿಚಿತರು ನೋಡಿದರೆ ಆಶ್ಚರ್ಯವಾಗುವುದು ಸಹಜ. ಇವರನ್ನು ತೋರಿಸಿ ಇವರು ಮುದೇನೂರು ಸಂಗಣ್ಣನವರು ಎಂದು ಪರಿಚಯಿಸಿದರೆ ಅಪರಿಚಿತರಿಗೆ ಆಶ್ಚರ್ಯವಾಗದಿರದು ನಾನು ಈ ಮೊದಲು ಇವರ ಹೆಸರು ಕೇಳಿ ಇವರ ಬಗ್ಗೆ ಏನೇನೋ ಕಲ್ಪಿಸಿಕೊಂಡಿದ್ದೇ ಆದರೆ ಇವರ ಸರಳತೆ ಸಜ್ಜನತೆ ಇವರಲ್ಲಿರುವ ಅಪಾರ ಜ್ಞಾನ ಇವರಿಗಿರುವಂತಹ ಅಭಿರುಚಿ ವ್ಯಕ್ತಿತ್ವ ಎಲ್ಲವನ್ನು ನೋಡಿ ನಾನು ಸ್ವಲ್ಪ ಸಮಯದವರೆಗೆ ಮಂತ್ರ ಮುಗ್ಧನಾಗಿದ್ದೇ ಅಂತಹ ಮಹಾನ್ ಸಾಹಿತಿ, ಅಥವಾ ವಿದ್ವಾಂಸ ಇವರಲ್ಲಿ ಅಪಾರವಾದ ಜ್ಞಾನ ರಾಶಿಯೇ ಇದೆ. ೨೭-೪-೮೪ರಂದು ಹೂವಿನಹಡಗಲಿಯಲ್ಲಿ ನಡೆದ ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಅವರು ವ್ಯಕ್ತಪಡಿಸಿದ ಈ ಕೆಳಗಿನ ಅಭಿಪ್ರಾಯಗಳು ಚಿಂತನ ಶೀಲವಾಗಿವೆ "ಇದು ಜನತಾ ಯುಗ ಬರಹಗಾರ ಯಾರಿಗೆ ಬರೆಯುತ್ತಿದ್ದಾನೆಯೋ ಅವರಿಗೆ ಕೃತಿ ನೇರವಾಗಿ ಅರ್ಥವಾಗದಿದ್ದರೆ ವಾಚಕರ ಸಂಖ್ಯೆ ಹೆಚ್ಚಾಗಲಾರದು ಯಾವ ವಿದಾಯಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರದೆ ಬರಿಪ್ರತಿನಿಂದೆಯ ಮಾತಿನಲ್ಲಿ ಜಗದೋದ್ದಾರವಾಗುವುದು ಎನ್ನುವುದು ವಂಚನೆಯ ಕೆಲಸವೇ ಸಾಮಾಜಿಕ ಗತಿಶೀಲತೆಗೆ ತಕ್ಕಂತೆ ಪ್ರತಿಕ್ರಿಯಿಸಿ ಬರೆದ ನಮ್ಮ ಲೇಖಕ ಬಳಗದಿಂದ ಉತ್ತಮ ಕೃತಿಗಳನ್ನು ನಿರೀಕ್ಷಿಸಬಹುದು. ಸಾಹಿತ್ಯ ಕಲೆಗಳು ಕೇವಲ ಉತ್ಸವಗಳಲ್ಲಿ ಮಾತ್ರ ಬೆಳೆಯಲಾರವು ಸಾಹಿತ್ಯ ಚಳುವಳಿಂದ ದೈನಂದಿನ ನೂಕು

ನುಗ್ಗಲಿನಲ್ಲಿ ಬೆಳೆಯ ಬಲ್ಲುದು"[೧] ಇಂತಹ ಸ್ಪಷ್ಟ ನೇರ ಮತ್ತು ಅನುಭವ ಜನ್ಯ ಮಾತುಗಳನ್ನಾಡಿದರು ಎಂಬುದು ಅವರ ಜ್ಞಾನಾರ್ಜನೆಯ ಶಿಖರವನ್ನೇ ತೋರಿಸಿಕೊಡುತ್ತದೆ.

ದೂರದ ಚಿಗಟೇರಿಯಲ್ಲಿರುವ ಸಂಗಣ್ಣನವರು ಈ ನಾಡಿನ ಸಾಹತ್ಯ ಮಿತ್ರರಿಗೆ ತೀರಾಹತ್ತಿರದವರು ಇವರ ಮನೆ ಒಂದು ವಿದ್ಯಾಪೀಠ ಇವರು ಕನ್ನಡ, ಇಂಗ್ಲೀಷ್, ತೆಲುಗು, ಹಿಂದಿ, ಮರಾಠಿ, ಬಂಗಾಲಿಭಾಷೆಗಳ ಮಹತ್ವದ ಕೃತಿಗಳು ಮತ್ತು ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಅಪಾರವಾದ ಗ್ರಂಥರಾಶಿಯೇ ಇವರಲ್ಲಿದೆ ನೂರಾರು ತಾಸುಗಳಷ್ಟು ಕೇಳಬಹುದಾದ ಜಾನಪದ ಹಾಡುಗಳು ಬಯಲಾಟಗಳು, ಮತ್ತು ಶಾಸ್ತ್ರೀಯ ಸಂಗೀತಗಳ ಧ್ವನಿಸುರುಳಿಗಳನ್ನು ವ್ಯವಸ್ಥಿತಿವಾಗಿ ಇಟ್ಟುಕೊಂಡಿದ್ದಾರೆ. ಕರ್ನಾಟಕದಲ್ಲಿ ಯಾವುದೇ ಪುಸ್ತಕ ಪ್ರಕಟಣೆಯಾದರೂ ಬಹುಬೇಗನೆ ಅದನ್ನು ಖರೀದಿಸಿ ಓದುತ್ತಾರೆ. ಓದುವ ಹವ್ಯಾಸ ಹೆಚ್ಚಿನದಾಗಿದೆ. ಅನೇಕ ಸಾಹಿತ್ಯಿಕ

ಸಾಂಸ್ಕೃತಿಕ, ನಿಯತಕಾಲಿಕೆಗಳು, ವಿವಿಧ ಪತ್ರಿಕೆಗಳು ಅವರ ಕೋಣೆಯ ಟೀಪಾಯಿಯ ಮೆಲೆ ಹರಡಿರುತ್ತವೆ. ಇವರ ಮನೆಗೆ ಯಾರೆಬರಲಿ ಅದೇ ಆತ್ಮಿಯ ಆತಿಥ್ಯ, ಪ್ರೀತಿ ತುಂಬಿದ ಮಾತುಕತೆ ಅವರು ಅತಿಥಿ ಮಿತ್ರರ ಅಭಿರುಚಿಗೆ ತಕ್ಕಂತೆ ಸೊಗಸಾಗಿ ಮಾತನಾಡುತ್ತಾರೆ. ತಾವು ಓದಿದ ಹೊಸ ಪುಸ್ತಕಗಳ ಬಗ್ಗೆ ನೋಡಿದ ನಾಟಕಗಳ ಬಗ್ಗೆ ಕೇಳಿದ ಸಂಗೀತದ ಬಗ್ಗೆ ಸಹೃದಯ ವಿಮರ್ಶಕರಾಗಿ ಚರ್ಚಿಸುತ್ತಾರೆ. ಅವರ ಜೊತೆಗೆ ಮಾತನಾಡುವಾಗ ತಮ್ಮ ಅಪಾರ ಜ್ಞಾನದ ಬಗ್ಗೆಯಲ್ಲಿ ಎಳ್ಳಷ್ಟು ಆಹಂ ಕಾಣಿಸುವುದಿಲ್ಲ.

ಕಲೆ, ಸಾಹಿತ್ಯ ಜಾನಪದ, ರಂಗಭೂಮಿ, ರಾಜಕೀಯ, ಸಾಮಾಜಿ ವಿಷಯಗಳ ಬಗ್ಗೆ ಸ್ವಾರಸ್ಯಕರವಾಗಿ ಮಾತನಾಡುತ್ತಾರೆ. ಮಧ್ಯದಲ್ಲಿ ಉದಾಹರಣೆ ಸಮರ್ಥನೆಗಾಗಿ ಪತ್ರಿಕೆ, ಪುಸ್ತಕಗಳ ವಿವರಣೆಯನ್ನು ನೀಡುತ್ತಾರೆ. ಆಗಾಗ ಟೇಪುಗಳ ನಾದ ಸವಿ ಹಾಗೂ ರೇಡಿಯೋ ಕೇಳುವುದು ನಾವು ಕಾಣಬಹುದಾಗಿದೆ.

ಮುದೇನೂರು ಸಂಗಣ್ಣನವರು ಹುಟ್ಟಿದ್ದು ೧೯೨೭ರಲ್ಲಿ ಇವರ ತಂದೆ ಕೊಟ್ರಬಸವಪ್ಪವರು ಇವರು ತಮ್ಮ ಪ್ರಾಥಮಿಕ ಶಿಕ್ಷಣ ಚಿಗಟೇರಿಯಲ್ಲಾಯಿತು. ಹೈಸ್ಕೂಲ್ ವಿದ್ಯಾಭ್ಯಾಸವನ್ನು ಹರಪನಹಳ್ಳಿಯಲ್ಲಿ ಇವರು ೮ವರ್ಷದ ವಿದ್ಯಾರ್ಥಿ ಇದ್ದಾಗಲೇ ಪದ್ಯ ಬರೆಯುವ ಹವ್ಯಾಸ ಈ ಹವ್ಯಾಸಕ್ಕೆ ಹರಪನಹಳ್ಳಿ ಹೈಸ್ಕೂಲ್ ಬಹಳಷ್ಟು ನೆರವಾಯಿತು. ಚಿಗಟೇರಿಯಲ್ಲಿ ತರುಣ ವಿದ್ಯಾರ್ಥಿ ಮಿತ್ರರು ಒಂದು ಗ್ರಂಥಾಲಯ ಪ್ರಾರಂಭಿಸಿದಾಗ ಅದಕ್ಕೆ ಹೈಸ್ಕೂಲ್ ವಿದ್ಯಾರ್ಥಿ ಸಂಗಣ್ಣನವರು ಒಂದು ಸಾವಿರ ಪುಸ್ತಕಗಳನ್ನು ದಾನವಾಗಿ ನೀಡಿದರಂತೆ ಇವು ಅವರ ಉದಾರತೆಗೆ ಮತ್ತು ಜ್ಞಾನಾರ್ಜನೆಗೆ ಸಾಕ್ಷಿಯಾಗಿದೆ.

ಸಂಗಣ್ಣನವರು ಕಾಲೇಜ್ ವಿದ್ಯಾಭ್ಯಾಸ ಮದನಪಲ್ಲಿಯಲ್ಲಿ ತೆಲುಗುಭಾಷೆ ಸಾಹಿತ್ಯಗಳ ಅಧ್ಯಯನಕ್ಕೆ ಅಲ್ಲಿ ಅವಕಾಶ ದೊರೆಯಿತು ಸಂಗಣ್ಣನವರು ಈ ದಿನಗಳಲ್ಲಿ ಅರವಿಂದರ ಪ್ರಭಾವಕ್ಕೆ ಒಳಗಾದರು ಆಗ ಮನೆಯ ಜವಬ್ದಾರಿಯನ್ನು ಅವರ ತಂದೆ ಮನೆಯ ಜವಾಬ್ದಾರಿಯನ್ನು ಸಂಗಣ್ಣನವರಿಗೆ ವಹಿಸಿದ್ದರಿಂದ ಸಂಗಣ್ಣನವರು ಡಿಗ್ರಿ ಪಡೆಯದೆ ಮನೆಗೆ ಮರಳಿದರು ಆಗಾಗಲೇ ಅವರು ತನ್ನ ಇಡಿ ಬದುಕಿಗಾಗುವಷ್ಟು ಬೌದ್ಧಿಕ ಹಸಿವನ್ನು ವಿವಿಧ ಭಾಷೆಗಳ ಅಪಾರಜ್ಞಾನವನ್ನು ತಮ್ಮ ಸಂಗಡ ತಂದಿದ್ದರು ನಂತರ ಇವರು ೧೯೩೨ರಲ್ಲಿ ತಂಬಾಕದ ದಲ್ಲಾಲಿ ವ್ಯಾಪಾರ ಪ್ರಾರಂಭಿಸಿದರು ಈ ವ್ಯಾಪಾರವು ನಿಪ್ಪಾಣಿ ಸಂಪರ್ಕ ಕಲ್ಪಿಸಿತು ಆಗ ಅವರ ಸ್ನೇಹಿತರೊಂದಿಗೆ ಮರಾಠಿಯ ಸಾಹಿತ್ಯದ ಪರಿಚಯವಾಯಿತು ಆಗ ಮರಾಠಿ ನಾಟಕಗಳನ್ನು ಅನುವಾದಿಸಬೇಕೆಂದು ಕೊಂಡಿದ್ದರಂತೆ ಇವರು ತಾರುಣ್ಯದಲ್ಲಿ 'ಜಯಂತಿ' 'ಸ್ವಾತಂತ್ರ' ಮುಂತಾದ ಪತ್ರಿಕೆಗಳ ಖಾಯಂ ಲೇಖಕರಾಗಿ ಕಥೆ ಕವನಗಳನ್ನು ಸಾಕಷ್ಟು ರಚಿಸಿದ್ದಾರೆ.

'ಚೌತಿಚಂದ್ರ' ಎಂಬ ನಾಟಕವು ಪ್ರಗತಿಪರ ದೊರಣೆಯನ್ನು ಹೊಂದಿದ್ದಾಗಿದೆ. ಇವರ ಅನುವಾದಿತ ಕೃತಿಗಳು 'ಭಾರತದ ಪ್ರೇಮ ಕಥೆಗಳು' ಮತ್ತು 'ರವೀಂದ್ರರ ಕಥನ ಕವನಗಳು' ಇವು ಮುದೇನೂರು ಸಂಗಣ್ಣನವರ ಬಂಗಾಲಿ ಅನುವಾದಗಳು, ಅನೇಕ ಪತ್ರಿಕೆಗಳಿಗೆ ಕವನಗಳನ್ನು ಬರೆದಿದ್ದಾರೆ ಮತ್ತು 'ಬೆನ್ನ ಹಿಂದಿನ ಬೆಳಕು' ಕವನ ಸಂಗ್ರಹದಲ್ಲಿ ಇವರ ಕವನಗಳಿವೆ.

ಜಾನಪದಕ್ಕೆ ಸಂಬಂಧಿಸಿದಂತೆ ಅನೇಕ ಕೃತಿಗಳನ್ನು ಅಧ್ಯಯನ ಮಾಡಿದ್ದಾರೆ. ಜಾನಪದ ಸಂಗ್ರಹಗಳನ್ನು ಮಾಡಿದ್ದಾರೆ. ಜಾನಪದ ಹಾಡುಗಳನ್ನು ಕತೆಗಳು ಆಟಗಳು ಮತ್ತು ರಂಗಭೂಮಿಗೆ ಸಂಬಂಧಿಸಿದಂತವುಗಳನ್ನು ಸಂಗ್ರಹಿಸಿ ಸಂಪಾದಿಸಿದ್ದಾರೆ. ಹಾಗೆ ಸಂಗ್ರಹಿಸಿ ಸಂಪಾದಿಸಿದ ಕೃತಿಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ನವಿಲು ಕುಣಿದಾವ ಕಥಾ ಸಂಕಲನ ಸ್ವಾತಂತ್ರ್ಯ ಪೂರ್ವದಲ್ಲಿ ಹೊರಬಂದ ಕೃತಿಯಾಗಿದೆ.

೧. ನವಿಲು ಕುಣಿದಾವ (ಅಕ್ಷರ ಪ್ರಕಾಶ ಹೆಗ್ಗೋಡು, ೧೯೬೯)

೨. ಲಕ್ಷಾಪತಿ ರಾಜನ ಕತೆ (ಬೆಂಗಳೂರು ವಿಶ್ವವಿದ್ಯಾಲಯ)

೩. ಚಿತ್ರಪಟ ರಾಮಾಯಣ (ಜಾನಪದ ರಂಗಕಲೆಗಳ ಕೇಂದ್ರ, ಉಡುಪಿ- ೧೯೮೩)

೪. ಗೊಂದಲಿಗರ ದೇವೇಂದ್ರಪ್ಪನ ಆಟಗಳು (ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩)

೫. ಗೊಂಬಿಗೌಡರ ಸೂತ್ರದ ಗೊಂಬೆ ಆಟಗಳು (ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೯೯೫)

೬. ಜನಪದ ಮುಕ್ತಕಗಳು (ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು–೧೯೯೬)

ಇವರ ಕೃತಿಗಳನ್ನು ಪ್ರಕಟಿಸಿದ ಎಲ್ಲಾ ಪ್ರಕಟನಾ ಸಂಸ್ಥಾನಗಳ ಕರ್ನಾಟಕದಲ್ಲಿ ಪ್ರತಿಷ್ಠಿತ ಸಂಸ್ಥಗಳಾಗಿವೆ. ಇದರಿಂದ ಇವರ ಸಂಗ್ರಹಗಳು ಮಹತ್ವವು ಎದ್ದುಕಾಣುತ್ತದೆ.

ಮುದೇನೂರು ಸಂಗಣ್ಣನವರು ಸಾಹಿತ್ಯ ಆಸಕ್ತಿಯಲ್ಲದೇ ವಿವಿಧ ರಂಗಗಳಲ್ಲಿ ಅಭಿರುಚಿಯನ್ನು ಹೊಂದಿದ್ದಾರೆ. ಅದರಂತೆ ಅನೇಕ ರೀತಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಇದಕ್ಕೆ ಗೌರವಗಳು ಸಂದಿವೆ.

* ೧೯೮೪ ರಿಂದ ೧೯೮೯ರವರೆಗೆ ಕರ್ನಾಟಕದ ಜಾನಪದ ಅಕಾಡಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.
* ೧೯೮೯ ರಲ್ಲಿ ಇವರ ಸೇವೆಯನ್ನು ಗಮನಿಸಿ ಕರ್ನಾಟಕ ನಾಟಕ ಅಕಾಡೆಮಿ, ಫೆಲೋಶಿಪ್ ನೀಡಿ ಗೌರವಿಸಿದೆ.
* ೧೯೯೨ ರಲ್ಲಿ ಸಾಲಿನ ಪುರಸ್ಕಾರ ನೀಡಿ ಗೌರವಿಸಿದೆ.
* ೧೯೮೪ರ ಅಂದರೆ ದಿನಾಂಕ ೨೭-೦೪-೮೪ರಂದು ಹೂವಿನ ಹಡಗಲಿಯಲ್ಲಿ ನಡೆದ ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.
* ೧೯೫೭ರಲ್ಲಿ ಗ್ರಾಮ ಪಂಚಯಿತಿ ಚೇರಮನ್ ಆಗಿ ಚಿಗಟೇರಿ ಗ್ರಾಮದಲ್ಲಿ ಸೇವೆಸಲ್ಲಿಸಿದ್ದಾರೆ.

ಇಲ್ಲಿ ಮುಖ್ಯವಾಗಿ ನಾವು ಗೊಂದಲಿಗರನ್ನು ಆದರಿಸಿ ಅವರ ಆಟಗಳಲ್ಲಿ ದೇವೇಂದ್ರಪ್ಪನ ಆಟಗಳನ್ನು ಆಧರಿಸಿ ನೋಡುವುದಾದರೆ ಗೊಂದಲಿಗರ ಆಟದ ಪ್ರಸ್ತುತ ಪಠ್ಯಗಳಂತಹ ಮುದೇನೂರ ಸಂಗಣ್ಣನವರ ಪರಿಶ್ರಮದಿಂದ ರೂಪಗೊಂಡವುಗಳಾಗಿವೆ ಎಂದು ಡಾ.ವೀರಣ್ಣದಂಡೆಯವರು ಅಭಿಪ್ರಾಯ ಪಡುತ್ತಾರೆ. ಅದರಂತೆ ಮುಂದುವರೆದು ಗೊಂದಲಿಗರು ಕಥೆಗಳು ಬೇರೆ ವಿದ್ವಾಂಸರುಗಳಿಂದಲೂ ಸಂಗ್ರಹಗೊಂಡಿದ್ದು ಅವೆಲ್ಲ ಜನಪದ ಕತೆಗಳ ರೂಪದಲ್ಲಿ ಪ್ರಕಟಗೊಂಡಿವೆ. ಇಲ್ಲಿ ಮುದೇನೂರ ಸಂಗಣ್ಣನವರು ಕಥೆಗಳನ್ನು ಗೊಂದಲಿಗರು ನಾಟಕೀಯವಾಗಿ ಪ್ರದರ್ಶಿಸುವ ರೀತಿಯನ್ನು ಮುಖ್ಯವಾಗಿ ಗ್ರಹಿಸಿದ್ದಾರೆ ಗಮನಿಸಿದ್ದಾರೆ. ಅವರ ನಾಟಕಕಾರನ ಪ್ರತಿಭೆ ಗ್ರಹಿಸಿದ ಮತ್ತು ದಾಖಲಿಸಿದ ಕ್ರಮದಿಂದಾಗಿ ಸಾಮಾನ್ಯವಾಗಿ "ಗೊಂದಲಿಗರು ಹೇಳುವ ಕಥೆಗಳಾಗಿ ಹೋಗಬಹುದಾದವು. ಗೊಂದಲಿಗರ ಆಟಗಳಾಗಿ ಪರಿವರ್ತನೆ ಹೊಂದಿವೆ ಇವರು ಕೇವಲ ಕಥೆಗಳೆಂದು ಗ್ರಹಿಸದೆ 'ಪ್ರಸಂಗ'ಗಳೆಂದು ಗ್ರಹಿಸಿದ

ಫಲವಾಗಿ ಜನಪದ ರಂಗಭೂಮಿ ಪ್ರದರ್ಶನ ಪಠ್ಯಕ್ಕೆ ಒಂದು ಹೊಸಬಗೆಯ ಪಠ್ಯ ಪ್ರಕಾರ ಸೇರಿದಂತಾಗಿದೆ ಮತ್ತೆ ಒಂದು ಹೊಸಬಗೆಯ ಆಟವೂ ತಕ್ಕಂತೆ ಹಿಡಿಯುವಂತಾಗಿದೆ" ಎಂದಿರುವುದು ಬಹಳ ಸಮಂಜಸವಾಗಿದೆ ಇಂತಹ ಒಂದು ಕಾರ್ಯವನ್ನು ಮಾಡಿದವರೆಂದರೆ ಮುದೇನೂರು ಸಂಗಣ್ಣನವರು.

ಹೀಗೆ ಮುದೇನೂರು ಸಂಗಣ್ಣನವರು ದೇವೇಂದ್ರಪ್ಪನ ಆಟಗಳನ್ನು ಸಂಗ್ರಹಿಸಿ. ಆ ಕಲಾವಿದನನ್ನು ಜನಮಾನಸದಲ್ಲಿ ಉಳಿಯಂತೆ ಮಾಡಿದ್ದಾರೆ, ಮತ್ತು ಜನಪದ ಸಾಹಿತ್ಯಕ್ಕೆ ಅಭೂಪೂರ್ವವಾದ ಕಾಣಿಕೆಯನ್ನು ನೀಡಿದ್ದಾರೆ. ಇಂತಹ ಇನ್ನು ಅನೇಕ ಕಲಾವಿದರನ್ನು ಬೆಳಕಿಗೆ ತರುವ ಹಿನ್ನೆಲೆಯಲ್ಲಿ ಅವರಲ್ಲಿರುವಂತಹ ಪ್ರತಿಭೆಯನ್ನು ಸಾಹಿತ್ಯವನ್ನು ಹೊರಗೆಳೆಯುವಂತಹದ್ದು, ವಿಶ್ವವಿದ್ಯಾಲಯದಲ್ಲಿ ನಡೆಯಬೇಕಾಗಿದೆ. ಹೀಗೆ ಇಂತಹ ಕಾರ್ಯಗಳಿಗೆ, ಸಂಶೋಧನೆಗೆ ತೊಡಗಿಸುತ್ತಾ ಜನಪದ ಸಾಹಿತ್ಯದ ಉಳಿವಿಗೆ ಶ್ರಮಿಸುವುದು ಅಗತ್ಯವಾಗಿದೆ ಎಂದು ಹೇಳಬಹುದಾಗಿದೆ.

ಅಡಿ ಟಿಪ್ಪಣಿಗಳು

೧. ಸೂರ್ಯಕಾಂತಿ ಸ್ಮರಣ ಸಂಚಿಕೆ ೮ನೇ ಕನ್ನಡ ಸಾಹಿತ್ಯ ಸಮ್ಮೇಳನ ೧೯೯೩ (ಕನ್ನಡ ಸಾಹಿತ್ಯ ಪರಿಷತ್ತು ನೇತಾಜಿ ರಸ್ತೆ, ರಾಮನಗರ, ಹ.ಬೊ.ಹಳ್ಳಿ ೫೮೩೨೦೨) ಪುಟ ಸಂಖ್ಯೆ–೧೫

೨. ಮೌಖಿಕ ಡಾ.ವೀರಣ್ಣದಂಡೆ (ಕವಿಮಾರ್ಗ ಪ್ರಕಾಶನ ತೇಜಶ್ವಿನಿ ಸ್ವರಸ್ವತಿಪುರ, ವಿಶ್ವವಿದ್ಯಾಲಯ ಅಂಚೆ, ಗುಲಬರ್ಗಾ–೫೮೫೧೦೬) ಪುಟ ಸಂಖ್ಯೆ–೧೧೫

೩. ಸೂರ್ಯಕಾಂತಿ ಸ್ಮರಣ ಸಂಚಿಕೆ, ೮ನೇ ಸಾಹಿತ್ಯ ಸಮ್ಮೇಳನ, ೧೯೯೩ (ಕನ್ನಡ ಸಾಹಿತ್ಯ ಪರಿಷತ್ತು, ನೇತಾಜಿ ರಸ್ತೆ, ಹ.ಬೊ.ಹಳ್ಳಿ) ಪುಟ ಸಂಖ್ಯೆ–೧೭

ಅಧ್ಯಾಯ-ಮೂರು

ಸಣ್ಣಾಟಗಳ ಪ್ರಾಚೀನತೆ

ಅಧ್ಯಾಯ-ಮೂರು

ಸಣ್ಣಾಟಗಳ ಪ್ರಾಚೀನತೆ

ಸಣ್ಣಾಟವೆಂದು ಗುರುತಿಸಲ್ಪಡುವ ಈ ಡಪ್ಪಿನಾಟವು ಕಳೆದ ಶತಮಾನದ ಉತ್ತರಾರ್ಧದಲ್ಲಿ ಹುಟ್ಟಿ ಬೆಳಕಿಗೆ ಬಂದಿರುವಂತಹದ್ದು ಡಪ್ಪಿನ ವಾದ್ಯದೊಂದಿಗೆ ಸಾಗುವ ಹಾಡುಗಳನ್ನೊಳಗೊಂಡ ಬಯಲಾಟ ಡಪ್ಪಿನಾಟ ಎಂದು ಕರೆಯಲಾಗುತ್ತಿವೆ. ಆಳವಾಗಿ ವಿಚಾರಿಸಿದರೆ ಈ ಪದ ಅರ್ಥಪೂರ್ಣವಾಗಿರುವುದು ತಿಳಿದುಬರುತ್ತದೆ. ಈ ಡಪ್ಪನ್ನು ಬಳಸಿಕೊಂಡು ಪ್ರಯೋಗಿಸಲ್ಪಟ್ಟ ಆರಂಭದ ಬಯಲಾಟಗಳು ಬರಿಹಾಡುಗಳ ಸರಮಾಲೆಯನ್ನು ಹೊಂದಿವೆ. ಈ ಹಾಡುಗಳ ವಿಶಿಷ್ಟಲಯ, ಧಾಟಿಗಳು, ಡಪ್ಪಿನ ಗತ್ತಿನೊಂದಿಗೆ ಸಾಮರಸ್ಯ ಪಡೆದಿರುವಂತಹವು. ಈ ಹಾಡುಗಳಿಗೆ ಡಪ್ಪೇ ಬೇಕು ಇತರ ವಾದ್ಯಗಳು ಅವುಗಳ ಸೌಂದರ್ಯವನ್ನು ಕೆಡಿಸಿಬಿಡುತ್ತವೆ. ಇಲ್ಲಿ ಗೀತಗುಣ ಮತ್ತು ವಾದ್ಯಗುಣಗಳೆರಡೂ ಸೇರಿಕೊಂಡಿರುವುದರಿಂದ ಒಂದು ರೀತಿಯ ಅನನ್ಯತೆಯನ್ನು ಹೊಂದಿರುವುದರಿಂದ 'ಡಪ್ಪಿನಾಟ' ಎಂಬ ಶಬ್ದವು ವಾದ್ಯ ಗೀತ ರಂಗಭೂಮಿ ಇವುಗಳನ್ನೊಳಗೊಂಡು ವಿಶಾಲವಾದ ಅರ್ಥವನ್ನು ಒಳಗೊಂಡಿದೆ.

ಡಪ್ಪಿನಾಟಕ್ಕೆ ಸಣ್ಣಾಟವೆಂದು ಹೆಸರುಬಂದದ್ದು ಡಪ್ಪನಾಟದ ಬೆಳವಣಿಗೆಯ ದ್ವಿತಿಯ ಹಂತದಲ್ಲಿ ಅಂದರೆ ಈ ಶತಮಾನದ ಎರಡನೆಯ ದಶಕದಿಂದೀಚೆಗೆ ಮೂಡಲಪಾಯದಿಂದ ಡಪ್ಪಿನಾಟವನ್ನು ಬೇರ್ಪಡಿಸಿ ಸೂಚಿಸಬೇಕಾದ ಅವಶ್ಯಕತೆಯೇ ಸಣ್ಣಾಟ ಪದದ ಜನ್ಮಕ್ಕೆ ಕಾರಣವಾಯಿತು ರಂಗಸಜ್ಜಿಕ್ಕೆ ವೇಷಭೂಷಣ ಕಥಾ ವಸ್ತುಗಳ ದೃಷ್ಠಿಯಿಂದ ಭವ್ಯ ಪ್ರದರ್ಶನವಾಗಿ ಮರೆದು ದೊಡ್ಡದಾಗಿ ಕಂಡ ಈ ಮೂಡಲಪಾಯ ದೊಡ್ಡಾಟವಾಯಿತು ಆದರೆ ಸರಳ ಮತ್ತು ಸುಲಭ ಪ್ರದರ್ಶನವಾದ ಡಪ್ಪಿನಾಟ ಭವ್ಯರಂಗಭೂಮಿಯ ಮೇಲೆ ಸಣ್ಣದಾಗಿ ಕಂಡು ಸಣ್ಣಾಮಾಯಿತು. ಆದರೆ ಈ ಸಣ್ಣಾಟ ಎಂಬ ಪದವು ಬಹಳ ಕಡಿಮೆ

ಪ್ರದೇಶದಲ್ಲಿ ಬಳಕೆಯಲ್ಲಿದೆ. ಬೆಳಗಾವಿ ಜಿಲ್ಲೆಯ ಕೆಲವು ಭಾಗಗಳನ್ನು ಬಿಟ್ಟರೆ ಉಳಿದೆಡೆ ಇದು ಅಪರಿಚಿತ ಉತ್ತರಕರ್ನಾಟಕದ ಪ್ರದೇಶಗಳಲ್ಲಿ 'ಡಪ್ಪಿನಾಟ' ಎಂಬ ಹೆಸರಿನಲ್ಲಿ ಪ್ರಸಿದ್ಧಿ ಪಡೆದಿದೆ.

ಕಳೆದ ಶತಮಾನದ ಉತ್ತಾರಾರ್ಧವು ಉತ್ತರಕರ್ನಾಟಕದ ಜನಪದ ರಂಗಭೂಮಿಗೆ ಹೊಸ ಹುಟ್ಟು ಕೊಟ್ಟ ಅವಧಿ ಅನೇಕ ವಿವಿಧ ಸಾಂಸ್ಕೃತಿಕ ಬದಲಾವಣೆಗಳು ಆಗ ಘಟಿಸಿದವು. ಹೊಸ ಶೈಲಿ ಪ್ರಕಾರಗಳು ಜನ್ಮ ತಾಳಿದವು ಇವುಗಳಲ್ಲಿ ಈ ರೀತಿಯ ಬದಲಾವಣೆಯನ್ನು ಪಡೆದುಕೊಂಡಿರುವುದರಲ್ಲಿ ಡಪ್ಪಿನಾಟವು ಒಂದು "ಹಿರಿಯರ ಹೇಳಿಕೆಯ ಆಧಾರದ ಮೇಲೆ ಹೇಳುವುದಾದರೆ ಡಪ್ಪಿನಾಟದ ಪ್ರಾಚೀನತೆ ೧೮೬೦ರ ಅವಧಿಯನ್ನು ಹೆಚ್ಚು ಹಿಂದಕ್ಕೆ ಸರಿಯಲಾರದು. ಈ ಡಪ್ಪಿನಾಟವು ತನ್ನದೇ ಆದ ಸ್ವರೂಪವನ್ನು ಪಡೆದುಕೊಂಡಿದ್ದು, ೧೮೮೦ರಿಂದ ೧೯೦೦ರ ನಡುವಿನ ಅವಧಿಯಲ್ಲಿ ಈ ಹೊತ್ತಿಗಾಗಲೇ ಡಪ್ಪಿನಾಟವು ಒಂದು ರಂಗಪ್ರಕಾರವಾಗಿ ಬೆಳವಣಿಗೆಯನ್ನು ಪಡೆದುಕೊಂಡಿತ್ತು. ಮೂಡಲಪಾಯ ಮತ್ತು ಡಪ್ಪಿನಾಟ ಇವೆರಡೂ ಜೊತೆಜೊತೆಗೆ ಬೆಳದು ಬಂದಿವೆ. ಆದ್ದರಿಂದ ಮೂಡಲಪಯ ಬೆಳೆದು ನಿಂತಮೇಲೆ ಡಪ್ಪಿನಾಟದ ಜನನವಾಯಿತೆಂದು ಎಂದು ಹೇಳುವುದು ತಪ್ಪಾಗುತ್ತದೆ. ಈ ಡಪ್ಪನಾಟದ ಉದಯಕ್ಕೆ ಪಕ್ಕದ ಮಹಾರಾಷ್ಟ್ರದ ತಮಶಾ ಮತ್ತು ಈ ನಾಡಿನ ದಾಸರಾಟಗಳು ಪ್ರೇರಣೆ ನೀಡಿವೆ ಅವೆರಡರ ಪ್ರೇರಣೆ ಪ್ರಭಾವ ಸಮ್ಮಿಶ್ರಣದಿಂದ ಡಪ್ಪಿನಾಟದ ರಸರಾಸಾಯನ ಹುಟ್ಟಿತು."[೧]

ಈ ಆಟಗಳ ಪ್ರಾಚೀನತೆಯನ್ನು ನೋಡುವುದಾದರೆ ಈ ಆಟಗಳನ್ನು ಎರಡು ಘಟ್ಟಗಳಾಗಿ ವಿಭಾಗಿಸಿದ್ದಾರೆ. ಆರಂಭದಿಂದ ಈ ಶತಮಾನದ ಎರಡನೆಯ ದಶಕದವರೆಗೆ ಪ್ರಥಮ ಘಟ್ಟ ಅಲ್ಲಿಂದೀಚೆಗೆ ದ್ವಿತೀಯ ಘಟ್ಟ ಪ್ರಾರಂಭದ ಅವಧಿಯಲ್ಲಿ ಗೀತನಾಟಕಗಳು ಡಪ್ಪಿನಾಟಗಳಾಗಿದ್ದವು.

ಸಣ್ಣಾಟ ಬಡವರ ಆಟ ಸಮಾನ್ಯರ ಆಟ ಸಾಮಾನ್ಯವಾಗಿ ಪ್ರಾರಂಭದಿಂದಲೂ ಶಿಷ್ಠ ಸಂಪ್ರದಾಯದಲ್ಲಿ ಜನಪದ ರಂಗಭೂಮಿ ಮತ್ತು ತೋಂಡಿ ಸಂಪ್ರದಾಯದ ರಂಗಭೂಮಿ ಕಂಡುಬರುತ್ತದೆ ಜನಪದ ಇದು ಕಂಠಸ್ಥಾನುಕರಣೆಯಲ್ಲ ಅದಕ್ಕೆ ಅದರದೇ ಆದ ನಂಬಿಕೆ ಸಂಪ್ರದಾಯಗಳ ಬದಲಾವಣೆಯನ್ನು ಜನಪದ ಬಳಸುವುದಿಲ್ಲ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಸಂಪ್ರದಾಯಗಳಿಗೆ ಬಹಳ ನಿಷ್ಠವಾಗುತ್ತವೆ. ಅರ್ಥ ತಿಳಿಯದಿದ್ದರೂ ಅಂದ ಶ್ರದ್ದೆ ಜಾಗೃತವಾಗಿರುತ್ತದೆ. ಬಹುಶಃ ಭಕ್ತಿಯ ಚಳುವಳಿಯೆಂದರೆ, ಶಿವ, ವೈಷ್ಣವ ಸಂಪ್ರದಾಯದಿಂದ ಭಕ್ತಿ ಚಳುವಳಿಗಳು ಬಂದಿವೆ. ಈ ಹಿನ್ನಲೆಯಲ್ಲಿ ಬೆಳಗಾವಿಯಲ್ಲಿ ಈ ಸಣ್ಣಾಟಗಳ ತಮ್ಮ ಸ್ಥಾನವನ್ನು ಪಡೆದುಕೊಂಡು ಈ ಚಳುವಳಿಗಳು ಸಣ್ಣಾಟಗಳ ಹುಟ್ಟಿಗೆ

ಪ್ರಮುಖ ಪಾತ್ರವಹಿಸಿದವು, ಹೆಚ್ಚಾಗಿ ಸಣ್ಣಾಟಗಳು ವೈಷ್ಣವ ಪ್ರಭಾವದಿಂದಲೇ ಬೆಳೆದು ಬಂದಿವೆ. ಆದರೆ ಕಾಲಾನಂತರದಲ್ಲಿ ಅವು ಬದಲಾಗಿ ಜನರಲ್ಲಿ ತಮ್ಮ ಸ್ಥಾನವನ್ನು ಗಿಟ್ಟಿಸಿಕೊಂಡವೆಂದು ಹೇಳಬಹುದು, ಈ ಹಿನ್ನಲೆಯಲ್ಲಿಯೇ ಈ ಡಪ್ಪಿನಾಟಗಳು, ಬೆಳವಣಿಗೆ ಪಡೆದುಕೊಂಡವು,

ಯಾವಾಗ ಧರ್ಮದಲ್ಲಿ ಕರ್ಮಕಾಂಡ ಬೆಳೆದು ಆಚಾರ, ಸಂಪ್ರದಾಯ ಹತ್ತಿರವಾದಾಗ ಜನರಲ್ಲಿ ವಿರೋಧ ಬಾವಗಳ ಉದ್ದಬವಿಸುತ್ತವೆ. ಆಗ ದೇವರು ಮಾರುಕಟ್ಟೆಯ ವಸ್ತುವಾಗುತ್ತಾನೆ ಇದನ್ನು ಪುನರ್ ವಿಮರ್ಶಿಸಲು ಈ ಭಕ್ತಿ ಚಳುವಳಿ ಬಂದಿದ್ದಾಗಿದೆ. ಧರ್ಮ ಶಾಂತಿಶೀಲವಾದಾಗ ಅದನ್ನು ಚಲನಗೊಳಿಸಲು ಆದಂತಹ ಚಳುವಳಿ ಚಲನ ವಲನದ ಪರಿಸ್ಕಾರವೆಂದು ತಿಳಿದುಬರುತ್ತವೆ. ಅಲ್ಲಿದ್ದ ವಸ್ತುಗಳನ್ನು ಆ ವಸ್ತುವಿನ ಮಹಿಮೆಯನ್ನು ತಿಳಿಯುವ ಪದೇ ಪದೇ ಅದನ್ನು ಸ್ಮರಿಸುವ ರೀತಿಯಲ್ಲಿ, ಸಣ್ಣಾಟಗಳು ಬೆಳೆದುಬಂದವು ಒಂದು ರೂಪವನ್ನು ಆರಾಧ್ಯ ದೈವವೆಂದು ಪೂಜಿಸುವುದು ಒಂದು ಆಸಕ್ತಿಯಾಗಿದ್ದು ಉತ್ತರ ಕರ್ನಾಟಕದಲ್ಲಿ ದೊಡ್ಡಾಟಕ್ಕೆ ಭಿನ್ನವಾಗಿ ಈ ಸಣ್ಣಾಟಗಳು ಬೆಳಕಿಗೆ ಬಂದವು.

ಈ ಸಣ್ಣಾಟಗಳು ಹೆಸರೇ ಸೂಚಿಸುವಂತೆ ರಂಗಭೂಮಿ ಚಿಕ್ಕದು, ಪಾತ್ರಗಳು ಕಡಿಮೆ, ವೇಷಭೂಷಣ ಕಡಿಮೆ ಶ್ರೀ ಕೃಷ್ಣ ಪಾರಿಜಾತವನ್ನು ಸಣ್ಣಾಟದ ರಾಜನೆಂದು ಕರೆಯಲಾಗುತ್ತದೆ. ಇದನ್ನು ಒಂದು ಕಡೆಗೆ ಸಣ್ಣಾಟ ಇನ್ನೊಂದು ಕಡೆ ದಾಸರಾಟವೆಂದು ಕರೆಯುತ್ತಾರೆ. ಇದು ಬಂದ ನಂತರ ೧೦X೧೦ ಅಡಿ ವಿಸ್ತೀರ್ಣತೆಯನ್ನು ಹೊಂದಿದ್ದು ಒಂದು ಕಡೆ ತಬಲ ಮಾಸ್ತರ ಮತ್ತು ಇನ್ನೊಂದು ಕಡೆ ಪೇಟಿ ಮಾಸ್ತರ ಹೀಗೆ ರಂಭೂಮಿಯ ವ್ಯವಸ್ಥೆ ಕಂಡುಬರುತ್ತದೆ. ಅಪರಾಳ ತಮ್ಮಣ್ಣ ಈ ಕಥೆಯನ್ನು ಬರೆಯುತ್ತಾನೆ ಆದರೆ ಈತನು ಅರ್ದಕ್ಕೆ ಬಿಟ್ಟು ಬಿಡುತ್ತಾನೆ ತದನಂತರ ಬಂದವನು ಜಾಣನಾದರೆ ಮುಂದುವರಿಸಲಿ ಎಂಬುದು ಇವರ ಧ್ಯೇಯವಾಗಿತ್ತು.

ಪ್ರಸನ್ನ ವೆಂಕಟದಾಸರ 'ಸತ್ಯಭಾಮ' ಎಂಬುದು ಶಿಷ್ಟ ಸಾಹಿತ್ಯವಾಗಿದೆ. ಇದು ಕಥನ ಕೀರ್ತನವೆಂದು ಗುರುತಿಸಲಾಗುತ್ತದೆ. ಇಲ್ಲಿ ಪಾತ್ರದ ಚಿತ್ರಣ ನಾರದ ಕೃಷ್ಣ ಸತ್ಯಭಾಮೆಯರ ಪಾತ್ರ ಸೃಷ್ಟಿಸುವಿಕೆ ಇಲ್ಲ ನಾರದನ ಪಾತ್ರ ವಿಶಿಷ್ಠವಾದ ರೀತಿಯಲ್ಲಿ ಮೂಡಿಬರುವಂತಹದ್ದು ಅಂದರೆ ಇವರು ಅದ್ಭುತವಾದ ಕಲ್ಪನೆಯನ್ನು ತಮ್ಮದೇ ಆದ ರೀತಿಯಲ್ಲಿ ತುಂಬಿಕೊಡುವರೆಂದರೆ ಜಾನಪದರೇ ಇವರ ಆಲೋಚನೆ ಅಧ್ಬುತವಾಗಿದೆ.

ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಈ ಸಣ್ಣಾಟಗಳು ಹೆಚ್ಚು ಪ್ರಚಲಿತದಲ್ಲಿರುವುದು ಕಂಡುಬರುತ್ತವೆ. ಇವು ಹೆಚ್ಚಾಗಿ ಪುರಾಣ ಮೂಲದಿಂದ ಶುದ್ದ ಜನಪದ ಪ್ರಕಾರಕ್ಕೆ ಬರುತ್ತವೆ

ಪ್ರಮುಖವಾಗಿ ಶ್ರೀಕೃಷ್ಣ ಪಾರಿಚಿತದಲ್ಲಿ ಕೃಷ್ಣನ ಮಹಿಮೆಯನ್ನು ಹೇಳಬೇಕಾದಂತಹ ಪ್ರಮೇಯ ಅಂದರೆ ಇಲ್ಲಿ ದೈತ್ಯರ ನಿಗ್ರಹವನ್ನು ಮಾಡಲು ಈತನು ಬಂದಿರುವಂತಹದ್ದು ಎಂಬುದನ್ನು ಚಿತ್ರಿಸುವಂತಹದ್ದು ನಾರದನ ಪಾತ್ರ ಸೂತ್ರಧಾರನ ಪಾತ್ರ ವಹಿಸುತ್ತದೆ. ಸತ್ಯಭಾಮೆಯಲ್ಲಿ ಒಂದು ರೀತಿಯ ಚಲನವಲನತೆ ದೃಷ್ಟಿಯನ್ನು ಪ್ರತಿಬಿಂಬಿಸುತ್ತವೆ. ಅದರಂತೆ ಇಲ್ಲಿ ಅಕ್ಕಮನಾಟ, ಉರಿಲಿಂಗ ಪೆದ್ದಿಯಾಟ ಪ್ರಮುಖವಾಗುತ್ತವೆ. ಜಾನಪದ ರಂಗಭೂಮಿಯಲ್ಲಿ ಕಥೆಯನ್ನು ಇಟ್ಟುಕೊಂಡು ಹೋಗುವುದಿಲ್ಲ ಜೀವನಕ್ಕೆ ಒಂದು ಪರಿವರ್ತನೆಯನ್ನು ಕೊಡುವಂತಹದ್ದು ಜನಪದರ ದೃಷ್ಟಿ ಎಂದು ಹೇಳಬಹುದಾಗಿದೆ. ಕೊರವಂಜಿ, ಕೃಷ್ಣ, ಸತ್ಯಭಾಮ, ರುಕ್ಮಣಿ, ನಾರದ ಮತ್ತು ದೈತ್ಯರ ವದೆ ಇಂದ್ರನ ಪಾರಿಜಾತ ಗಿಡವನ್ನು ತರುವುದು ಅಂದರೆ ಇವರಲ್ಲಿ ಕಾವ್ಯವನ್ನು ಸರಳವಾಗಿಸುವ ಪ್ರಕ್ರಿಯೆ ಕಂಡುಬರುತ್ತವೆ. ಇದನ್ನು ಹಂಪೆಯ ಹರಿಹರನು ಈ ಪ್ರಕ್ರಿಯೆಯನ್ನು ಹಾಕಿಕೊಡುತ್ತಾನೆ. ಅಂದರೆ ದೇಶಿಯತೆನ್ನು ಪ್ರತಿಬಿಂಬಿಸುವಲ್ಲಿ ಈ ಹಂಪೆಯ ಹರಿಹರನ ಕೆಲವು ದೃಷ್ಟಿಕೋನವನ್ನು ಕಾಣಬಹುದಾಗಿದೆ. ಶಿಷ್ಯರಿಗೆ ಮುಕ್ತಿ ಅಂದರೆ ಬದುಕಿನ ರೀತಿ ನೀತಿಗಳನ್ನು ನೋಡುವುದು ಜನಪದರ ನಂಬಿಕೆ ಎಂದು ಹೇಳಬಹುದಾಗಿದೆ. ಈ ಸಣ್ಣಾಟ ಹುಟ್ಟಿದ್ದು ಬೆಳಗಾವಿಯಲ್ಲಿ ಆದರೆ ಬಿಜಾಪುರ ಜಿಲ್ಲೆಗೆ ಸಣ್ಣಾಟದ ತೂಗುತೊಟ್ಟಿಲೆಂದು ಕರೆಯಲಾಗಿದೆ. ಇವು ಕೆಲವು ರೀತಿಯ ಬದಲಾವಣೆ ಕಂಡುಕೊಂಡರೆ ಅಲಂಕಾರದ ಬದಲಾವಣೆಯಿಂದಲ್ಲಿ ೧೮೭೪ ರಿಂದ ೧೯೮೬ರಲ್ಲಿ ಕಾಣಬಹುದಾದ ಕಾಲವನ್ನು ಸಣ್ಣಾಟದ ಕಾಲವೆಂದು ಕರೆಯಲಾಗುತ್ತದೆ. ಅದರಂತೆ ವೃತ ಹೀನತೆಯನ್ನು ಒಪ್ಪಿಕೊಳ್ಳದಂತಹದವರು. (ವಚನ ಸಾಹಿತ್ಯ ಸಂಗ್ರಹ ಸಂ.೮, ಭೂಸನೂರ ಮಠ ವಿಶ್ವಮಾನವ ನೀತಿ ಪುಟ ಸಂ. ೧೭೫ ವಚನ ೧೨)

> "ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ ಹಲವು ಪ್ರಾಣಿಯಕೊಂದು
> ನಲಿನಲಿದಾಡುವ ತನ್ನ ಮನೆಯಲೊಂದು ಶಿಸು ಸತ್ತಡೆ ಮರುಗುವಂತೆ
> ಅವಕೇಕೆ ಮರುಗನು? ಅದೆಂತೆಂದೊಡೆಃ ಸ್ವಾತ್ಮನಾಮಿತರಂಚ್ಚೆವ ದೃಷ್ಟ್ವಾ
> ನಿತ್ಯಧಿಭಿನ್ನತೆ! ಸರ್ವೆಂ ಚಿಜ್ಯ್ಯೋತಿ ರೇವೇತಿಯಃ ಪಶ್ಯತಿ ಸ ಪಶ್ಯತಿ!!
> ಎಂಬುದಾಗಿ ಜಾಲಗಾರನ ದುಃಖ ಜಗಕೆಲ್ಲ ನಗೆಗೆಡೆ ಇದು ಕಾರಣ
> ಚೆನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು ಜೀವ ಹಿಂಸೆಯ ಮಾಡುವ
> ಮಾದಿಗರನೇನೆಂಬೆನಯ್ಯ?"[೨]

ಎಂಬುದು ಅತಿಶಯವಾಗುತ್ತವೆ. ಕೆಲವೊಂದು ರೀತಿಯಲ್ಲಿ ಜನಪದರನ್ನು ಪ್ರಶ್ನೆಸುವಂತೆ ಇರಲಿಲ್ಲ ಶರಣರಪದವೇ ಜನಪದವಾಗಿ ಬೆಳೆದು ಬಂದುದು ಈ ಹಿನ್ನೆಯಲ್ಲೇ ಕಾವ್ಯಪರಂಪರೆ ಮತ್ತು ಕೀರ್ತನ ಪರಂಪರೆ ಬೆಳೆದುಬಂದವೆಂದು ಹೇಳಬಹುದಾಗಿದೆ.

ಎಲ್ಲರೂ ಕೂಡಿ ಸಂಭ್ರಮಿಸುವುದು ಸಂಭ್ರಮ ಆದರೆ ಒಬ್ಬನೇ ಕುಳಿತು ಆಚರಿಸುವುದು ಸಾಧಾರಣವೆಂದು ಹೇಳಬಹುದಾಗಿದೆ. ಅಷ್ಟೇ ಅಲ್ಲದೇ ಸಾಮಾನ್ಯವಾಗಿ ಶ್ರೀಕೃಷ್ಣ ಪಾರಿಜಾತದಲ್ಲಿ ತರ್ಕ ಬದ್ದತೆಯುಂಟು ಇಲ್ಲಿಯ ಒಳನೋಟಗಳನ್ನು ನೋಡಿದರೆ ಅನ್ಯಜ್ಞಾನಗಳು ಉಂಟು ವೀರಶೈವರಾಟದಲ್ಲಿ ಪ್ರಮುಖವಾಗಿ ಹೇಮರೆಡ್ಡಿ ಮಲ್ಲಮ್ಮ ಅಕ್ಕಮಹಾದೇವಿಯ ಆಟಗಳು ಪ್ರಮುಖವಾಗಿವೆ ಅದರಂತೆ ಗೊಂದಲಿಗರು ತಮ್ಮ ಒಟ್ಟೇಪಾಡಿಗಾಗಿ ಸಂದರ್ಭಕ್ಕೆ ತಕ್ಕಂತೆ ಕತೆಗಳನ್ನು ಹೊಂದಿಸಿಕೊಂಡು ಆಟವಾಡುವುದು ಕಂಡುಬರುತ್ತವೆ. ಇದಕ್ಕೆ ಪ್ರವೇಶವಾರು ಭಿನ್ನತೆಯ ಸಹ ಪ್ರಮುಖವಾಗಿರುವುದು ಕಂಡು ಬರುತ್ತವೆ.

ಜನಪದರು ಮುಗ್ಧತೆಯಲ್ಲಿ ಬಹಳ ಒತ್ತು ನೀಡುವುದು ಆದರೆ ಬುದ್ದಿವಂತಿಕೆಗೆ ಅಲ್ಲ ಇದು ಇನ್ನೊಂದು ವಿಕಾಸ ಸ್ವಾತಂತ್ರ ಆಲೋಚನೆ ಇವರಿಗೆ ಸಾಹಿತ್ಯದಾಚೆ ಇರಲಿಲ್ಲ. ಇವರು ಸಾಹಿತ್ಯ ರಚಿಸಹೊರಟವರಲ್ಲ ಆದರೆ ಇವರು ಸಮಾಜ ಸುಧಾರಣೆಗೆ ಅನುಮತಿಸಿ ಬರೆಯಹೊರಟವರು ಇದು ಸಾಹಿತ್ಯವಾಗಿ ಬೆಳೆದು ಬಂದಿತೆಂದು ಹೇಳಬಹುದಾಗಿದೆ. "ನೀಲಲೋಚನೆ" "ಗಂಗಾಂಬಿಕೆ"ಯ ಸಣ್ಣಾಟ ಹೀಗೆ ಕಥೆ ಕಟ್ಟುವಲ್ಲಿ ಜನಪದರು ನಿಸ್ಸೀಮರು ಆಯ್ದಕ್ಕಿಲಕ್ಕಮ್ಮ, ಪುಣ್ಯಸ್ತ್ರೀ (ಹೆಣ್ಣು ಬಿಟ್ಟು ಲಿಂಗ ವಲಿಸಿಕೊಳ್ಳುವರು ಹೆಣ್ಣಿಂಗೆ ಲಿಂಗಕ್ಕೆ ಭಿನ್ನವೇ) ಸತ್ಯಕ್ಕೆ ಸಣ್ಣಕತೆ (ಶಿವಭಕ್ತರು ಲಂಚ ಮುಟ್ಟಬಾರದು ಎಂಬುದು ಇವರ ಸಂದೇಶ) ಇವೆಲ್ಲ ಕಾಲಮಾನದಲ್ಲಿ ಆಗುವಂತಹ ಕಾಲಜ್ಞಾನವನ್ನು ತಿಳಿಸುವಂತಹದ್ದಾಗಿವೆ. ವೇಷ, ಭೂಷಣ ಒಂದು. ವಿಚಾರ ಇನ್ನೊಂದು ಇದು ಏನಾಗುತ್ತವೆ ಎಂದರೆ ಕುರುಡನು ಕನ್ನಡಿ ಹಿಡಿದಹಾಗೆ ಎಂದಾಗುತ್ತದೆ. ಮಳೆಯಿರದೇ ಬೀಜ ಮಳಕೆ ಒಡೆಯುವುದಿಲ್ಲ. ಗಡಿಗೆಯಲ್ಲಿ ಅನ್ನವಿಲ್ಲದಿದ್ದರೂ ಮಡಿಲಲ್ಲಿ ಮಕ್ಕಳಿರಬೇಕು. ಅಂದರೆ ಅಭಾವದಿಂದ ಪ್ರಭಾವನಷ್ಟ ಸಂದೇಹಗಳು ಪಾಪಕ್ಕೆ ಕೈ ಕಾಲುಗಳಿದ್ದಂತೆ ಹೀಗೆ ಮಧ್ಯಕಾಲೀನ ಸಾಹಿತ್ಯದಲ್ಲಿ ಸಣ್ಣಾಟದ ಪರಿಕಲ್ಪನೆಯ ಮೂಡಿರಬೇಕೆಂದು ಹೇಳಬಹುದಾಗಿದೆ. 'ಗೊಗ್ಗವ್ವೆ'ಯಂತಹವಳು ಸಣ್ಣಾಟದ ಕಥೆಯ ವಸ್ತುವಾದಳು. ಹೀಗೆ ದುರ್ಬಲವಾದದ್ದು ಕಾಲಂತಾರದಲ್ಲಿ ಅಳಿದುಬಿಡುವಂತಹದ್ದಾಗಿದೆ. ಇದರ ಮೂಲ ಉದ್ದೇಶ ರಂಗಕಲೆಯು ಅಳಿಯದಿರಲೆಂಬುದು ಇವರ ಮಹದಾಸೆಯಾಗಿದೆ. ವೃತ್ತಿರಂಗಭೂಮಿ ೫೬೭ರಿಂದ ಪ್ರಾರಂಭವಾಗಿದ್ದು ಅಂದರೆ ಇದಕ್ಕೆ ಹಿಂದಿನ ಸಣ್ಣಾಟಗಳೇ ಇದಕ್ಕೆ ಪ್ರೇರಕ ವಸ್ತುವಾಗಿವೆ ಎಂದು ಹೇಳಬಹುದಾಗಿದೆ.

ಜನಪದರಲ್ಲಿ ಸತತ ಪರಿಶ್ರಮವು ಒಂದು ಮುಖ್ಯವಾದ ಲಕ್ಷಣವಾಗಿದೆ. ಉದಾಹರಣೆಗೆ ಅಕ್ಕಮಹಾದೇವಿಯ ವಚನದಲ್ಲಿ ಕೌಶಿಕನ ಹೆಸರೇ ಎತ್ತುವುದಿಲ್ಲ ಆದರೆ ಜನಪದರು ಆ ಕೌಶಿಕನ ಹೆಸರನ್ನು ಪ್ರಸ್ಥಾಪಿಸುವುದು. ಅವರ ಮಹತ್ವದ ಸಂಗತಿ ಮತ್ತು

ಅವರಲ್ಲಿರುವ ನೀತಿಯ ತಿಳುವಳಿಕೆ ಬೆಳೆದಿರುವಂತಹವನ್ನು ನೋಡಿದರೆ ಬಹಳ ಪ್ರಮುಖವಾದುದು ಜನಪದ ಸಾಹಿತ್ಯವೆಂದು ಹೇಳಬಹುದಾಗಿದೆ. ಇಲ್ಲಿ ಭಕ್ತಿ ಪ್ರಧಾನತೆ ಇದೆ ಅದರಂತೆ ಒಂದು ಮೂಲ ಅಸ್ಥಿಪಂಜರಕ್ಕೆ ಒಂದು ಮಹತ್ವದ ಆಲೋಚನಾಕಾರ ಅದಕ್ಕೆ ರಕ್ತ-ಮಾಂಸವನ್ನು ತುಂಬುತ್ತಾನೆ. ಇಂತಹ ಒಂದು ರೀತಿಯ ಆಲೋಚನೆ ಜನಪದರಲ್ಲಿ ಉದುಗಿರುವಂತಹದ್ದು ಮಹತ್ವದ್ದಾಗುತ್ತದೆ.

ಇವರಲ್ಲಿ ವಿನಯ ಶೀಲತೆ ಮತ್ತು ಚುರುಕು ಬುದ್ದಿಯವರು ಎಂಬುದನ್ನು ಇವರು ಚಿತ್ರಿಸುವ ಕಥೆಗಳ ಮೂಲಕ ತಿಳಿದುಕೊಳ್ಳಬಹುದಾಗಿದೆ. ಅದರಂತೆ ಜನಪದ ಪ್ರಾಚೀನತೆಯನ್ನು ಹುಡುಕುವುದು ಬಹಳ ಕಷ್ಟ ೧೪ನೇ ಶತಮಾನದಲ್ಲಿ ಪ್ರಥಮವಾಗಿ ಸಣ್ಣಾಟವು ಬೆಳೆದು ಬಂದಿತ್ತು. ಮುಖ್ಯವಾಗಿ ಕೀರ್ತನ ಸಾಹಿತ್ಯದಿಂದ ಸಣ್ಣಾಟದ ಬೆಳವಣಿಗೆ ಆಯಿತು. ಅದರಂತೆ ಕುಮಾರವ್ಯಾಸನ "ಕರ್ಣಾಟಕ ಭಾರತ ಕಥಾ ಮಂಜರಿ" ಇದು ಕೀರ್ತನ ಸಾಹಿತ್ಯಕ್ಕೆ ಪ್ರೇರಣೆಯಾಗಿ ನಿಲ್ಲುತ್ತದೆ ಜನಸಾಮಾನ್ಯರ ಆಶಯವನ್ನು ಪ್ರತಿಬಿಂಬಿಸುವಸಲುವಾಗಿ ಕೃಷ್ಣ ಕಥೆಯನ್ನು ಎತ್ತಿಕೊಳ್ಳುತ್ತಾನೆ. ಕಥೆಯ ಮೇಯ್ಗಡಲಿಯ್ಯದೆ ಎಂಬ ಮಾತನ್ನು ಪಂಪನು ತನ್ನ ಪಂಪ ಭಾರತದಲ್ಲಿ ಹೇಳಿರುವುದುಂಟು. ಆದರೆ ಆ ಕತೆಯ ಆಶಯವನ್ನು ಕೆಡಿಸುತ್ತಿದ್ದಾನೆ ಎಂದೆನಿಸುತ್ತದೆ. ಇವುಗಳನ್ನು ನೋಡಿ ಕುಮಾರವ್ಯಾಸನು ಇದನ್ನು ಆಯ್ದುಕೊಳ್ಳುತ್ತಾನೆ. ಅಂದರೆ ಮುಂದಿನ ಜನಪದ ಸೃಷ್ಟಿಗೆ ಕುಮಾರವ್ಯಾಸನು ಪ್ರಮುಖನಾಗುತ್ತಾನೆ. ಜೈನ ಕವಿಗಳು ಈ ಭಾರತದಲ್ಲಿ ಭಿನ್ನಾಭಿಪ್ರಾಯವನ್ನು ಸೃಷ್ಟಿಸಿರುವುದು ಕೆಲವು ಮೂಲಗಳಿಂದ ತಿಳಿದುಕೊಳ್ಳಬಹುದಾಗಿದೆ. ಇಲ್ಲಿ ಜೈನ ಕವಿಗಳಿಂದ ವೈದಿಕ ವ್ಯವಸ್ಥೆ ಹಾಳಾಗುತ್ತಿದೆ. ಇದು ಒಂದು ಕಡೆಯ ಸತ್ಯವೆಂದು ಹೇಳಬಹುದು ಎರಡು ಶಿಷ್ಟ ಕಾವ್ಯ ಜನಪ್ರಿಯತೆಯನ್ನು ಪಡೆದಿದೆ ಎಂದರೆ ಅದಕ್ಕೆ ಮೂಲವಾಗಿ ಜನಪದ ಕಾವ್ಯಗಳು ತಳಹದಿಯಾಗಿರುತ್ತವೆ. ಅನುಭವದ ಹಿನ್ನೆಲೆಯಲ್ಲಿ ಜನಪದ ರಂಗಭೂಮಿ ಪರಿವರ್ತನೆ ಹೊಂದುತ್ತಾ ಹೋಗುತ್ತವೆ. ಮಾನವ ಸಹಜವಾದ ಲವಲವಿಕೆ ಹೊಂದಿರುವಂತಹದ್ದು ಇಂತಹ ವಿಷಯ ವಸ್ತು ಜನಸಾಮಾನ್ಯರದ್ದು ಜನಪದರ ಆಶಯವೆಂದರೆ ಮನೋರಂಜನೆ ಮತ್ತು ಮನೋವಿಕಾಶವು ಪ್ರಮುಖ ಆಶಯವಾಗುತ್ತದೆ. ಸಹಜವಾದ ತಮ್ಮ ಬದುಕಿನಲ್ಲಿ ಸಮ್ಮಿಳಿತವಾಗುವ ರೀತಿಯನ್ನು ಕಂಡುಕೊಂಡಂತಹುದು ಜನಪದರ ಪ್ರಮುಖವಾದ ಶಕ್ತಿ.

ಇಲ್ಲಿ ಮುಖ್ಯವಾಗಿ ಕಳಪೇತಿಯ ಸಿದ್ದ ಪ್ರಭುವು ಬರೆದಂತಹ ಮೊದಲನೇ ಸಣ್ಣಾಟವು ಪ್ರಮುಖವಾದುದು ಇದು. ಮೊಟ್ಟಮೊದಲನೆ ಸಣ್ಣಾಟವೆಂದು ಹೇಳಬಹುದಾಗಿದೆ. ಅದು ಯಾವುದೆಂದರೆ 'ಭೂ ಕೈಲಾಸ' ನಾನು ನೋಡಲಾರದ್ದನ್ನು ನನ್ನ ಅಂತಸ್ಥಿಕೆಯಲ್ಲಿಟ್ಟುಕೊಂಡು ನೋಡುತ್ತೇನೆ ಎಂಬುದು ಜನಪದರ ಪರಿಕಲ್ಪನೆ ಮತ್ತು ಆಶಯವು ಕೂಡ ಆಗಿದೆ. ಅಂದರೆ

ಮುಖ್ಯವಾಗಿ ಇವರ ಆಟಗಳು ಪ್ರತಿಬಿಂಬಿಸುವುದು ಒಂದು ಹೆಣ್ಣು ಇನ್ನೊಂದು ಹೆಣ್ಣಿನಿಂದಲೇ ಕೆಡುತ್ತದೆ ಜನಪದರಲ್ಲಿ ಮೂಡನಂಬಿಕೆ ಮತ್ತು ಒಬ್ಬರೇ ಇರುವಂತಹ ಒಂಟಿತನ ಮನುಷ್ಯನ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬ ಪ್ರಜ್ಞೆ ಜನಪದರಲ್ಲಿ ಪ್ರತಿಬಿಂಬಿತವಾಗಿರುವುದು ಈ ಆಟಗಳಿಂದ ಕಂಡು ಬರುತ್ತದೆ.

ಈ ಹಿನ್ನೆಲೆಯಲ್ಲಿ ನೋಡಿದರೆ 'ಭೂ ಕೈಲಾಸ' ಇದರ ಚಿತ್ರಣವು ಒಂದು. ಈ ಭೂ ಕೈಲಾಸದಲ್ಲಿ ರಾವಣನು ಶಿವನನ್ನು ಕುರಿತು ತಪಸ್ಸು ಮಾಡುವನು. ವರಪಡೆದುಕೊಳ್ಳುವುದು. ಅದನ್ನು ಹಿಂತೆಗೆದುಕೊಳ್ಳುವುದು ಇಂತಹ ಚಿತ್ರಣವನ್ನು ಈ ಸಣ್ಣಾಟವು ಕಟ್ಟಿಕೊಡುತ್ತದೆ. ಇಲ್ಲಿ ರಾವಣನನ್ನು ಪರ್ಯಾಯವಾಗಿ ಒಂದು ಶಕ್ತಿಯುತವಾದ ಪಾತ್ರವೆಂದು ಜನಪದರು ನಂಬಿರುವಂತಹದ್ದು ಮಹತ್ವದ್ದಾಗಿದೆ.

ಈ ಹಿನ್ನೆಲೆಯಲ್ಲಿ ನೋಡುವುದಾದರೆ 'ಚಂದ್ರಶಿರೋಮಣಿ' ಈ ಸಣ್ಣಾಟವು ರಾಜಭೂಪಾಲ ಅರಸ, ಚಂದ್ರಮತಿ ರಾಣಿ, ಈಕೆಯ ಸವತಿ ಕಲಾವತಿ ಈ ಸಣ್ಣಾಟದಲ್ಲಿ ಸವತಿ ಮಸ್ತರವು ಹೇಗೆ ಪ್ರತಿಬಿಂಬಿತವಾಗಿದೆ ಎಂಬುದನ್ನು ತಿಳಿಸಬಹುದಾದಂತಹ ಪಾತ್ರವಾಗಿದೆ. ಈ ಕಾಲದಲ್ಲಿ ಬಹು ಪತ್ನಿತ್ವ ಹೆಚ್ಚಾಗಿ ಕಂಡು ಬರುತ್ತಿದೆ. ಇಲ್ಲಿ ಕಲಾವತಿಯು ಸವತಿ ಮಸ್ತರದಿಂದ ಚಂದ್ರಮತಿಗೆ ಅರಸನಿಂದ ಅಡವಿಗೆ ಅಟ್ಟುತ್ತಾಳೆ. ಅಲ್ಲಿ ಭಾಳೋಜಿ ರಾಘವ ಎಂಬ ಗುರು ಇರುತ್ತಾನೆ. ಅವನಲ್ಲಿ ಆಶ್ರಯ ಪಡೆದುಕೊಳ್ಳುತ್ತಾಳೆ. ಆಗ ಈಕೆಗೆ ಒಂದು ಮಗು ಜನಿಸುತ್ತದೆ. ಅದರ ಹೆಸರೇ 'ಚಂದ್ರಶಿರೋಮಣಿ' ಎಂದು ಈತನು ಭಾಳೋಜಿ ರಾಘವನ ಅತ್ತಿರ ಅಭ್ಯಾಸಗೈಯುತ್ತಾನೆ ನಂತರ ತಂದೆಯನ್ನು ಸೋಲಿಸುವುದು ಕಂಡುಬರುತ್ತದೆ. ಇಂತಹ ರೀತಿಯ ಒಂದು ಪರಿಕಲ್ಪನೆಯನ್ನು ಕಟ್ಟಿಕೊಡುವುದು ಕುಮಾರವ್ಯಾಸನಿಂದ ಸಾಧ್ಯವೆಂದು ಹೇಳಬಹುದಾಗಿದೆ.

ಜನಪದರು ಧರ್ಮ ಸಮ್ಮತವಾದ ಬದುಕನ್ನು ನಿರ್ಮಿಸುವುದು ಜನಪದರ ರೀತಿ ಹೀಗಾಗಿ ಧರ್ಮದ ಪರ್ಯಾಯವಾಗಿ ಆಟ ಹುಟ್ಟಿಕೊಂಡಿತು ಆಗ ಸಣ್ಣಾಟ ಹುಟ್ಟಿಕೊಂಡಿತು ಹೀಗೆ ಇದೇ ರೀತಿಯಲ್ಲಿ ಸಣ್ಣಾಟವು ಬೆಳೆದು ಬಂದದ್ದಾಗಿದೆ. 'ರಾಮಾಯಣ' ಬರಿ ಆದರ್ಶವನ್ನು ಹೇಳುತ್ತದೆ. ಮಹಾಭಾರತವು ಬದುಕನ್ನು ಸೃಷ್ಠಿಸಿ ಅದಕ್ಕೆ ತಕ್ಕಂತೆ ಲೋಕವ್ಯವಹಾರವನ್ನು ಕುರಿತು ಮಾತನಾಡುತ್ತದೆ. ಹೀಗೆ ವಾಸ್ತವಿಕ ದೋರಣೆಯ ಭಾರತ ಜನಪದರಿಗೆ ವಸ್ತುವಾಯಿತು ಈ ಭಾರತವು ದಿನ ನಿತ್ಯದ ಬದುಕಿನಲ್ಲಿ ಕಾಣುತ್ತಿರುವಂತಹ ವಾತ್ಸವ ಸತ್ಯವನ್ನು ಪ್ರತಿಬಿಂಬಿಸುವಂತಹದ್ದು ಇದು ಹೆಚ್ಚು ಪ್ರಸ್ತುತವಾಗುತ್ತ ಬೆಳವಣಿಗೆಯನ್ನು ಕಂಡುಕೊಂಡಿತೆಂದು ಮತ್ತು ಇಲ್ಲಿ ಹೆಚ್ಚು ಸಂಘರ್ಷ ಹಾಗೂ ತಲ್ಲಣಗಳುಂಟು ಎಂದು ಹೇಳಬಹುದಾಗಿದೆ.

ನೋವುಗಳ ಮೂಲಕ ಮನುಷ್ಯನ ಬದುಕು ಹಸನಾಗುತ್ತದೆ. ಈ ಭಾರತವು ಇದೊಂದು ಕಥೆಯಾದರೂ ಇದು ಜೀವನದ ವ್ಯತೆಯಾಗಿದೆ. ಹೀಗಾಗಿ ಈ ಮಹಾಭಾರತವು ಜನಮಾನಸವನ್ನು ಪ್ರತಿಬಿಂಬಿಸುತ್ತಾ ಬಂದಿತು ಎಂದು ಹೇಳಬಹುದು. ಕನ್ನಡ ಸಾಹಿತ್ಯದಲ್ಲಿ ಹರಿಹರನು ಸ್ತ್ರೀಯನ್ನು ಕಥಾ ನಾಯಕಿಯನ್ನಾಗಿ ಗಿರಿಜಾಕಲ್ಯಾಣದಲ್ಲಿ ತೆಗೆದಕೊಂಡಿರುವುದು. ಪ್ರಥಮಮವಾಗಿದೆ ಅದರಂತೆ ರಾಘವಾಂಕ ಮತ್ತು ಇನ್ನೂ ಮುಂತಾದ ಕವಿಗಳು ಸ್ತ್ರೀಯರನ್ನು ಆದರಿಸಿ ಕಾವ್ಯವನ್ನು ಸೃಷ್ಟಿಸಿದರು ಎಂದು ಹೇಳಬಹುದಾಗಿದೆ. ಅದರಂತೆ ದೇವೇಂದ್ರಪನ ಆಟಗಳು ಸಹ ಸ್ತ್ರೀಯನ್ನು ಕಥನಾಯಕಿಯನ್ನಾಗಿ ಚಿತ್ರಿಸಿರುವ ಆಟಗಳು ಸಹ ಕಂಡು ಬರುತ್ತವೆ. ಅದರಲ್ಲೂ ಸತ್ಯ ಶೀಲಾವತಿ ಮಹಾಸತಿ ಶಿವಲೋಚನಾ ಇನ್ನು ಮುಂತಾದ ಆಟಗಳನ್ನು ನಾವು ನೊಡಬಹುದಾಗಿದೆ. ಆ ಕಾಲದ ಕಥೆಯನ್ನು ಈ ಕಾಲದಲ್ಲಿ ಈ ಕಾಲದ ಕಥೆಯನ್ನು ಆಕಾಲದಲ್ಲಿ ಅಂದರೆ ಕಾಲಕಾಲಕ್ಕೆ ಬದಲಾವಣೆ ಹೊಂದುತ್ತ ಹೋಗುತ್ತಿರುವುದು ಕಂಡು ಬರುತ್ತದೆ. ಈ ಸಣ್ಣಾಟದಿಂದ ಗ್ರಾಮ ತನ್ನ ಬದುಕನ್ನು ನಿರ್ಮಿಸುವಂತಹದ್ದು ಕಂಡುಬರುತ್ತದೆ.

ವೃತ್ತಿ ರಂಗಭೂಮಿಯನ್ನು ಬಿಡದೆ ಜನಪದ ರಂಗಭೂಮಿಯನ್ನು ಬಿಡದೆ ಈ ಗ್ರಾಮೀಣ ರಂಗಭೂಮಿ ಕೆಲವೊಂದು ಪ್ರದೇಶದಲ್ಲಿ ಬೆಳೆದು ಬಂದಿತೆಂದು ಇದು ಇನ್ನೂ ಸಹ ಬೆಳವಣಿಗೆ ಪಡೆದುಕೊಂಡಿರುತ್ತದೆ. ಅಂತೆಯೇ ಬೆಳಗಾಂವ್‌ನಲ್ಲಿ ಹುಟ್ಟಿ ಬಿಜಾಪುರದಲ್ಲಿ ತೇಲಿತೆಂದು ಹೇಳಬಹುದಾಗಿದೆ. ಡಪ್ಪಿನಾಟದ ಬೆಳವಣಿಗೆಯೇ ಸಣ್ಣಾಟವೆಂದು ಹಾಗೂ ಈ ಸಣ್ಣಾಟವು ಜನಪದ ರಂಗಭೂಮಿಯ ಹೋರಾಟವೆಂದೇ ಹೇಳಬಹುದಾಗಿದೆ.

ಅಡಿ ಟಿಪ್ಪಣಿಗಳು

೧. ಉತ್ತರ ಕರ್ನಾಟಕದ ಬಯಲಾಟಗಳು, ಡಾ.ಬಸವರಾಜಮಲ್ಲಶೆಟ್ಟಿ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪುಟ ಸಂಖ್ಯೆ-೯೨, ೧೯೮೩

೨. ವಚನ ಸಾಹಿತ್ಯ ಸಂಗ್ರಹ, ಸಂಪುಟ-೮, ಭೂಸನೂರಮಠ, (ವಿಶ್ವಮಾನವ ನೀತಿ) ಪುಟ ಸಂಖ್ಯೆ-೧೨೫, ವಚನ-೧೨.

ಅಧ್ಯಾಯ–ನಾಲ್ಕು

ಗೊಂದಲಿಗರ ದೇವೇಂದ್ರಪ್ಪನ ಆಟಗಳಲ್ಲಿಯ ಕಥಾವಸ್ತು ಮತ್ತು ಪಾತ್ರ ಪರಿಚಯ

೪.೧ ಆಟಗಳಲ್ಲಿಯ ಕಥಾವಸ್ತು

೪.೨. ಪಾತ್ರ ಪರಿಚಯ

ಅಧ್ಯಾಯ–ನಾಲ್ಕು

ಗೊಂದಲಿಗರ ದೇವೇಂದ್ರಪ್ಪನ ಆಟಗಳಲ್ಲಿಯ ಕಥಾವಸ್ತು ಮತ್ತು ಪಾತ್ರ ಪರಿಚಯ

೧. **ಕಥೆಗಳು**

೧) ಮಹಾಸತಿ ಶಿವಲೋಚನ

೨) ಸತ್ಯ ಶಿಲಾವತಿ

೩) ವಿಘ್ನಾವತಿ

೪) ಬಾಳ ಭಿಕ್ಷುಕ

೫) ರಾಜಾ ವೀರಪರಾಕ್ರಮ

೬) ಅಡ್ಡ ಕತೆಗಳು

ಅ. ಜಗಳ ಗಂಟಿ ಜಕ್ಕವ್ವ

ಬ. ಸಂತ ದಂಪತಿಗಳು

ಕ. ದುರಾಸೆಯ ಭಕ್ತ

೨. **ಪಾತ್ರಗಳು**

೧. ಸ್ತ್ರೀ ಪಾತ್ರಗಳು

೨. ರಜರು–ಪ್ರಜೆಗಳು

೩. ಮಂತ್ರಿ

೪. ರಾಕ್ಷಸರು

೫. ತುರಂಗಿ ಬಾವಾ

೪.೧. ಆಟಗಳಲ್ಲಿನ ಕಥಾವಸ್ತು

ಈ ದೇವೇಂದ್ರಪ್ಪನ ಆಟಗಳು ನಾವು ನೋಡುವುದಾದರೆ ಇವರು ತಮ್ಮ ಆಟಗಳನ್ನು ಮೂಲದಲ್ಲಿ ನಡೆದು ಬಂದಂತಹ ಕಥೆಗಳನ್ನು ಅಳವಡಿಸಿಕೊಂಡು ಆಟಗಳನ್ನು ಪ್ರದರ್ಶಿಸುವುದು ಕಂಡುಬರುತ್ತದೆ. ಕೆಲವೊಂದು ಕಡೆ ಆಟಗಳ ವಸ್ತುವನ್ನು ಆಯಾ ಸಂದರ್ಭಕ್ಕೆ ತಕ್ಕಂತೆ ಹೊಂದಿಸಿಕೊಂಡು ನಡೆದುದು ಕಂಡುಬರುತ್ತದೆ. ಈ ಕಲಾವಿದರು. ತಾವಾಡುವ ಆಟಗಳಲ್ಲಿ ವಸ್ತು ಎಂಥದ್ದೇ ಆಗಿದ್ದರೂ ಅದನ್ನು ತಮ್ಮ ಗತ್ತಿಗೆ ಹೊಂದಿಸಿಕೊಂಡು ಆ ವಸ್ತು ತಮ್ಮದೇ ಎನ್ನುವಂತೆ ವಿವರಿಸುವ ಗೊಂದಲಿಗರ ಸೃಜನಶಕ್ತಿ, ಆಗಾದವಾದದ್ದು. ಗೊಂದಲಿಗರ ದೇವೇಂದ್ರಪ್ಪನು ಹೇಳುವ ಬಹುಮುಖ್ಯ ಕಥೆಗಳೆಂದರೆ ಸತಿ ಶಿವಲೋಚನ ಬಾಳಬಿಕ್ಷುಕ, ಸತ್ಯ ಶಿಲಾವತಿ, ರಾಜ ವೀರಪರಾಕ್ರಮ, ವಿಘ್ನಾವತಿ, ದುರಾಸೆಯ ಭಕ್ತ ಮತ್ತು ಅಡ್ಡ ಕಥೆಗಳನ್ನು ನಾವು ನೋಡಬಹುದಾಗಿದೆ.

ಈ ಆಟಗಳನ್ನು ಕುರಿತು ಶ್ರೀ ಮುದೇನೂರು ಸಂಗಣ್ಣನವರು "ಹಲವರು ಬಾವಿಸಿರುವಂತೆ ಗೊಂದಲಿಗರು ಕೇವಲ ಕಥೆ ಹೇಳುವುದಿಲ್ಲ ಅವರ ಪ್ರಕಾರದಲ್ಲಿ ಬರೀ ನಿರೂಪಣೆಯಿಲ್ಲ. ಜನಪದ ಕತೆಗಳಲ್ಲಿಯಂತೆ ಯಾರೊಬ್ಬ 'ಹೂ' ಗುಟ್ಟುವುದಿಲ್ಲ "ಆಹಾ" "ಹೌದು" ಎನ್ನುತ್ತ ನಿರ್ದಿಷ್ಟ ಕರ್ತವ್ಯದ ಹಿಮ್ಮೇಳಿಗ ದನಿದೊರುವುದೊಂದೇ ಅಲ್ಲದೆ, ಕಥನ ಕ್ರಿಯೆಯಲ್ಲಿ ಪಾಲ್ಗೊಳ್ಳುವುದು ಇದೆ.

ಹಾಡಿಗೆ ಆತ ಸೊಲ್ಲು ನೀಡುತ್ತಾನೆ. ಈ ಕಲಾ ಪ್ರಕಾರದಲ್ಲಿ ರಂಗ ಪರಿಕರಗಳಿಲ್ಲ, ವೇಷ ಭೂಷಣ ತಮ್ಮ ನಿಗದಿತ ಪಾತ್ರವರ್ಗವಿಲ್ಲ ಪ್ರತ್ಯೇಕ ವಾದ್ಯಕಾರರಿಲ್ಲ. ಭಾಗವತರಿಲ್ಲ ಆದರೆ ನಾಟಕದ ಪ್ರಮುಖ ಲಕ್ಷಣಗಳಾದ ತಾನಲ್ಲದ ಇನ್ನೊಂದು ವ್ಯಕ್ತಿಯಾಗಿ ವರ್ತಿಸುವ ಅನುಕರಣೆಯ ವಾಚನಾ ಕ್ರಿಯೇ ಚಲನೆ. ಅರ್ಥಪೂರ್ಣ ಸಂಭಾಷಣಾ ಸಾಹಿತ್ಯಗಳಿವೆ. ಅವುಗಳೊಡನೆ ವಾಸ್ತವಿಕತೆ ಮತ್ತು ಕಲ್ಪನೆ ಭಾವುಕತೆಗಳೂ ಅಂಗವಿಸಿರುತ್ತವೆ. ನೃತ್ಯ ಹಾಡುಗಳೆರಡು ಅವರ ಸಜೀವ ಸಂಬಂಧಿಗಳು ಎಂದು ಹೇಳುವುದು ಸಮಂಜಸವಾಗಿದೆ. ತುಂಬಾ ವೈವಿಧ್ಯವು ಮತ್ತು ವೈರುದ್ಯಮಯವು ಆದಂತ ಕಥಾ ಶಿಲ್ಪಗಳು ಈ ಗೊಂದಲಿಗರಲ್ಲಿ ಸಿಗುತ್ತವೆ. ರಾಜರಾಣಿ, ಮಕ್ಕಳು ಸಂತಾನ, ಅದಕ್ಕಾಗಿ ಅವರು ಮಾಡುವ ಪ್ರಯತ್ನಗಳು ಪಡುವ ಯಾತನೆಗಳು ಒಂದೆಡೆಯಾದರೆ ಬರ,ಗುಳೆ ಅನ್ನದ ಅಭಾವ ಪತಿವೃತಾಧರ್ಮದಂತಹ ಆಶಯವುಳ್ಳ ಕತೆಗಳು ಗೊಂದಲಿಗರ ಆಟದ ಇನ್ನೊಂದು ಮುಖ ಕಥೆ ಯಾವುದೇ ರೂಪದ್ದಾಗಿರಲ್ಲಿ ಅದರಲ್ಲಿ ಅದ್ಭುತ ರಮ್ಯ ಅತಿಮಾನುಷ, ಶೃಂಗಾರ, ಹಾಸ್ಯ, ಕರುಣದಂತಹ ಭಾವಗಳು ತುಂಬಿಕೊಂಡಿರುತ್ತವೆ. ಕಥೆ ಸಣ್ಣದಿದ್ದರೂ ಅದಕ್ಕೆ ಸೇರಿಕೊಂಡು ಬೆಳೆಯುವ ಉಪಕಥೆಗಳೇ ಹೆಚ್ಚು ಒಂದು ಕೆಲಸಕ್ಕೆ ಅದರ ಸುತ್ತ ಹತ್ತು ಕಥೆಗಳು ಬಳಕೆಯಾಗುತ್ತವೆ.

ಅವು ಕೇವಲ ವಿವರಣೆಗಳಾಗದೆ ನಿದರ್ಶನಗಳಾಗಿ ತಿಳುವಳಿಕೆಯ ತಿರುವುಗಳಾಗಿ ಬಳಕೆಯಾಗುವುದು ಈ ಕಥೆಗಳಲ್ಲಿನ ವೈಶಿಷ್ಟ್ಯವಾಗಿದೆ.

ಪ್ರಾಣಿಪಶುಪಕ್ಷಿಗಳಿಲ್ಲಿ ಮನುಷ್ಯರೊಂದಿಗೆ ಮಾತನಾಡುತ್ತವೆ, ಕುಣಿಯುತ್ತವೆ. ಸಹಾಯಕರಾಗುತ್ತವೆ. ಕಷ್ಟ ಪರಿಹರಿಸುತ್ತವೆ.

ಈ ಹಿನ್ನಲೆಯಲ್ಲಿ ದೇವೇಂದ್ರಪ್ಪನ ಆಟಗಳು ಬೆಳೆದು ಬಂದಿವೆ. ಅದರಂತೆ ನೀತಿ ಸಂಹಿತೆಯನ್ನು ಹೊತ್ತುಕೊಂಡು ಅವು ಮನುಷ್ಯನಿಗೆ ಬದುಕುವ ಜೀವನ ಮಾರ್ಗವನ್ನು ನಿರ್ಮಿಸಿಕೊಡುತ್ತವೆ. ಹಾಗೆನೇ ಈ ದೇವೇಂದ್ರಪ್ಪನವರ ಆಟಗಳನ್ನು ಅದರಲ್ಲಿ ಬರುವಂತಹ ಚಿತ್ರಣಗಳನ್ನು ನಾವು ಈ ಕೆಳಗಿನಂತೆ ನೋಡಬಹುದು.

೧. ಮಹಾಸತಿ ಶಿವಲೋಚನ

ಈ ಆಟದಲ್ಲಿ ಮೊದಲಿಗೆ ತಂದೆಗೆ ಮುಪ್ಪು ಬರುತ್ತದೆ. ಮಗನನ್ನು ಕರೆದು ರಾಜ್ಯಬಾರ ಒಪ್ಪಿಸುತ್ತಾನೆ. ಮಗ ನನಗೆ ಇನ್ನು ಅನುಭವ ಸಾಲದು ಎನ್ನುತ್ತಾನೆ. ನಾನು ಹಿಂದೆ ಇರುತ್ತೇನೆ ನೀನು ಹೆದರಬೇಡ ತಪ್ಪಾದರೆ ತಿದ್ದುತ್ತೇನೆ ಎಂದು ರಾಜ ಹೇಳುವಂತಹದ್ದು ಮಗನು ರಾಜ್ಯ ಬಾರ ಪ್ರಾರಂಭಿಸುತ್ತಾನೆ. ಅನುಭವಿಲ್ಲದಿದ್ದರೂ ಕುಮಾರ ಉತ್ಸಾಹಶಾಲಿ ಹೊಸದನ್ನು ಕಂಡರೆ ಪಡೆಯುವ ತವಕ ರಾಜನೆಂಬ ಗರ್ವಬೇರೆ. ಹೀಗಾಗಿ ಸ್ವಲ್ಪದಿನದಲ್ಲಿ ರಾಜ್ಯ ಬೊಕ್ಕಸ ಬರಿದಾಗುತ್ತದೆ. ಪ್ರಜೆಗಳೆಲ್ಲ ಗುಳೆ ಹೊರಡುತ್ತಾರೆ. ಈ ಸಂದರ್ಭದಲ್ಲಿ ಇದಕ್ಕೆ ಕಾರಣ ಮತ್ತು ಪರಿಹಾರವನ್ನು ತಂದೆ ಮಗನನ್ನು ಕೇಳಿದಾಗ ಆತ ತುಂಬಾ ಉದ್ದಟತನದ ಮಾತುಗಳನ್ನು ಆಡುತ್ತಾನೆ. ತಂದೆ–ಮಗನಿಗೆ ಜಗಳಬಂದು ಹಾಳು ಮಾಡಿದ ಸಂಪತ್ತನ್ನು ಮರಳಿ ಪಡೆಯಲು ಪಣ ತೊಟ್ಟು ಹೊರಡುತ್ತಾನೆ. ಇತ್ತ ಹೆಂಡತಿ ಏಕಾಂಗಿಯಾಗಿ, ಹಲುಬುತ್ತಾಳೆ ಗಂಡನ ಸಂಪತ್ತನ್ನು ತಿಂದ ಹಕ್ಕಿಗಳನ್ನು ಶಪಿಸುತ್ತಾಳೆ. ಇವಳ ನೋವ ಕಂಡ ಹಕ್ಕಿಗಳು ಗಂಡ ಹೆಂಡಿರನ್ನು ಕೂಡಿಸುತ್ತವೆ. ಈ ರೀತಿಯ ಕೂಡುವಿಕೆ ಯಾರಿಗೂ ತಿಳಿದಿರುವುದಿಲ್ಲ ಈಕೆಯ ಗಂಡನು ರಾತ್ರಿ ಬಂದು ರಾತ್ರಿಯೇ ಹೋಗಿ ಬಿಟ್ಟಿರುತ್ತಾನೆ. ಹೋಗುವ ಸಂದರ್ಭದಲ್ಲಿ ತಾನು ಬಂದು ಹೋದ ಗುರುತುಗಳನ್ನು ನೀಡಿ ಹೋಗಿರುತ್ತಾನೆ. ಯುವರಾಣಿ ಕಾಲಾನಂತರದಲ್ಲಿ ಬಸುರಿಯಾಗುತ್ತಾಳೆ. ಈ ವಿಷಯ ತಿಳಿದ ಅತ್ತೆ ತನ್ನ ಗಂಡನಿಗೆ ನಮ್ಮ ಸೊಸೆಯು ಅನೈತಿಕ ಸಂಬಂಧವಿಟ್ಟುಕೊಂಡಿದ್ದಾಳೆ ಎಂದು ಅಪರಾಧ ಹೊರಿಸುತ್ತಾಳೆ ಅತ್ತೆ ಮಾವ ಸೇರಿ ಅವಳನ್ನು ಕೊಲ್ಲಲು ಪ್ರಯತ್ನಿಸಿ ವಿಫಲರಾಗುತ್ತಾರೆ. ಕೊನೆಗೆ ತವರುಮನೆಗೆ ಒಂದು ಪತ್ರವನ್ನು ಬರೆದು ಕಳುಹಿಸುತ್ತಾರೆ. ಪತ್ರದಲ್ಲಿ ನನ್ನ ಮಗನು ಇಲ್ಲದ ಸಂದರ್ಭದಲ್ಲಿ ಅನೈತಿಕ ಸಂಬಂಧ ಬೆಳೆಸಿದ್ದಾಳೆ ಅದ್ದರಿಂದ ಈ ನಿಮ್ಮ ಮಗಳನ್ನು ಈ ಪತ್ರ ನೋಡಿದ ಕೂಡಲೇ ಸಾಯಿಸತಕ್ಕದ್ದು ಇದಕ್ಕೆ ತಪ್ಪಿದ್ದಲ್ಲಿ

ನಿಮ್ಮ ಮಕ್ಕಳ ನಾಲ್ಕು ತಲೆಗಳು ಉರುಳುತ್ತವೆ ಎಂದು ಬರೆಯಲಾಗಿತ್ತು. ಈ ಪತ್ರವನ್ನು ಓದಿದ ರಾಜನು ತನ್ನ ಮಕ್ಕಳನ್ನು ಕರೆಯಿಸಿ. ನಿಮ್ಮ ತಂಗಿ ಅಪರಾಧ ಮಾಡಿದ್ದಾಳೆ ಆದ್ದರಿಂದ ಆಕೆಯನ್ನು ಕೊಲ್ಲಿರೆಂದು ಹೇಳುತ್ತಾನೆ. ಇಲ್ಲಿ ಎಲ್ಲ ಮಕ್ಕಳು ಒಂದೊಂದು ಕಥೆಯನ್ನು ಹೇಳುತ್ತಾರೆ. ಈ ಕಥೆಗಳ ಅರ್ಥ ಹೋದ ಜೀವ ಮರಳಿ ಬಾರದು ಸರಿಯಾಗಿ ವಿಚಾರಿಸು ಎಂಬುದಾಗಿರುತ್ತದೆ. ಆದರೆ ಅಕ್ಷರಜ್ಞಾನವಿಲ್ಲದ ಕೊನೆಯ ಮಗ ಒಪ್ಪಿಕೊಂಡು ಕೊಲ್ಲಲು ಕರೆದುಕೊಂಡು ಹೋಗುತ್ತಾನೆ. ಅವಳನ್ನು ಕೊಲ್ಲಲು ಅವನು ಇಡಿ ಕಾಡಿಗೆ ಬೆಂಕಿಹಚ್ಚುವಂತಹದ್ದು ಅಲ್ಲಿಂದ ಅವಳು ಪಾರಾಗುತ್ತಾಳೆ. ಮುಂದೆ ಅವಳಿಗೆ ಮಗುವಾಗುತ್ತದೆ. ಮಗು ಆಸೆಯ ಫಲವಾಗಿ ಬದಲಾವಣೆ ಹೊಂದಿ ಬೇರೆ ರಾಜರ ಮಗು ಈಕೆಯ ಮಡಿಲಲ್ಲಿ ಈಕೆಯ ಮಗು ರಾಣಿಯ ಮಡಿಲಲ್ಲಿ ಬೆಳೆಯುತ್ತದೆ. ಆಗ ಇಲ್ಲಿಯೂ ಸಹ ಶೋಷಣೆ ನಡೆಯುತ್ತದೆ. ರಾಜ್ಯಬಿಟ್ಟು ಬೇರೆ ಊರಿನಲ್ಲಿದ್ದು ದಾನ ಮಾಡಲು ಪ್ರಾರಂಭಿಸುತ್ತಾಳೆ. ನಂತರ ಗಂಡ ದೊರೆಯುತ್ತಾನೆ. ಮಗನು ಸಹ ಒಂದಾಗಿ ಗಂಡ ಹೆಂಡಿರು ಸುಖದಿಂದ ಇರುತ್ತಾರೆ. ಇಷ್ಟು ಈ ಕತೆಯ ತಿರುಳು ಆದರೆ ಇಲ್ಲಿ ಮುಖ್ಯವಾಗಿ ನಾವು ಗಮನಿಸುವ ಅಂಶವೆಂದರೆ ಮಹಿಳೆಯನ್ನು ಶೋಷಣೆಗೆ ಒಳಪಡಿಸಲಾಗುತ್ತದೆ ಅದಕ್ಕೆ ಪುರುಷನು ಎಷ್ಟು ಕಾರಣ ಅಷ್ಟು ಸ್ತ್ರೀಯರು ಕಾರಣವೆಂದು ನನಗನ್ನಿಸುತ್ತದೆ. ಹೆಣ್ಣಿಗೆ ಹೆಣ್ಣೇ ಶತೃ ಎಂಬುದು ನಿಜವೆಂದು ತೋರುತ್ತದೆ. ಇಂದು ಶೋಷಣೆಯ ಸ್ವರೂಪ ಬದಲಾಗಿರಬಹುದು. ಆದರೆ ಕಾರಣವು ಒಂದೇ ಆಗಿರುತ್ತದೆ.

೨. ಸತ್ಯಶಿಲಾವತಿ

ಈ ಆಟದಲ್ಲಿ ರಾಜನ ಮಗನು ಯೌವನಾವಸ್ಥೆಗೆ ಬಂದಿದ್ದು ಅವನಿಗೆ ಮದುವೆ ಮಾಡಬೇಕೆಂದು ಮಂತ್ರಿಯ ಮುಂದೆ ರಾಜನು ಮಗನ ಬಗ್ಗೆ ಪ್ರಸ್ಥಾಪಮಾಡುತ್ತಾನೆ. ಆಗ ಮಂತ್ರಿ ಯುವರಾಜನಿಗೆ ವಧುವನ್ನು ಹುಡುಕುವ ಜವಬ್ದಾರಿ ನನ್ನದು ಎಂದು ರಾಜರಿಗೆ ಹೇಳುತ್ತಾನೆ. ಅದರಂತೆ ವಧು ಅನ್ವೇಷಣೆಗೆ ಹೊರಡುತ್ತಾನೆ. ಆ ಸಂದರ್ಭದಲ್ಲಿ ಮಂತ್ರಿಯ ಮಗ ದುರ್ಜಯನು ಬರುತ್ತಾನೆ. ತಂದೆಯ ಒಪ್ಪುಗೆಯ ಮೇರೆಗೆ ವದುವನ್ನು ಹುಡುಕುವ ಕಾರ್ಯದಲ್ಲಿ ದುರ್ಜಯ ತೊಡಗುತ್ತಾನೆ. ಅದರಂತೆ ಒಂದು ರಾಜ್ಯಕ್ಕೆ ಬರುತ್ತಾನೆ. ಅಲ್ಲಿದ್ದ ಶೀಲಾವತಿಯನ್ನು ನಿಶ್ಚಯ ಮಾಡಿಕೊಂಡು ಬಂದು ತನ್ನ ಮಗನಿಗೆ ಹೇಳುತ್ತಾನೆ. ಯುವ ರಾಜನಿಗೆ ವಧುವನ್ನು ನಿಶ್ಚಯ ಮಾಡಿದ್ದಾಯಿತು ಎಂದು ಪೋಟೋ ತೋರಿಸುತ್ತಾನೆ. ದುರ್ಜಯ ಆ ಪೋಟೋ ನೋಡುವುದೇ ತಡ ಶೀಲಾವತಿಯ ಮೇಲೆ ಮನಸ್ಸು ಮಾಡುತ್ತಾನೆ. ಅಪ್ಪ ತಂದೆ ನನಗೆ ಈಕೆ ಸರಿಯಾದ ಜೋಡಿ ನಾನೆ ಇವಳನ್ನು ಮದುವೆಯಾಗುತ್ತೇನೆ ಎಂದು ಕೇಳುತ್ತಾನೆ. ಆಗ ತಂದೆ ನಿರಾಕರಿಸುತ್ತಾನೆ ಮಗನು ತನ್ನ

ಅಪೇಕ್ಷೆಯನ್ನು ತನ್ನ ಮನದಲ್ಲಿ ಹಾಗೆಯೇ ಉಳಿಸಿಕೊಳ್ಳುತ್ತಾನೆ ಮದುವೆ ಸಂಭ್ರಮ ಪ್ರಾರಂಭವಾಗುತ್ತದೆ. ಯುವ ರಾಜನಿಗೆ ಮದುವೆಯಾಗುತ್ತದೆ. ಎಲ್ಲಾ ಕಾರ್ಯಗಳು ಮುಗಿಯುತ್ತವೆ. ಸ್ವಲ್ಪ ಕಾಲಾನಂತರದಲ್ಲಿ ಶಿಲಾವತಿ ಗರ್ಭಿಣಿಯಾಗುತ್ತಾಳೆ. ಹೆರಿಗಾಗಿ ತವರಿಗೆ ಹೋಗುತ್ತಾಳೆ. ಹೆರಿಗೆಯೂ ಸಹ ಆಗುತ್ತದೆ. ಆಗ ಆಕೆಗೆ ಗಂಡುಮಗು ಜನಿಸುತ್ತದೆ. ಆ ಮಗುವನ್ನು ಹಡೆದ ಬಾಣಂತಿಯನ್ನು ಕರೆತರಬೇಕಾಗಿರುತ್ತದೆ. ಅದೇ ಸಂದರ್ಭದಲ್ಲಿ ಸಡಗರ. ಸಂಭ್ರಮ ಮಾಡುವಂತದ್ದು ಅದಕ್ಕಾಗಿ ಯುವರಾಜ ತನ್ನ ಸ್ನೇಹಿತನಾದ ಮಂತ್ರಿಯ ಮಗ ದುರ್ಜಯನನ್ನು ಕಳಿಸಲು ಆಲೋಚಿಸುತ್ತಾನೆ. ಮಂತ್ರಿಗೆ ಈ ವಿಷಯ ತಿಳಿಸಿ ದುರ್ಜಯನನ್ನು ಕರೆಯಿಸಿ. ನನ್ನ ಹೆಂಡತಿಯನ್ನು ಮಗುವನ್ನು ಕರೆತರಬೇಕೆಂದು ಕೆಲಸ ಒಪ್ಪಿಸುತ್ತಾನೆ. ಆಗ ದುರ್ಜಯ ತನ್ನ ಪಣ ಹೀಗ ಪಲಿಸಿತೆಂದು ಹೊಳಗೊಳಗೆ ಖುಷಿಪಡುತ್ತಾನೆ. ಅದರಂತೆ ಆಕೆಯನ್ನು ಕರೆತರುವ ಸಂದರ್ಭದಲ್ಲಿ ದುರ್ಜಯನ್ನು ಆಕೆಯ ಮೇಲೆ ಬಲಾತ್ಕಾರ ಮಾಡಲು ಪ್ರಯತ್ನಿಸುತ್ತಾನೆ. ಆಗ ಶೀಲಾವತಿಯು ಅವನಿಂದ ತಪ್ಪಿಸಿಕೊಂಡು ಅಂಬಾಭವಾನಿ ದೇವಾಲಯದಲ್ಲಿ ಅವಿತುಕೊಂಡು ಕುಳಿತುಕೊಳ್ಳುತ್ತಾಳೆ. ದುರ್ಜಯನು ಅವಳನ್ನು ಹುಡುಕುತ್ತಾ ದೇವಿಯ ಬಾಗಿಲಿಗೆ ಬಂದು ಹೊರಗೆ ಬರುವಂತೆ ಕೇಳಿಕೊಳ್ಳುತ್ತಾನೆ. ಆಗ ತನ್ನ ಶೀಲ ಕಾಪಾಡಿಕೊಳ್ಳುವ ಸಲುವಾಗಿ ಅವಳು ಹೊರಗೆ ಬರುವುದಿಲ್ಲ ದುರ್ಜಯನ ನೇರವಾಗಿ ಹೋಗಿ ಆಕೆಯ ಮಗುವನ್ನು ಎತ್ತಿಕೊಂಡು ಬರುವಂತಹದ್ದು ನಂತರ ಆಕೆಯ ಮುಂದೆಯೇ ಆ ಮಗುವನ್ನು ಸಾಯಿಸುವಂತಹದ್ದು ಇವೆಲ್ಲವುಗಳನ್ನು ನೋಡಿದರೆ. ಈ ಕಥೆಯು 'ಕಡ್ಲಿ ಮಟ್ಟಿ ಸ್ಟೇಷನ್ ಮಾಸ್ತರ' ಎಂಬ ಕತೆಯಂತೆ ಇರುವುದು ನಮಗೆ ಕಂಡುಬರುತ್ತದೆ. ಆದರೆ, ವಿದ್ವಾಂಸರು, ಈ ಗೊಂದಲಿಗರ ಕತೆಗಳಿಂದಲೆ ಅದು ಸಿಡಿದು ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ ಆಗಿರಬಹುದೆಂದು ಭಾವಿಸುತ್ತಾರೆ. ಈ ಒಂದು ಚರ್ಚೆ ಬಹಳ ಅರ್ಥಪೂರ್ಣವಾದುದ್ದೆಂದು ನನಗೆ ಅನ್ನಿಸುತ್ತದೆ.

ಈ ಕತೆಯಲ್ಲಿ ಸ್ವತಃ ಸ್ನೇಹಿತನೇ ತನ್ನ ಸ್ನೇಹಿತನ ಹೆಂಡತಿಯನ್ನು ಬಯಸಿ ಆಕೆಯನ್ನು ಪಡೆಯಲು ಏನೆಲ್ಲ ಸಹಾಸಗಳನ್ನು ಮಾಡುವಂತಹದ್ದು ಬಹಳ ಮಾರ್ಮಿಕವಾಗಿ ಮೂಡಿ ಬಂದಿರುವಂತಹದ್ದು ಕಂಡುಬರುತ್ತದೆ. ಆಧುನಿಕತೆಯಲ್ಲಿಯೂ ಸಹ ಇಂತಹ ವ್ಯವಸ್ಥೆಗಳು ಕಂಡುಬರುವಂತಹದ್ದು. ಈ ಆಟಗಳ ಉದ್ದೇಶ ಜನರಲ್ಲಿ ಒಳ್ಳೆಯ ನಡೆತೆಗಳು ಬರಲಿ ಅವರು ಮೌಲ್ಯಯುತವಾದ ಜೀವನ ನಡೆಸಲಿ ಎಂಬುದಾಗಿದೆ.

೩. 'ವಿಘ್ನಾವತಿ'

ಹೆಸರೇ ಸೂಚಿಸುವಂತೆ ಜೀವನದಲ್ಲಿ ಬರೀ ವಿಘ್ನಗಳನ್ನೇ ತಂದೊಡ್ಡುವಂತಹ ಮಹಾನ್ ರಾಕ್ಷಸಿ ಯಾದಂತಹವಳು ಈ ವಿಘಾವತಿ ತನ್ನ ಏಳುಜನ ಸವತಿಯರನ್ನು

ಶೋಷಿಸುತ್ತ ತನ್ನ ಮೈಸುಖವನ್ನು ರಾಜನೊಂದಿಗೆ ಪಡೆಯುವಂತಹದ್ದು ಇಲ್ಲಿ ಕಂಡು ಬರುತ್ತದೆ. ಚಿತ್ರವತಿ ಪಟ್ಟಣದಲ್ಲಿ ಚಿತ್ರಸೇನ್ ಎಂಬ ಮಹಾರಾಜ ಆಳ್ವಿಕೆ ನಡೆಸುತ್ತಿದ್ದು. ರಾಜ್ಯದಲ್ಲಿ ಸುಭಿಕ್ಷೆಯಿಂದ ರಾಜ್ಯಭಾರ ಮಾಡುತ್ತಿರುತ್ತಾನೆ ಈತನಿಗೆ ಏಳು ಜನರಾಣಿಯರು. ಹೀಗೆ ರಾಜ್ಯ ಆಳೋ ಸಂದರ್ಭದಲ್ಲಿ ಯುಗಾದಿ ಪಾಡ್ಯಬಂತು ಕರಿಬ್ಯಾಟಿ ಮಾಡುವಸಲುವಾಗಿ ರಾಜ ಎಲ್ಲರನ್ನು ಕರೆದುಕೊಂಡು ಬ್ಯಾಟಿ ಆಡಲಿಕ್ಕೆ ಸಿದ್ದನಾಗುತ್ತಾನೆ. ಏಳು ಜನ ರಾಣಿಯರು ರಾಜನನ್ನು ಬೀಳ್ಕೊಡುತ್ತಾರೆ. ಬೇಟೆಯ ಸಂದರ್ಭದಲ್ಲಿ ಸಂಜೆಯ ಸಮಯದಲ್ಲಿ ರಾಜ ಕಾಡಿನಲ್ಲಿ ಎಲ್ಲಾ ಪರಿವಾರದೊಂದಿಗೆ ಉಳಿದುಕೊಳ್ಳುತ್ತಾನೆ. ಅದರಂತೆ ಬೇಟೆಗೆಂದು ಬಂದ ವಿಘ್ನಾವತಿ ರಾಕ್ಷಸಿ ಅದೇ ಸಂದರ್ಭದಲ್ಲಿ ರಾಜನ ಪರಿವಾರವೆಲ್ಲನೋಡಿ ನನಗೆ ಮದುವೆಯಾಗಿಲ್ಲ ಇದರಲ್ಲಿ ಚೆಂದಾನ ಚಲುವಿದ್ದಾನೆ ಅವನಿಗೆ ಮದುವೆ ಆಗಬೇಕು ಅಂದುಕೊಂಡು ವಿಘ್ನಾವತಿ ರಾಕ್ಷಸಿ ಬರುತ್ತಾಳೆ. ಎಲ್ಲರನ್ನು ನೋಡಿ ಇವರೆಲ್ಲರನ್ನು ತಿನ್ನಬಹುದಿತ್ತಲ್ಲ ನಮ್ಮಕ್ಕ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಅಂದುಕೊಂಡು ರಾಜನ ಡೇರಾ ತೆಗೆದು ನೋಡುತ್ತೈತಿ, ಆಗ ಸುಂದರವಾದ ರಾಜ ಇದರ ಕಣ್ಣಿಗೆ ಬಿದ್ದು ಅವಾಗ ಇವನು ನನಗೆ ಸರಿಯಾದ ಗಂಡ ಅನುಕೊಂಡು ಈ ರಾಜ ನನ್ನ ಇದೆರೂಪದಾಗ ನೋಡಿದರ ಮದುವೆ ಆಗಾಂಗಿಲ್ಲ ಅಂದುಕೊಂಡು ರೂಪವತಿಯಾಗಿ ಅವನ ಮಂಚದ ಮಗ್ಗಲಿಗೆ ಕುಂದ್ರತೈತಿ ರಾಜ. ಎದ್ದನೋಡತಾನ ಸುಂದರ ಯುವತಿ, ಏನಿದು. ಈ ವ್ಯಾಳ್ಯದಾಗ ಇಲ್ಯಾಕ ಬಂದಿ ಅಂತ ಕೇಳತಾನ ರಾಜ, ಅವಳು ಹೇಳುತಾಳ ನನ್ನ ತಂದೆಯವರು ನನ್ನ ಅಡಿವೆಯಲ್ಲಿ ಬಿಟ್ಟು ಹೋಗ್ಯಾರು ಅದಕ್ಕಾ ನಾ ಹಿಂಗ ಬಂದೆ ಅಂತ ಹಿಂದಿನ ವೃತಾಂತ ತಿಳಿಸತಾಳ ನಂತರ ನಾನು ನಿನ್ನ ಇಷ್ಟ ಪಟ್ಟಿನಿ ಅಂತಂದು ಏಳತಾಳ ರಾಜಗ ಅವಳ ರೂಪನೋಡಿ ಮಾರು ಹೋಗಿ ಬಿಟ್ಟಿರುತಾನ ಒಪ್ಪಿಗೆಕೊಡುತಾನ ಅವಳನ್ನು ಅಲ್ಲೇ ಮಲಿಗಿಸಿಕೊಳ್ಳುತ್ತಾನೆ. ಮುಂಜಾನೆ ಸೈನಿಕರು ಮಂತ್ರಿಗಳು ಈಕಿನ ನೋಡತ್ತಾರ. ಅವರು ರಾಜಗ ಕೇಳತಾರ ರಾಜ ಎಲ್ಲಾ ವೃತ್ತಾಂತ ಹೇಳುವಂತಹದ್ದು ಬ್ಯಾಡ್ರಿ ರಾಜ ಇವಳಿಗೆ ಮದಿವಿ ಆಗಬ್ಯಾಡ್ರಿ. ಅಂತಂದ್ರು ಅದಕ್ಕೆ ಒಪ್ಪದ ರಾಜ ಆಕೆಯನ್ನು ಕರದುಕೊಂಡು ಬಂದು ಮದಿವಿ ಆಗತಾನ ನಂತರ ತನ್ನ ಶೌರ್ಯ ಪರಾಕ್ರಮವನ್ನು ವಿಘ್ನಾವತಿಯ ಮುಂದ ತೋರಿಸಿಕೊಳ್ಳಬೇಕೆಂಬ ಹಂಬಲ ರಾಜಂದು ಇಡೀ ರಾಜ್ಯದಾಗ ಹೊಕ್ಕೈತಿ ವಿಘ್ನಾವತಿ ರಾಕ್ಷಸಿ ಮನುಷ್ಯರನ್ನು ಧನಕರುಗಳನ್ನುತಿಂದುಬಿಡತ್ತದೆ. ರಾತ್ರಿಯ ವೇಳೆದಾಗ ಕುದುರಿಗಳನ್ನು ಸಂವಾರ ಮಾಡಬೇಕಂತ ಮೊದಲೇ ತಂದು ಕಟ್ಟಿಸಿದ್ದ ಕುದುರಿಗಳನ್ನು ಆನೇಗಳನ್ನು ಒಂಟಿಗಳನ್ನು ತಿಂದುಬಿಡುತ್ತದೆ. ನಂತರ ರಾಜನ ದೊರೆತನ ನೋಡಲು ಎಷ್ಟಾದ್ರೂ ಹಣಖರ್ಚಾ ಆದರೂ ಪರವಾ ಇಲ್ಲಂದು ಕರಿ ಕುದುರೆಯನ್ನು ತಂದ ನಿಲ್ಲಸ್ತಾರ ಅದನ್ನು ಅತ್ತಿ ಪಳಗಸ್ತಾ ಇರೋವಾಗ ವಿಘ್ನಾವತಿ

ಕಣ್ಣು ರಾಜನ ಪರಾಕ್ರಮದ ಮೇಲೆ ಇಲ್ಲ ಇಡಿ ಊರಿನ ಜನರ ಮೇಲೆ ಇರುತ್ತದೆ. ಈ ಜನರನ್ನು ಹೇಗೆ ತಿನ್ನಲಿ ಎಂಬ ಆನಂದ ಅದಕ್ಕ ಅದರಂತೆ ನೋಡತ್ತಿರುವಾಗ ರಾಜನ ಏಳು ಜನ ರಾಣಿಯರು ಕಣ್ಣಿಗೆ ಬೀಳುತ್ತಾರೆ. ತನ್ನ ದಾಸಿಯರನ್ನು ಕರೆಸಿ ಕೇಳತಾಳ ಅವರು ನಿನ್ನ ರಾಜನ ಏಳು ಜನ ಹೆಂಡಂದಿರು ಎಂದು ತಿಳಿಯುತ್ತದೆ. ವಿಘ್ನಾವತಿ ಸವತಿ ಮತ್ಸರದಿಂದ ತನಗೆ ಯಾವುದೇ ರೋಗಬರದಿದ್ದರೂ ತನಗೆ ಹೊಟ್ಟೆ ನೋವು ಆಗಿದೆ ಎಂದು ರಾಜನನ್ನು ಕರೆಕಳುಹಿಸುತ್ತಾಳೆ. ಆಗ ರಾಜ ಇದಕ್ಕೆ ಕಾರಣವೇನೆಂದು ಕೇಳುತ್ತಾನೆ. ಅದಕ್ಕೆ ಪ್ರತಿಯಾಗಿ ವಿಘ್ನಾವತಿ ಆ ಏಳು ಜನರ ದೃಷ್ಠಿತಾಗಿದೆ. ಅದಕ್ಕಾಗಿ ನನಗೆ ಹೊಟ್ಟೆ ನೋವು ಬಂದಿದೆ ಎಂದು ಹೇಳುವಂತಹದ್ದು. ಆಗ ಇದಕ್ಕೆ ಪರಿಹಾರವೇನು ರಾಣಿಯೆಂದು ಕೇಳಲು ಆ ಏಳು ಜನರಾಣಿಯರ ಕಣ್ಣುಗಳನ್ನು ಕೀಳಬೇಕು ಅವರನ್ನು ಸಾಯಿಸಿ ಬರಬೇಕೆಂದು ಆಗ ನನಗೆ ಹೊಟ್ಟೆ ನೋವು ಕಡಿಮೆಯಾಗುವುದಾಗಿ ತಿಳಿಸುತ್ತಾಳೆ. ಅದರಂತೆ ರಾಜನು ಮಂತ್ರಿಯನ್ನು ಬರ ಹೇಳಿ ಅವರ ಕಣ್ಣುಗಳನ್ನು ಕಿತ್ತು ತರಬೇಕು ಅವರನ್ನು ಅಲ್ಲಿಯೇ ಸಾಯಿಸಿಬರಬೇಕೆಂದು ಹೇಳುವಂತಹದ್ದು ಅದರಂತೆ ನಡೆಯಬೇಕಾದದ್ದು ಮಂತ್ರಿಯ ಕರ್ತವ್ಯವಾಗಿದ್ದರಿಂದ ಅದನ್ನು ಪಾಲಿಸಲು ಹೊರಡುತ್ತಾನೆ ಮಂತ್ರಿ, ತಂದಂತಹ ಕಣ್ಣುಗಳಿಂದ ಆಕಣ್ಣುಗಳ ಮೇಲೆ ಸ್ನಾನ ಮಾಡುವುದು ಎಂದುಕೊಂಡು ರಾಣಿ ಇರುತ್ತಾಳೆ. ನಂತರ ಮಂತ್ರಿಯು ಏಳು ಜನ ರಾಣಿಯರನ್ನು ಕರೆದುಕೊಂಡು ಹೋಗಿ ಅವರನ್ನು ಸಾಯಿಸುವ ಸಂದರ್ಭದಲ್ಲಿ ಮನಸ್ಸು ಕರಗುತ್ತದೆ. ಬಸರಿ ಹೆಂಗಸರನ್ನು ಹೇಗೆ ಕೊಲ್ಲುವುದು; ಕೊಲ್ಲದಿದ್ದರೆ ನನ್ನ ಪ್ರಾಣ ತೆಗೆಯುತ್ತಾನೆ. ರಾಜ ಎಂದು ತಿಳಿದುಕೊಂಡು ನಿಮ್ಮೆಲ್ಲರ ಕಣ್ಣುಗಳನ್ನು ನನಗೆ ಕಿತ್ತುಕೊಡಬೇಕು ಇಲ್ಲದಿದ್ದರೆ ರಾಜನು ನಮ್ಮನ್ನು ಸುಮ್ಮನೆ ಬಿಡುವುದಿಲ್ಲವೆಂದು ಹೇಳಿ ಹದಿನಾಲ್ಕು ಕಣ್ಣುಗಳನ್ನು ಕಿತ್ತುಕೊಂಡು ಅವರನ್ನು ನೀವು ಎಲ್ಲಿಯಾದರೂ ಬದುಕಿಕೊಳ್ಳಿ ಎಂದು ಹೇಳಿ ಹೊರಟು ಹೋಗುತ್ತಾನೆ. ಕಣ್ಣು ಕಾಣದ ಈ ರಾಣಿಯರು ಅನ್ನ ನೀರಿಗಾಗಿ ಪರಿತಪಿಸುವಂತಹದ್ದು, ಒಬ್ಬರ ಹಿಂದೆ ಒಬ್ಬರು ಹೋಗುವಂತಹ ಸಂದರ್ಭದಲ್ಲಿ ಹಕ್ಕಿಗಳು, ಪಕ್ಷಿಗಳು ಇವರ ಗೋಳಾಟವನ್ನು ನೋಡಿ ಇವರಿಗೆ ಸರಿಯಾದ ದಾರಿಯನ್ನು ತೋರಿಸುತ್ತವೆ. ಒಂದು ಗವಿಯ ಹತ್ತಿರ ತಂದು ಅಲ್ಲಿರುವ ಹದಿನಾರು ಮೆಟ್ಟಿಲ ಬಾವಿಯನ್ನು ತೋರಿಸಿ ಅಲ್ಲಿ ನೀರು ಕುಡಿಯಿರಿ, ಹಣ್ಣು, ಹಂಪಲಗಳನ್ನು ತಿಂದು ಜೀವಿಸಿರಿ ಎಂದು ಹೊರಟು ಹೋಗುತ್ತವೆ. ಕಾಲನಂತರದಲ್ಲಿ ರಾಣಿಯರು ಬ್ಯಾನಿ ತಿನ್ನಲು ಪ್ರಾರಂಭಿಸುತ್ತಾರೆ. ಅವರಲ್ಲಿ ಆರು ಮಂದಿ ರಾಣಿಯರಿಗೆ ಹೆಣ್ಣು ಮಗು ಹುಟ್ಟುತ್ತವೆ. ಕೊನೆಯ ರಾಣಿಯಾದ ಪದ್ಮಾವತಿಗೆ ಗಂಡು ಮಗು ಜನಿಸುತ್ತದೆ. ಆಗ ಆ ರಾಣಿಯರು ಆ ಆರು ಹೆಣ್ಣು ಮಕ್ಕಳಿಗೆ ಬಾವಿಯಲ್ಲಿ ಎಸೆದು ಗಂಡು ಮಗುವನ್ನು ರಕ್ಷಿಸುವ ಎಂದು

ಮಾತಾಡಿಕೊಂಡು ಎಸೆದು ಬಿಡುತ್ತಾರೆ. ಈ ಒಂದು ದೃಷ್ಯವನ್ನು ನೋಡಿದರೆ ಹೆಣ್ಣು ಭೂಮಿಯ ಮೇಲೆ ಹುಟ್ಟಬಾರದು ನಾವು ಪಡುವ ಶೋಷಣೆಯೇ ಸಾಕೆಂದು ಅವರು ಭಾವಿಸಿರುವುದು ಸಮಂಜಸವೇನಿಸುತ್ತದೆ. ಆದರಂತೆ ಈ ಸಮಾಜದಲ್ಲಿ ಮಹಿಳೆಯನ್ನು ನಡೆಸಿಕೊಳ್ಳಲಾಗುತ್ತದೆ. ಇನ್ನೊಂದು ಕಡೆ ಹೇಳುವ ನಾಣ್ಣುಡಿಯಂತೆ "ಹೆಣ್ಣು ಹುಟ್ಟಿದ ಮನೆಗೆ ಹುಣ್ಣು ಹುಟ್ಟಿದಂತೆ" ಎಂಬುದು ಇಲ್ಲಿ ಪ್ರಮುಖವಾಗುತ್ತದೆ. ನಂತರ ಈ ಏಳು ಜನ ರಾಣಿಯರು ಗಂಡು ಮಗುವನ್ನು ಬೆಳೆಸಿ ವಿದ್ಯಾವಂತನಾಗಿಸುವುದು ಆತನಿಗೆ 'ಚಂದ್ರೋಜಿಕಮಾರ' ಎಂದು ನಾಮಕರಣ ಮಾಡುತ್ತಾರೆ. ಆತನು ಬೇಟೆಗೆ ಹೊರಡುವಂತಹದ್ದು ಆ ರಾಣಿಯರು ಆತನಿಗೆ ನೀನು ಉತ್ತರ ದಿಕ್ಕಿನ ಕಡೆಗೆ ಹೋಗಬೇಡ ದೆವ್ವ, ರಾಕ್ಷಸ ಇದೆ ಅದು ನಿನ್ನನ್ನು ತಿಂದು ಬಿಡುತ್ತದೆ ಎಂದು ಹೇಳುತ್ತಾರೆ. ಆದರೆ ಅತ್ತಕಡೆಯೇ ಹೋಗಬೇಕೆಂಬ ಕುತೂಹಲ ಆತನದು. ಅದರಂತೆ ಅತ್ತಕಡೆಯೇ ಬೇಟೆಗೆ ಹೋಗುತ್ತಾನೆ. ಅಲ್ಲಿ ಊರು ಇರುವಂತಹದ್ದು ಕಂಡು ಆ ಊರಿಗೆ ಬರುತ್ತಾನೆ. ಅಲ್ಲಿರುವ ಶೆಟ್ಟಿಯ ಮನೆಗೆ ಬಂದು ಎಲ್ಲಾ ವಿಷಯ ಹೇಳುತ್ತಾನೆ. ಆಗ ಆತನ ವೃತ್ತಾಂತ ತಿಳಿದು ಆತನನ್ನು ಸತ್ಕರಿಸಿ ಇತ್ತಕಡೆ ಬರಬೇಡ ಹೋಗು ಎಂದು ಏಳುವಂತಹದ್ದು ನಂತರ ಅವನು ಎರಡನೇ ಬಾರಿ ಆ ಊರಿಗೆ ಬಂದಾಗ ವಿಘ್ನಾವತಿಗೆ ಕಾಣಿಸಿಕೊಳ್ಳುತ್ತಾನೆ. ಯಾರಿತ ಎಂದು ತನ್ನ 'ನೀಲಿ ಹೊತ್ತಿಗೆ' ತೆಗೆದು ನೋಡುತ್ತಾಳೆ. ಅದರಲ್ಲಿ ಈತ ರಾಕ್ಷಸ ಕುಲಕ್ಕೆ ಗಂಡನೆಂದು ತಿಳಿದುಬರುತ್ತದೆ. ಈ ಸವತಿಯರು ಸತ್ತಿಲ್ಲ ಈ ಮಗುವನ್ನು ಹೇಗಾದರೂ ಮಾಡಿ ಕೊಲ್ಲಬೇಕೆಂದು ನಾಟಕ ಮಾಡುತ್ತಾಳೆ. ಮತ್ತೊಮ್ಮೆ ವಿಘ್ನಾವತಿ ಹೊಟ್ಟೆನೋವು ಬಂದಿದೆ ಎಂದು ರಾಜನಿಗೆ ಹೇಳುತ್ತಾಳೆ. ಅದಕ್ಕೆ ಪರಿಹಾರವೇನೆಂದು ಕೇಳಿದಾಗ ಪಾರಿಜಾತದ ಹೂವು ತರಬೇಕೆಂದು ಆಗ ನನ್ನ ಕಾಯಿಲೆ ವಾಸಿಯಾಗುತ್ತದೆ ಎಂದು ಹೇಳುತ್ತಾಳೆ ಎಲ್ಲರೂ ಊರಿನ ಪ್ರಜೆಗಳು ತರತರದ ಹೂವುಗಳನ್ನು ತಂದು ಸುರುವುತ್ತಾರ. ಇವ್ಯಾವು ಅಲ್ಲವೆಂದು ಪಾರಿಜಾತವೇ ಬೇಕೆಂದು ಹೇಳುವಾಗ ಡಂಗುರ ಸಾರುತ್ತಾನೆ. ಪಾರಿಜಾತದ ಹೂವು ತಂದವರಿಗೆ ರಾಜ್ಯವನ್ನು ಕೊಡುವುದಾಗಿ ಹೇಳುತ್ತಾನೆ. ಇದನ್ನು ಕೇಳಿಸಿಕೊಂಡ ಚಂದ್ರೋಜಿಕುಮಾರನು. ಅದನ್ನು ತರಲು ಒಪ್ಪುತ್ತಾನೆ. ಆಗ ವಿಘ್ನಾವತಿಗೆ ಸಂತೋಷವಾಗುತ್ತದೆ. ಆದರೆ ಇವನು ಸುಳ್ಳು ಹೇಳುತ್ತಿದ್ದಾನೆ. ಇವನಿಗೆ ಗಲ್ಲಿಗೇರಿಸಿ ಆಗಲೇ ನನ್ನ ಹೊಟ್ಟೆನೋವು ವಾಸಿಯಾಗುವುದು ಎಂದು ಹೇಳುತ್ತಾಳೆ ಅದರಂತೆ ಮಾಡಲು ರಾಜ ಅವನನ್ನು ಕಂಬಕ್ಕೆ ಕಟ್ಟಿಸುತ್ತಾನೆ. ಶೆಟ್ಟಿಯು ಇದನ್ನು ತಡೆದು. ಅದಕ್ಕೆ ಸಾಕ್ಷಿಯಾಗಿ ನಿಲ್ಲುತ್ತಾನೆ. ಇವನು ಹೂವು ತರದಿದ್ದರೆ. ನನ್ನನ್ನು ಗಲ್ಲಿಗೆ ಬಲಿಕೊಡಬಹುದು ಎಂದು ಹೇಳುವಂತಹದ್ದು ನಂತರ ಶೆಟ್ಟಿ ನನ್ನ ಪ್ರಾಣ ಉಳಿಸಿ ತನ್ನ ಪ್ರಾಣವನ್ನು ಬಲಿಕೊಡಲು ಹೊರಟಿದ್ದು. ಇದನ್ನು ತಪ್ಪಿಸಬೇಕಾದರೆ ನಾನು ಹೂವು

ತರಲೇಬೇಕೆಂದು ಹುಡುಕತ್ತ ಭಾವಾಜಿಯ ಹತ್ತಿರಬರುತ್ತಾನೆ. ಅದಕ್ಕೆ ಬಾವಾಜಿ ದಾರಿತೋರಿಸುತ್ತಾನೆ. ರಾಕ್ಷಸರನ್ನು ಸಂಹರಿಸಿ ಪಾರಿಜಾತವನ್ನು ತರುತ್ತಾನೆ. ತಂದು ವಿಘ್ನಾವತಿಗೆ ಒಪ್ಪಿಸಲು ನನ್ನ ಮನೆಯಲ್ಲಿ ಈ ವಿಷಯವನ್ನು ತಿಳಿಸಬೇಕಾಗಿದೆ. ಅಲ್ಲಿಗೆ ಹೋಗಿ ಬರುವಂತೆ ಹೇಳುತ್ತಾಳೆ. ನಂತರ ಬಾವಾಜಿಯ ಸಹಾಯದ ಮೇರೆಗೆ ಆ ರಾಕ್ಷಸರನ್ನು ಸಾಯಿಸಿ ಬಂದು ತನ್ನ ತಾಯಿಯರ ಕಣ್ಣುಗಳನ್ನು ಬರಿಸುವಂತಹದ್ದು ತನ್ನ ತಂದೆ ಯಾರೆಂಬುದು ತಿಳಿದು ವಿಘ್ನಾವತಿಯ ನಿಜರೂಪ ಬಯಲು ಮಾಡಿ ಆಕೆಯನ್ನು ಸಾಯಿಸಿ ತನ್ನ ತಂದೆ ತಾಯಿಯರನ್ನು ಒಂದುಗೂಡಿಸುವಂತಹದ್ದು ಕಾಣಬಹುದಾಗಿದೆ. ಹೀಗೆ ಈ ಎಲ್ಲಾ ರೀತಿಯಲ್ಲಿ ವಿಘ್ನಾವತಿಯು ಇಡೀ ಊರನ್ನು ನಾಶ ಮಾಡಬಯಸಿದ್ದು ಮತ್ತು ತನ್ನ ದೇಹ ಸುಖಕ್ಕೋಸ್ಕರ ಏಳು ಜನ ರಾಣಿಯರನ್ನು ಅಡವಿಗೆ ಕಳಿಸುವಂತಹದ್ದು ಹೀಗೆ ಒಂದು ಹೆಣ್ಣನ್ನು ಮತ್ತೊಂದು ಹೆಣ್ಣು ಶೋಷಿಸುವುದು ಇಲ್ಲಿ ಕಂಡುಬರುತ್ತದೆ. ಈ ಆಟದ ತಾತ್ಪರ್ಯ ಸವತಿ ಮತ್ಸರ ಹೇಗೆ ಪ್ರತಿಬಿಂಬಿತವಾಗಿದೆ ಎಂಬುದು ತಿಳಿಯಬಹುದಾಗಿದೆ.

೪. ಬಾಳ ಬಿಕ್ಷುಕ

ಕಾಶಿಗಿರಿ ಪಟ್ಟಣದಲ್ಲಿ ಸಾವಚಿತ್ತ ಮಹಾರಾಜ ಆತನ ಮಡದಿ ಪೂಲಾವತಿ ರಾಜನು ಧರ್ಮ ನಿಷ್ಟನಾಗಿದ್ದನು ಹೆಂಡತಿಯು ಸಹ ಒಳ್ಳೆಯವಳಾಗಿದ್ದಳು ದಿನ ಕಳೆದಂತೆ ಪೂಲಾವತಿಗೆ ಆರು ತಿಂಗಳು ತುಂಬಿದವು ನಂತರ ಕೆಲವುದಿನಗಳಲ್ಲಿ ಬ್ಯಾನಿ ತಗುಲಿದವು ಆಕೆಗೆ ಜನನವಾಗುವ ಸಂದರ್ಭದಲ್ಲಿ ಒಬ್ಬ ಗಂಡು ಮಗು ಜನಿಸಿದನು ಆ ಮಗುವನ್ನು ಸರಿಯಾದ ನಕ್ಷತ್ರದಲ್ಲಿ ಹುಟ್ಟಿದೆಯಾ ಎಂದು ತಿಳಿಯಲು ಚಿಂತಾಮಣಿಯ ಯಂಕಂಭಟ್ಟರನ್ನು ಕರೆಯಿಸಿ ಜೊತಿಷ್ಯ ಕೇಳುತ್ತಾರೆ. ಆಗ ಜ್ಯೋತಿಷ್ಯದಲ್ಲಿ ಈ ಮಗು ಹುಟ್ಟಿದ ಇಪ್ಪತ್ತು ದಿನಗಳಲ್ಲಿ ತಂದೆ ತಾಯಿಗೆ ಮರಣವೆಂದು ಇರುತ್ತದೆ. ಇದನ್ನು ಕೇಳಿದ ಅವರು ಇದಕ್ಕೆ ಪರಿಹಾರವನ್ನು ಭಟ್ಟರಿಗೆ ಕೇಳುತ್ತಾರೆ. ಈ ಮಗುವಿಗೆ ಆರು-ಎಂಟು ದಿನದ ಮಗುವಿನೊಡನೆ ಅಥವಾ ಹೇಗಾದರೂ ಸರಿ ಮಗುವಿಗೆ ಮದುವೆ ಮಾಡಬೇಕು ಎಂದು ತಿಳಿಸುತ್ತಾನೆ. ಅದರಂತೆ ಮಂತ್ರಿಯು ಈ ಮಗುವಿಗೆ ಕನ್ಯೆಯನ್ನು ಹುಡುಕಲು ಹೊರಡುತ್ತಾನೆ. ಎಲ್ಲೂ ಆ ತರಹದ ಹೆಣ್ಣು ಸಿಗುವುದಿಲ್ಲ. ಭದ್ರಾವತಿ, ಪಟ್ಟಣದಾಗ ಬದ್ರಸೇನ 'ಮಹಾರಾಜ' ಆತನ ಮಡದಿ ಮಹಾದೇವಿ ಇವರ ಮಗಳು ಪದ್ಮಾವತಿ ಇವಳಿಗೆ ಹನ್ನೆರಡು ವರುಷ ಋತುಮತಿಯಾಗಿದ್ದಾಳೆ. ಇವಳನ್ನು ನಿಶ್ಚಯ ಮಾಡಬೇಕೆಂದು ಮಂತ್ರಿಯು ಒಂದು ಪತ್ರ ಬರೆಯುತ್ತಾನೆ. ಈ ಮಗುವಿನ ಬಗ್ಗೆ ಅಂದರೆ ಈ ಯುವರಾಜ ಸಾಮಾನ್ಯನಲ್ಲ ವೀರಧೀರ ಸಕಲ ವಿದ್ಯಾಪಂಡಿತ ಕೆಲಸದ ತೊಂದರಿಯಿಂದ ನನಗೆ ಬರಲಿಕ್ಕೆ ಆಗಲಿಲ್ಲ ಆದ್ದರಿಂದ ನನಗೆ ವಧುವನ್ನು ಕೊಡಬೇಕೆಂದು ಬರೆಯುತ್ತಾನೆ. ಅದನ್ನು ತೆಗೆದುಕೊಂಡು ಹೋಗಿ ರಾಜನಿಗೆ ತೋರಿಸುತ್ತಾನೆ ವರನನ್ನು

ನೋಡಬೇಕೆಂದು ಕೇಳಿದಾಗ ಈ ಪತ್ರದಲ್ಲಿರುವ ವಿವರಣೆ ಅವರಿಗೆ ತಿಳಿಸುತ್ತಾನೆ. ಅದನ್ನು ತಿಳಿದ ರಾಜ ತನ್ನ ಮಗಳನ್ನು ಕೊಡಲು ಒಪ್ಪುತ್ತಾನೆ. ನಂತರ ಮದುವೆಯಾಗುತ್ತದೆ. ಆ ಮೇಲೆ ಆ ತೊಟ್ಟಿಲಿನಲ್ಲಿರುವ ಮಗುವನ್ನು ಪದ್ಮಾವತಿಯನ್ನು ಅರಣ್ಯದಲ್ಲಿಯೇ ಬಿಟ್ಟು ಮಧ್ಯ ರಾತ್ರಿಯೇ ಹೋಗಿಬಿಡುತ್ತಾರೆ. ಆಗ ಮಂತ್ರಿ ಒಂದು ಪತ್ರ ಬರೆದಿಡುತ್ತಾನೆ. ಇವನೇ ನಿನ್ನ ಗಂಡ ನಾವು, ನಮ್ಮ ರಾಜನಿಗೆ ಕಂಠಕವಿರುವುದರಿಂದ ಹೀಗೆ ಮಗುವಿಗೆ ಮದುವೆ ಮಾಡಬೇಕಾಯಿತು ಎಂಬುದನ್ನ ವಿವರವಾಗಿ ಬರೆಯಲಾಗುತ್ತದೆ. ಅದನ್ನು ಓದಿ ಆಕೆಗೆ ಬಹಳ ಕೋಪ ಬರುತ್ತದೆ. ಮಗುವನ್ನು ಹಿಡಿದು ಗರಗರನೆ ತಿರುಗಿಸುವಂತಹ ಸಂದರ್ಭದಲ್ಲಿ ಆಕೆಗೆ ಶಿವನು ಕರುಣೆಯನ್ನು ದಯಪಾಲಿಸುತ್ತಾನೆ. ಅವಳು ಶಾಂತಳಾಗುತ್ತಾಳೆ. ಮಗುವನ್ನು ಹೊತ್ತುಕೊಂಡು ಅರಣ್ಯದಲ್ಲಿ ನಡೆದಾಡುತ್ತಾಳೆ. ಈ ಸನ್ನಿವೇಶ ನೋಡಿದ ದೇವಲೋಕದ ಗರುಡಗಳು ಆಕೆಗೆ ಮಗುವಿಗೆ ನೆರಳನ್ನು ಮಾಡುತ್ತವೆ. ಅದರಂತೆ ಒಂದು ಗಿಡದವರೆಗೆ ಆಕೆಯನ್ನು ತಲುಪಿಸುವಂತಹದ್ದು, ನಂತರ ಆ ಮಗುವಿಗೆ ನೀರು ತಂದು ಕುಡಿಸುತ್ತಾಳೆ. ಇಬ್ಬರೂ ನಿದ್ರಿಸುತ್ತಾರೆ. ಈ ಸಂದರ್ಭದಲ್ಲಿ ಅಪರಾತ್ರಿ ವೇಳೆ ಮಗುವಿಗೆ ಹಸಿವು ಆಗುತ್ತದೆ. ಅದು ಅಳಲು ಪ್ರಾರಂಭಿಸುತ್ತದೆ. ಅದೆ ಹೊತ್ತಿನಲ್ಲಿ ಹುಲಿಯು ಹಸಿವಿನಿಂದ ಬಳಲುತ್ತಿತ್ತು ಆದರೆ ಅದರ ಮಕ್ಕಳಿಗೂ ಆಹಾರ ವಿರಲಿಲ್ಲ ಆಹಾರ ಉಡುಕಿಕೊಂಡು ಬಂತು ಕೆರೆ ನೀರು ಕುಡಿದು ಹೋಗುವ ಸಂದರ್ಭದಲ್ಲಿ ಮಗು ಅಳುವುದು ಅದಕ್ಕೆ ಕೇಳಿಸಿತು ಆಗ ಮಗುವನ್ನು ಹುಲಿಯು ನೋಡಿ ನನ್ನ ಆಹಾರ ಇದಲ್ಲ ಇದು ನನ್ನ ಮಕ್ಕಳಿಗೆ ಅಂದುಕೊಂಡು ಮಗುವನ್ನು ಎತ್ತಿಕೊಂಡು ಹೋಗುತ್ತದೆ. ಎರಡು ಹುಲಿಗಳು ಎಳೆದಾಡುತ್ತಾವೆ. ಅದೇ ಹೊತ್ತಿನಲ್ಲಿ ಬೇಟೆಗಾರ ಬರುತ್ತಾನೆ ಮಗುವನ್ನು ರಕ್ಷಿಸುತ್ತಾನೆ. ಮಗುವನ್ನು ತೆಗೆದುಕೊಂಡು ಬರುವ ದಾರಿಯಲ್ಲಿ ಪದ್ಮಾವತಿ ತೊಟ್ಟಿಲಿಗೆ ಬಿದ್ದು ಅಳುತ್ತಿರುತ್ತಾಳೆ. ಬಾಳಬಿಕ್ಷುಕ ರಾಜ ನನ್ನನ್ನು ವಿಧವೆಯನ್ನಾಗಿ ಮಾಡಿಹೋದೆಯಾ ಎಂದು ಅಳುತ್ತಿರುವುದನ್ನು ಈ ಬೇಟೆಗಾರನು ನೋಡುತ್ತಾನೆ. ಏನೆಂದು ವಿಚಾರಮಾಡುತ್ತಾನೆ. ಆಗ ನನ್ನ ಗಂಡ ನನಗೆ ಯಾವುದೇ ಹಿಂಸೆ ನೀಡಿಲ್ಲ ಅಂತವ ನನ್ನ ಗಂಡನಲ್ಲ ಈ ತೊಟ್ಟಿಲಿನಲ್ಲಿರುವ ಮಗುವೇ ನನ್ನ ಗಂಡನೆಂದು ಹೇಳುತ್ತಾಳೆ. ಆದರೆ ಆ ಬೇಡರ ಕಣ್ಣಪ್ಪ ಅದಕ್ಕೆ ಒಪ್ಪುವುದಿಲ್ಲ ಇಂಥ ಸಣ್ಣ ಕೂಸಿಗೆ ಗಂಡ ಅನ್ನುವಂತದ್ದು ಅವನಿಗೆ ಸರಿಕಾಣುವುದಿಲ್ಲ ಆದರೂ ಆಕೆಯ ಪತಿವ್ರತಾ ಧರ್ಮಕ್ಕೆ ಮೆಚ್ಚಿ ಸುಮ್ಮನೆ ಊರ ಹತ್ರ ಬಿಟ್ಟು ಹೋಗುತ್ತಾನೆ ಅಲಿಂದ ಸಂಗವ್ವ ಎಂಬ ತರಕಾರಿ ಮಾರುವ ಹೆಣ್ಣು ಮಗಳು ಆಕೆಯನ್ನು ಆಕೆಯ ಮೇಲಿರುವ ವಡವೆಯ ಸಂಬಂಧ ಮನೆಯಲ್ಲಿಟ್ಟುಕೊಂಡು ಸಾಕುತ್ತಾಳೆ. ಬಾಳಬಿಕ್ಷುಕ ಮಹಾರಾಜ ಬೆಳೆಯುತ್ತಾನೆ. ಸಕಲ ವಿದ್ಯಗಳಲ್ಲಿ ಪರಿಣಿತನಾಗುತ್ತಾನೆ. ಗರಡಿಮನೆಯಲ್ಲಿ ಪಳಗುತ್ತಾನೆ. ಅವನ ಸ್ನೇಹಿತರಿಗೆ ಸರಿಸಮನಾಗಿ ನಿಲ್ಲುತ್ತಾನೆ. ಈತನಿಗೆ ಆಹಾಂಕಾರ ಬರುತ್ತದೆ. ಇದನ್ನು ಕಂಡ ವಿಧಿ ತನ್ನ

ಕಾಟವನ್ನು ಪ್ರಾರಂಭಿಸುತ್ತಾಳೆ. ಅವನ ಸ್ನೇಹಿತರು ಬಾಳಬಿಕ್ಷುಕನ ಹೆಂಡತಿ ಮೇಲೆ ಮೋಹಗೊಂಡು ಅವನನ್ನು ಸಾಯಿಸಲು ಪ್ರಯತ್ನಿಸುತ್ತಾರೆ. ಆದರೆ ಅದು ಸಾಧ್ಯವಾಗುವುದಿಲ್ಲ ಕೊನೆಯದಾಗಿ ಅಡವಿಯಲ್ಲಿ ಹುಲಿ ಇದೆ. ಅದನ್ನು ಬೇಟೆಯಾಡಬೇಕೆಂದು ಅವನ ಕೈಯಲ್ಲಿ ಮಂಡಗತ್ತಿ ಇವರು ಒಳ್ಳೆಯ ಹರಿತವಾದ ಕತ್ತಿಯನ್ನು ತೆಗೆದುಕೊಂಡು ಈತನನ್ನು ಸಾಯಿಸಲು ನೋಡುತ್ತಾರೆ ಅವರು ಕತ್ತಿಯಿಂದ ಆತನ ಶಿರವನ್ನು ಕಡಿಯಲು ಪ್ರಯತ್ನಿಸುತ್ತಾರೆ. ಆದರೆ ದೇವರ ದಯೆಯಿಂದ ಆತನ ಶಿರಸ್ಸು ಹಯುವುದಿಲ್ಲ ಅದರಂತೆ ಬಾಳಬಿಕ್ಷುಕ ರಾಜ ಅವರು ಯಾವುದೇ ಕೆಟ್ಟ ಯೋಚನೆ ಮಾಡದಿದ್ದರೆ ನಿಮ್ಮ ಶಿರಸ್ಸು ಸಹ ಹರಿಯುವದಿಲ್ಲ ಎಂದು ಅವರ ಸಿರಕ್ಕೆ ಮೊಂಡ ಗತ್ತಿಯಿಂದ ಹೊಡೆಯುತ್ತಾನೆ. ಅವರು ಸಾಯುವಂತಹದ್ದು ನಂತರ ಪಶ್ಚ್ಯಾತಾಪವಾಗಿ ಅವನು ಕಾಡಿನಲ್ಲಿ ಹೊರಡುತ್ತಾನೆ. ಅವನ ಹಿಂದೆಯೇ ಪದ್ಮಾವತಿ ನೀನು ನನ್ನ ಗಂಡನೆಂದು ಹಲುಬುವಂತಹದ್ದು ಅದಕ್ಕೆ ಇಲ್ಲಿ ನೀನು ಯಾರು ಅಂತ ನನಗೆ ತಿಳಿಯದು ಸುಮ್ಮನೆ ಹೋಗು ಎಂದು ಹೇಳುವಂತಹದ್ದು. ಪುನಃ ಇದೇ ರೀತ ಕಾಡುವಂತಹದ್ದು. ರಾಜರ ಮೇಲೆ ಯುದ್ದ ಮಾಡುವಂತಹದ್ದು. ಅಲ್ಲಿಂದ ರಾಜರು ಪರಾರಿಯಾಗುತ್ತಾರೆ. ನಂತರ ಮುಂದೆ ನಡೆದಾಗ ದಾರಿಯಲ್ಲಿ ಕಳ್ಳ ನಿರುತ್ತಾನೆ. ಅವನು ಈತನನ್ನು ತಡೆದು ವಡವೆ ವಸ್ತ್ರಗಳನ್ನು ಕೊಡು ಎಂದು ಬೇಡುವನು ಆದರೆ ನನ್ನ ಹತ್ತಿರ ಏನು ಇಲ್ಲ ನನ್ನ ಹಿಂದೆ ಬರುವಂತಹವಳು ಚೆನ್ನಾಗಿದ್ದಾಳೆ, ಅವಳಿಗೆ ತೆಗೆದುಕೊಂಡು ಬಿಡು ಎಂದು ಹೇಳುತ್ತಾನೆ. ಕಳ್ಳನು ಅವಳನ್ನು ತಡೆದು ನೀನು ನನ್ನ ಮಡದಿ ಬಾರೆ ಎಂದು ತೊಂದರೆ. ನೀಡುತ್ತಾನೆ. ಅದೇ ಸಂದರ್ಭದಲ್ಲಿ ಅವಳು ನನಗೆ ನೀರು ಬೇಕು ಕೊಟ್ಟು ಹೋಗು ಎಂದು ಬಾಳಬಿಕ್ಷುಕನಿಗೆ ಕೆಳುತ್ತಾಳೆ ಅವನು ಪುನಃ ಮರಳಿ ಬರುತ್ತಾನೆ. ನೀರು ಬಾವಿಯಿಂದ ತುಂಬುತ್ತಾನೆ. ಅದೇ ಸಮಯದಲ್ಲಿ ಕಳ್ಳನಿಗೆ ಸಂದೇಹ ಬರುತ್ತದೆ. ಇವನು ನೀರು ಕುಡಿಸಿದ ಮೇಲೆ ನನಗೆ ಇವಳನ್ನು ಕೊಡುವುದಿಲ್ಲವೆಂದು ತಿಳಿದು ಅವನನ್ನು ಬಾವಿಯಲ್ಲಿ ಎಸೆಯುವಂತಹದ್ದು ಅವಳನ್ನು ಒತ್ತಾಯದಿಂದ ಕರೆದುಕೊಂಡು ಹೋಗುತ್ತಾನೆ. ಆಗ ಅವಳು ಅವನಿಗೆ ಕತ್ತಿಯಿಂದ ಇರಿದು ಸಾಯಿಸಿ ಪುನಃ ಆ ಬಾವಿಯ ಹತ್ತಿರ ಬಂದು ಮಲಗುತ್ತಾಳೆ. ಆಗ ಬಾವಿಯಲ್ಲಿ ಬಾಳಬಿಕ್ಷುಕನನ್ನು ದೇವಕನ್ನೆಯು ಕಾಪಾಡಿ ಅವನನ್ನು ಮದುವೆಯಾಗುತ್ತಾಳೆ. ನಂತರ ತನ್ನ ಹಿಂದೆ ಬಂದವಳು ನೀರು ಬೇಕೆಂದಿದ್ದಳು ಅವಳಿಗೆ ನೀರು ಕೊಟ್ಟು ಬರುತ್ತೇನೆ ಎಂದು ಮೇಲೆ ಬರುತ್ತಾನೆ. ಪದ್ಮಾವತಿ ಮಲಗಿರುತ್ತಾಳೆ ಅವಳು ಎದ್ದ ಮೇಲೆ ನೀರು ಕುಡಿಸಿ ಹೋಗಬೇಕೆಂದು ಕುಳಿತಿರುತ್ತಾನೆ. ಆಗ ಅದೇ ಗಿಡದ ಮೇಲೆ ಎರಡು ಗರುಡಗಳು ಕುಳಿತಿರುತ್ತವೆ. ಅವು ಒಂದು ಕತೆಯನ್ನು ಹೇಳುತ್ತವೆ. ಅದು ಬಾಳಬಿಕ್ಷುಕರಾಜನ ಕತೆ ಆ ಕತೆಯನ್ನು ಕೇಳಿದ ಇವನಿಗೆ ಅರ್ಥವಾಗುತ್ತದೆ. ಇವಳೆ ನನ್ನ ಮಡದಿ ಎಂದು ಅವಳನ್ನು ಬಹಳ ಆತ್ಮೀಯವಾಗಿ ಮಡದಿ ಎಂದು ಒಪ್ಪಿಕೊಳ್ಳುತ್ತಾನೆ.

ನಂತರ ತನ್ನ ರಾಜ್ಯಕ್ಕೆ ಬರುತ್ತಾನೆ. ಪದ್ಮಾವತಿ ಅತ್ತೆ ಮಾವನವರಿಗೆ ಪತ್ರ ಬರೆಯುತ್ತಾಳೆ. ನೀವು ಹೇಳಿದಂತೆ ನಿಮ್ಮಮಗನಿಗೆ ಯಾವುದೇ ತೊಂದರೆ ಇಲ್ಲದೆ ಕರೆದುಕೊಂಡು ಬಂದಿರುವೆ ಎಂದು ತಿಳಿಸುತ್ತಾಳೆ ಅವರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ಇಲ್ಲಿಗೆ ಕಥೆ ಮುಗಿಯುತ್ತದೆ.

ಒಟ್ಟು ಈ ಆಟದಲ್ಲಿ ಸ್ತ್ರೀಯ ಶೋಷಣೆ ಹೇಗೆ ಪ್ರತಿಬಿಂಬಿತವಾಗಿದೆ ಎಂದರೆ ಬಾಲ್ಯವಿವಾಹ ಮಾಡುವಂತಹದ್ದು. ಈ ಹಿನ್ನಲೆಯಲ್ಲಿ ಅವಳು ಅನೇಕ ಕಷ್ಟಗಳನ್ನು ಅನುಭವಿಸುವಂತಹದ್ದು ಅವನ್ನು ಪರಿಹರಿಸಿಕೊಂಡು ತನ್ನ ಪಾತಿವ್ರತ್ಯವನ್ನು ಉಳಿಸಕೊಳ್ಳಲು ಆಕೆ ಪಡುವಂತ ವೇದನೆ ಶ್ರಮ ಬಹಳ ಮಹತ್ತರವಾದದ್ದಾಗಿದೆ ಈ ಪುರುಷ ಸಮಾಜವು ತಮಗೆ ಮನಬಂದಂತೆ ಮಹಿಳೆಯನ್ನು ಶೋಷಣೆಗೈಯುವಂತಹದ್ದು ಈ ಆಟದಲ್ಲಿ ಚಿತ್ರಿತವಾಗಿದೆ.

ರಾಜವೀರ ಪರಾಕ್ರಮ

ಇದೇ ಚಂದ್ರಾವತಿ ಪಟ್ಟಣದಲ್ಲಿ ಚಂದ್ರಸೇನ ಮಹಾರಾಜ ರಾಜಕೀ ಆಳ್ತಾ ಇದ್ದಾನೆ. ಆತನ ಮಡದಿ ಚಂದ್ರಮತಿಗೆ ಮಕ್ಕಳಿರಲಿಲ್ಲ. ಪರಮಾತ್ಮನ ಒಲಿಸಿ ಮಕ್ಕಳ ಫಲ ತೊಂಗಡು ಬರೋ ವ್ಯಾಳ್ಯಾದಲ್ಲಿ ದಾರಿ ಮಾರ್ಗದಲ್ಲಿ ವಿಧಿಮಾಯಿ ಬಂದು ಮಕ್ಕಳ ಫಲ ಕಸ್ಕೊಂಡು ಲಗ್ನವಾಗೋ ಸಂದರ್ಭದಲ್ಲಿ ಹೀರೇ ಮಡದಿ ಚಂದಾವತಿಗೆ ಚಂದ್ರಸೇಕ ಮಹಾರಾಜ ಧಿಕ್ಕರ ಮಾಡಿ ದೂಡಿದಾ ನಂತರ ಊರೊಳಗೆ ಮದುವೆಯಾದಂತ ಸೂರ್ಯಕಾಂತಿ ಉತ್ತತ್ತಿ ಮೇಗಳ ತೊಗಟಿ ಊಟ ಮಾಡಿದ್ದಕ್ಕ ಅವಳಿ ಜವಳಿ ಇಬ್ರು ಮಕ್ಕಳ್ನ ಹಡದ್ಲು. ಒಳಗಿನ ಬೀಜ ಚಂದ್ರಾವತೆಮ್ಮಗ ಸಿಕ್ಕಾಗ ಸತಿಪತಿಗೆ ಪರಮಾತ್ಮ ಕಲಿಸಿದಾಗ ಆಯಾಮ್ಮನ ಹೊಟ್ಯಾಗ ವೀರಪರಾಕ್ರಮ ಹುಟ್ಟಿದ. ಸೂರ್ಯಕಾಂತಿಯ ಹೊಟ್ಟೆಯಲ್ಲಿ ಮಕ್ಕಳು ಹುಟ್ಟಿದ ಫಲವಾಗಿ ಚಂದ್ರಸೇಕ ರಾಜನ ಕಣ್ಣು ಹೋಗಿ ಹನ್ನೆರಡು ವರ್ಷಗ್ಯಾವೆ, ಈ ಹನ್ನೆರಡು ವರ್ಷನು ಹಿರೆದಂಪ, ಚಿಕ್ಕದಂಪ ರಾಜರಿಗೆ ಚಂದ್ರಸೇಕ ರಾಜ ಕಪ್ಪಾ ಸಲ್ಲಿಸಲಿಲ್ಲ ಅವರು ಬಂದು ತಂದಿ ಇಬ್ಬರು ಮಕ್ಕಳನ್ನು ಹೆಡಮುರಿಗಿ ಕಟ್ಟಿಕೊಂಡು ಒಯ್ಯಬೇಕು ಅನ್ನೊ ಸಂದರ್ಭದಾಗ, ಆ ಪರಾಕ್ರಮಿ ಬಂದು ಯುದ್ಧಮಾಡಿ ಅವರ ಸೆರೆ ಬಿಡಿಸಿದ ಅವರನ್ನು ಸೋಲಿಸಿ ಕಳಿಸುತ್ತಾನೆ. ಈ ಹಿರೇದಂಪ, ಚಿಕ್ಕದಂಪ್ರ ಇವರ ತಂಗಿ ಕಮಲಾವತಿ ಈಕೆಗೆ ಮದುವೆ ಮಾಡಬೇಕೆಂದು ಸ್ವಯಂವರ ಏರ್ಪಡಿಸುತ್ತಾರೆ. ಈ ಸ್ವಯಂವರದಲ್ಲಿ ಮೂವತ್ತು ಮಣ ಸಿಡಿ. ಎತ್ತಬೇಕು ಎಂಬುದಾಗಿ ಆಗ ನನ್ನ ತಂಗಿಯನ್ನು ಮದುವೆಯಾಗ ಬಹುದೆಂದು ಡಂಗುರ ಸಾರಿಸುತ್ತಾರೆ. ಯಾವ ರಾಜರಿಂದ ಎತ್ತಲಾಗುವುದಿಲ್ಲ ವೀರ ಪರಾಕ್ರಮ ಅದನ್ನು ಎತ್ತುತ್ತಾನೆ. ನಂತರ ಅವನನ್ನು ಸಾಯಿಸುವ ಸಲುವಾಗಿ ಇನ್ನೊಂದು ಪರೀಕ್ಷೆಯನ್ನು ಹಿರೇದಂಪ ಚಿಕ್ಕದಂಪ

ಏರ್ಪಡಿಸುತ್ತಾರೆ. ಪಾತಾಳ ಬಾವಿಯಲ್ಲಿ ಹನ್ನೆರಡು ಮಣದ ಗುಂಡು ಎತ್ತಬೇಕೆಂದು ಹೇಳುತ್ತಾರೆ. ಈ ಗುಂಡನ್ನು ಪಾತಾಳ ಬಾವಿಯಿಂದ ಮ್ಯಾಲಕ್ಕೆ ಒಗದು ಕಮಲಾವತಿಯನ್ನು ಗೆದ್ದುಬರುತ್ತಾನೆ. ಕಮಾಲಾವತೀನ ಗೆದ್ದು ಬರೋ ಮಾರ್ಗದಲ್ಲಿ ಈ ವೀರ ಪರಾಕ್ರಮ ಹಿಡಂಬಿಗೆ ಕೊಲ್ಲಿ ರತ್ನಾವತಿ ಅಂಬೋ ಹೆಣ್ಣನ್ನು ಗೆದ್ದುತರುತ್ತಾನೆ. ನಂತರ ಚಂದ್ರಸೇಕರಾಜನ ಕಣ್ಣು ಹೋಗಿದ್ವಲ್ಲ ಅದಕ್ಕಾಗಿ ಪಂಡಿತಶಾಸ್ತ್ರಿಗಳು ಶಾಸ್ತ್ರ ತಗದು ನೋಡಿ ಮಾತಾಡೂ ಅಡಿಕೆ, ನಗೋ ಎಲಿ, ಕಮಲದ ಹೂವು ಕಲ್ಲುಸುಣ್ಣ, ಕರೇ ಉಂಚಿ ತೊಪ್ಲು ತಂದ್ರೆ ಕಣ್ಣು ಬರ್ತಾವೆ. ಅಂತು ಹೇಳಿದ್ರು ಆದ್ರೆ ನೀಲಾನಿಲಾಂಜಿ ಕೈಲೆ ಆಗಲಿಲ್ಲ ಪರಾಕ್ರಮ ಬಾವಿಒಳಗೆ ಹೋಗಿ ಆ ರಾಕ್ಷಸರನ್ನೆಲ್ಲ ಸಂಹರಿಸಿ ಅವುಗಳು ನಮಗೆ ಕಿಚ್ಚುಕೂಡು ಎಂದು ಕೇಳುತ್ತವೆ. ಆದರೆ ಮರತು ಬರುತ್ತಾನೆ. ಕಮಲಗಂದಿಯನ್ನು ಕರೆದುಕೊಂಡು ಬರುತ್ತಾನೆ. ಒಂದೇ ತೊಟ್ಟಿಲಲ್ಲಿ ಹೇಗೆ ಮೂವರು ಹೊಗುವುದೆಂದು ಒಂದು ಬಾಣದಿಂದ ಮೇಲೆ ಪತ್ರ ಕಳಿಸುತ್ತನೆ. ಆಗ ಅವರು ಮೂರು ತೊಟ್ಟಿಲನ್ನು ಬಿಡುತ್ತಾರೆ. ಒಂದರಲ್ಲಿ ಮಾತಾಡ ಅಡಿಕೆ, ನಗೋ ಎಲಿ, ಕಮಲದ ಹೂವು, ಕಲ್ಲುಸುಣ್ಣ, ಕರೆ ಉಂಚಿತೊಪ್ಲ ಕಳಿಸುತ್ತಾನೆ. ಎರಡನೆಯದರಲ್ಲೂ ಕಮಲಗಂದಿಯನ್ನು ಕಳಿಸುತ್ತಾನೆ. ನಂತರ ಮೂರರಲ್ಲಿ ತಾನು ಬರುತ್ತಾನೆ. ಆ ಸಂದರ್ಭದಲ್ಲಿ ಕಲಮಗಂದಿಯನ್ನು ನೋಡಿದ ಈ ನೀಲಾ ನಿಲಾಂಜಿಯರು ವೀರಪರಾಕ್ರಮ ಬಂದರೆ ನಮಗೆ ಈ ಹೆಣ್ಣು ಸಿಗುವುದಿಲ್ಲವೆಂದು, ಮೂರನೇ ತೊಟ್ಟಿಲನ್ನು ಹರಿದು ಬಾವಿಯಲ್ಲೇ ಬಿಟ್ಟು ಬಿಡುತ್ತಾರೆ. ಆಗ ವೀರ ಪರಾಕ್ರಮಿ ಮೇಲಿಂದ ಬಿದ್ದು, ಪ್ರಾಣ ಬಿಡುತ್ತಾನೆ. ಅದನ್ನು ನೋಡಿದ ಶಿವ ಅವನಿಗೆ ಪುನರ್ ಜನ್ಮ ನೀಡುತ್ತಾನೆ, ಈ ನೀಲಾ ನಿಲಾಂಜಿಯರು ಕಮಲಗಂದಿಗಾಗಿ ಜಗಳ ಮಾಡುತ್ತಿರುವಾಗ ಪರಾಕ್ರಮ ಸಾದುವಾಗಿ ಬರುತ್ತಾನೆ. ಆತನನ್ನು ಕೇಳುವ ಎಂದು ಕೇಳುತ್ತಾರೆ. ಒಂದು ಪರಾಕ್ರಮಿಯ ಕತೆ ಹೇಳಿರೆಂದು ಕೇಳುತ್ತಾರೆ. ಆಗ ಈ ಹಿಂದಿನ ಎಲ್ಲಾ ವೃತಾಂತವನ್ನು ಹೇಳುತ್ತಾನೆ. ಪರಾಕ್ರಮ ಈ ಎಲ್ಲ ಕತೆ ಕೇಳಿದ ಮೇಲೆ 'ಸೂರ್ಯಕಾಂತಿ' ಬಂದು ಅಂತಾಳೆ ಹೌದು ಮಗನೆ ನೀನು ಗಂಭೀರ, ವೀರ, ಪರಾಕ್ರಮ, ನೀನು ಹೇಳಿದ್ದಲ್ಲಾ ನಿಜಾನೆ ನನ್ನ ಬಂಜಿತನ ಇಲ್ಲಿಗೆ ಇಂಗಿತು ನನ್ನ ಮಕ್ಕಳನ್ನು ನಿನ್ನ ಕೈಯಲ್ಲಿ ಕೊಟ್ಟೇ ಎಂದು ಹೊರಟು ಹೋಗುತ್ತಾಳೆ. ವೀರ ಪರಾಕ್ರಮಿ ತಾನು ಗೆದ್ದು ತಂದಿದ್ದ, ರತ್ನಾವತಿ, ಕಮಲಾವತಿ, ಈ ಎರಡು ಹೆಣ್ಣುಗಳನ್ನು ತನ್ನ ಇಬ್ರೂ ಅಣ್ಣನವರಿಗೆ ಮದುವೆ ಮಾಡಿ ತಾನು ಪಾತಾಳದಿಂದ ತಂದಂಥಾ ಹೆಣ್ಣು ದೇವಕಮಲಗಂಧಿಗೆ ತಾನು ಮದುವೆ ಯಾಗುತ್ತಾನೆ. ಇಬ್ಬರೂ ಅಣ್ಣನವರಿಗೆ ಪಟ್ಟಕಟ್ಟಿ, ತಾನು ಪಟ್ಟಾಕಟ್ಟಿಸಿಕೊಂಡು ವೈಭವದಿಂದ ರಾಜ್ಯ ಆಳುತ್ತಾನೆ. ಈ ವೀರ ಪರಾಕ್ರಮ ಇಷ್ಟು ಕತೆಯ ಆಗರವೆಂದು ಹೇಳಬಹುದಾಗಿದೆ.

೬. ಅಡ್ಡ ಕತೆಗಳು

೧. ಜಗಳಗಂಟಿ ಜಕ್ಕವ್ವ

ಹೆಸರೇ ಸೂಚಿಸುವಂತೆ ಜಗಳವೇ ಈಕೆಯ ಬಂಡವಾಳ ಮತ್ತು ಊಟ, ಮೊದಲು ಈ ಮುದುಕಿಗೆ ಬಸಮ್ಮ ಅಂತ ಹೆಸರು ಇತ್ತು. ಇವಳು ಜಗಳಾ ಮಾಡುದ್ರಲ್ಲಿ ನಿಪುಣಳಾಗಿದ್ದರಿಂದ ಜಗಳ ಗಂಟಿ ಜಕ್ಕವ್ವ ಅಂತ ಹೆಸರು ಬಿತ್ತು.

ಜಗಳಗಂಟಿ ಜಕ್ಕವ್ವನಿಗೆ ಒಂದಿಲ್ಲ ಒಂದು ರೀತಿಯಲ್ಲಿ ಜಗಳವಿರಲೇಬೇಕು ಇಲ್ಲದಿದ್ದರೆ ಊಟನೇ ಮಾಡುವಂತವಳಲ್ಲ ಅದರಂತೆ ಆಕೆಗೆ ಊಟ ಇಲ್ಲದೆ ಮೂರು ದಿನಗಳಾಗಿರುತ್ತವೆ. ಏನಾದರು ಮಾಡಿ ಜಗಳ ತೆಗೆದು ಊಟ ಮಾಡಬೇಕೆಂಬ ಆಸೆಯಿಂದ ಮನೆಯಲ್ಲಿರುವ ಬೂದಿಯನ್ನು ತಂದು ದಾರಿಯಲ್ಲಿ ನಿಂತು ತೂರುವಂತದ್ದು ಇದಕ್ಕೆ ಇವಳಬುದ್ದಿಯನ್ನು ತಿಳದ ಜನರು ತಾವೇ ದೂರ ಸರಿದು ಹೋಗುತ್ತಾರೆ. ಅಲ್ಲಿಗೂ ಸಮಾಧಾನ ಆಗಲಿಲ್ಲ. ನೀರಿಗೆ ಹೋದರೆ ಅಲ್ಲಿ ಯಾರಾದ್ರು ಸಿಕ್ಕಾರು ಎಂದುಕೊಂಡು ಕೊಡ ತೆಗೆದುಕೊಂಡು ನೀರಿಗೆ ಬರುತ್ತಾಳೆ ಅಲ್ಲಿ ಹೊಸದಾಗಿ ಆ ಊರಿಗೆ ಗಂಡನ ಮನಿಗೆ ಬಂದಿರುವತಹ ಹೆಣ್ಣು ಮಗಳು ಕೊಡಾ ಇಟ್ಟು ನೀರು ತುಂಬುವಸುತ್ತಾ ಇರುತ್ತಾಳೆ ಇನ್ನು ಕಾಲಭಾಗ ಕೊಡ ತುಂಬಾದಿರುತ್ತದೆ. ಆ ಜಗಳಗಂಟಿ, ನಿನ್ನ ಕೊಡ ತೆಗೆಯವ್ವ ಅಂತಂದು ಕೊಡ ತೆಗುದು ತನ್ನ ಕೊಡ ಇಡುತ್ತಾಳೆ. ಹೀಗೆ ಜಗಳ ಪ್ರಾರಂಭವಾಗುತ್ತದೆ. ಜಗಳ ಮಾಡಿ ಮನಿಗೆ ಬರುತ್ತಾಳೆ. ಮನಿಗೆ ಬಂದಾಗ ಅತ್ತೆ ಕೇಳತಾಳೆ ಯಕಮ್ಮ ಅಳುತ್ತಿದ್ದಿಯಲ್ಲ ಯಾರ ಜೊತೆ ಜಗಳ ಮಾಡಿದಿ ಅಂತಾಳೆ, ಆಗ ಆ ಜಗಳಗಂಟಿಯಂತೆ ಆಕೆ ನಗೆ ಹೊಡದು ತಾನು ನೀರು ತುಂಬಿಕೊಂಡು ಹೋದ್ಲು ಎಂದು ಹೇಳುತ್ತಾಳೆ, ಇರಲಿ ಬಾಮ್ಮ ಅಂದು ಆಕೆಯನ್ನು ಮನೆಯಲ್ಲಿ ಕೂಡಿಸಿ ಬಚ್ಚಿಟ್ಟು ಬಿಡುತ್ತಾಳೆ. ಪುನಃ ಜಗಳ ಗಂಟಿ ಜಗಳ ಮಾಡಕ ಮನಿಗೆ ಬರುತ್ತಾಳೆ ಆ ಜಕ್ಕವ್ವ ಎಲ್ಲಿ ಅಂತ ಕೇಳತ್ತಾಳೆ. ನಿನ್ನ ಕೂಡ ಜಗಳ ಮಾಡಿಬಂದಾಕಿ ನನ್ನ ಹತ್ರ ಎಂಟಾಣೆ ತೆಗೆದುಕೊಂಡು ತನ್ನ ತಲೆ ಬೋಳಿಸ್ಕಂಡ ಬರಕ ಕ್ಷೌರದಾರ ಮನೆಗೆ ಹೋಗಿದ್ದಾಳೆ ಅಂತಾಳ ಅಲೇಲೆ ಎಂತಾ ಹುಷಾರದಳ ಆಕಿ ತಲೆಬೋಳಿಸಿಕೊಂಡ್ರ ತಲೆಗೆ ಕೂದಲು ಇರೊದಿಲ್ಲ ನನ್ನ ಕೂದ್ಲ ಹಿಡಿದು ಬಡಿಬೇಕಂತ ಈ ರೀತಿ ಯೋಚನೆ ಮಾಡ್ಯಾಳ ಅಂತಂದ ತಾನು ಸೀದಾ ಕ್ಷೌರದಾರ ಮನಿಗೆ ಬರುತ್ತಾಳೆ. ಎಂಟಾಣೆ ಕ್ಷೌರ ಮಾಡತಗಕೊಟ್ಟ ತನ್ನ ತಲೆಬೋಳಿಸು ಅಂದ್ಲು ಇದಾ ಬೇಕಾಗಿತ್ತು ಅವನಿಗೆ ಮೊದಲು ಅವನ ಹೆಂಡತಿ ಜೊತೆ ಹೀಗೆ ಜಗಳಮಾಡಿದ್ಲು ಹಲ್ಲು ಮಸದ ಕ್ಷೌರಮಾಡುವವ ಕುಂತಗ ತಾಯಿ ಅಂದು ಮಂಡಗತ್ತಿಯಿಂದ ಪರಾಪರಾ ಕೆರದ ತಲೆಯಲ್ಲಿ ರಕ್ತ ಚರ್ಮ ಕಿತ್ತು ಹೋತು ಆದ್ರೂ ಆಕಿ ಮಿಸಿಗ್ಯಾಡಲಿಲ್ಲ, ಸೀದಾ ಬಂದ್ಲು ಎಲ್ಲಿ ಅವಳು ಅಂದು

ಅತ್ತಿಗೆ ಕೇಳಿದಳು ಬಂದಾಕಿನಸೀದ ಅರಿವೆ ತೆಗೆದುಕೊಂಡು ಬಾವಿಗೆ ಹೋದಳು ಸ್ನಾನ ಮಾಡಕ ಅಂದ್ಲು ತಾನು ಬಂದು ಅರಿವೆ ತಗಂಡು ಬಾವಿಗೆ ಬಂದ ನೋಡ ತಾಳ ಎಲ್ಲೂ ಕಾಣವಲ್ಲೂ ಎಲ್ಲಾ ಕಡೆ ಹುಡುಕಿದಳು ಆದ್ರೂ ಸಿಗವಲ್ಲೂ ಬಾವಿಯಲ್ಲಿ ಅಡಗಿ ಕೂತಿರಬೇಕು ಅಂದು ಬಾವಿಗೆ ಹಣಿಕಿ ನೋಡಿದ್ಲು ನೀರಾಗ ತನ್ನ ತಲೆ ಕಾಣಿತ್ತು ಅಲೆ ಇವಳಾ ಹೊಕ್ಕಾಂಡಿಯೆನೆ ಅಂದು ಬಾವ್ಯಾಗ ಹಾರಿ ಬಿಟ್ಲು ಮೂರು ಸಾರೆ ಮುಣುಗಿ ಮೂರು ಸಾರೆ ಎದ್ಲು ನಂತರ ನೆಲ ಹಿಡಿದ್ಲು. ಅದೇ ರೀತಿ ಯಾರು ಜಗಳ ಮಾಡತ್ತಾರೋ ಅವರಿಗೂ ಇದೇ ಪರಿಸ್ಥಿತಿ ಬರಾತ್ತೈತಿ ಎಂಬುದು ಈ ಕಥೆಯ ಉದ್ದೇಶ

೨. ಸಂತ ದಂಪತಿಗಳು

ಒಂದು ಊರಾಗ ಇಬ್ರು ದಂಪತಿಗಳಿರುತ್ತಾರೆ. ಅವರ ಹೆಸರು ಏಕನಾಥ ಮಹಾರಾಜ, ಮಡದಿ ಮಹಾದೇವಿ ಇವರು ಗೋದಾವರಿ ನದಿಯಲ್ಲಿ ಸ್ನಾನ ಮಾಡಿ ಬಂದು ದಿನಾ ಪೂಜೆ ಮಾಡ್ತ ಇದ್ರು, ಈ ಪ್ರಕಾರವಾಗಿ ಭಕ್ತಿಯಿಂದ ಪರಮಾತ್ಮನ ಪೂಜಾ ಮಾಡ್ತ ಕೀರ್ತನ ಮಾಡ ಇದ್ದಾಗ ಅದೇ ಊರಲ್ಲಿ ಬಜಾರದಲ್ಲಿ ನಾಲ್ಕು ಮಂದಿ ಶ್ರೀಮಂತರು ಏಕನಾಥ ಮಹಾರಾಜನ ಭಕ್ತಿ ಕೆಡಿಸಬೇಕು ಅಂದುಕೊಂಡು ಇವರಿಗೆ ಸಿಟ್ಟು ಬರ್ಧಂಗ ಮಾಡ್ಬೇಕು ಅಂತ ಒಬ್ಬ ಸಾಹೇಬನ್ನ ಕರೆಕಳಿಸಿದ್ರು. ನಿನಗ ನಾಲ್ಕು ಸಾವಿರ ಕೊಡ್ತೀವಿ ನೀನು ಏಕನಾಥ ಮಹಾರಾಜನ ಭಕ್ತಿ ಕೆಡಿಸಬೇಕು. ಅಂದ್ರು ದುಡ್ಡಿನ ವಿಷಯ ಅವನ ಒಪ್ಪಿಕೊಂಡ ಈ ನಾಲ್ಕು ಸಾವರಕ್ಕೆ ಆಸಿ ಬಿದು ಒಂದು ಚೆಟ್ಟಿ ಎಲಿ, ಒಂದು ಅಚ್ಚೆರು ಅಡಿಕಿ, ಸ್ವಲ್ಪ ತಂಬಾಕು, ಸುಣ್ಣ ತಗೊಂಡು ಅಗಸಿಗೆ ಬಂದು ಕುಂತ ಸಾಯಿಬ ಎಲಿ ಅಡಿಕಿ ತಂಬಾಕ ಹಾಕಿಕೊಂಡು ಬಾಯಿ ತುಂಬಾ ತಾಂಬೂಲ ಮಾಡಿಕೊಂಡ ಏಕನಾಥ ಮಹಾರಾಜರು ಗೋದಾವರಿ ನದಿಯಲ್ಲಿ ಸ್ನಾನ ಮಾಡಿಕೊಂಡು ಅವತ್ತು ಏಕಾದಶಿ ವ್ರತಾ, ಸ್ನಾನ ಮಾಡಿ ಬಂದ್ರು, ಅವರ ಮೇಲೆ ಉಗುಳಿದ ಮೈಯ ಕೆಂಪಾತು ಅವರು ಸಿಟ್ಟು ಮಾಡಿಕೊಳ್ಳಲಿಲ್ಲ. ಯಾಕ ಉಗಳಿದಿ ಅಂತ ಕೇಳಲಿಲ್ಲ. ಮರಳಿ ಸ್ನಾನಕ್ಕೆ ಹೋದ್ರು ಸ್ನಾನ ಮಾಡಿಕೊಂಡು ಮತ್ತೆ ಬಂದ್ರು ಪುನಃ ಹಾಗೆ ಮಾಡಿದಾ ಹೀಗೆ ನೂರು ಸಾರಿ ಉಗುಳಿದ ನೂರು ಸಾರೆನೂ ಸ್ನಾನ ಮಾಡಿದ್ರು, ಏಕನಾಥ ಮಹಾರಾಜರು ಅದೂ ಏನು ಸಿಟ್ಟು ಮಾಡಿಕೊಳ್ಳಲಿಲ್ಲ. ಇವನೇನ ನೂರು ಸಾರೆ ಉಗಿಳಿದ್ದನಲ್ಲ ಇವನ ಬಾಯಿ ಮಾತಾಡದಂಗಾತು ನನ್ನ ಅಪರಾಧ ಕ್ಷಮಿಸು ಅಂತ ಕೇಳಿದ ನಿಂದ ಅಪರಾಧ ಏನು ಎಂದು ಕೇಳಿದರು, ನೂರು ಸಾರೆ ಉಗುಳಿದ್ದಕ್ಕೆ ಕ್ಷಮಿಸಿ ಅಂದ ನೀ ಹೀಗೆ ಮಾಡದಿದ್ದರೆ. ನಾನು ನೂರು ಸಾರೆ ಸ್ನಾನ ಮಾಡುತ್ತಿದ್ದಿಲ್ಲ ಅಂತ ಒಂದು ಪ್ರಯತ್ನ ನಿನ್ನಿಂದಾ ಆತು ಎಂದು ಅವನ ಪಾದಕ್ಕೆ ನಮಸ್ಕಾರ ಮಾಡಿದ್ರು ನಂತರ ಮನೆಗೆ ಹೋಗಿ ಪೂಜಾ ಮಾಡ್ತ ಇದ್ರು ಅವಾಗ

ಸಾಯಿಬ ಬಂದ ದುಡ್ಡು ಕೇಳಿದ ಅವರು ಕೊಡ್ಲಿಲ್ಲಿ ಅವರಿಗೆ ಸಿಟ್ಟು ಬರಿಸು ಆಗ ನಾವು ನಿನಗ ನಾಲ್ಕು ಸಾವಿರ ಕೊಡ್ತಿವಿ, ಅಂದ್ರು ಆಗ ಸಾಹೇಬ ಕಾಲಗ ಬೂಟು ಹಾಕಿಕೊಂಡು ಏಕದಮ್ ಬರತಾನೆ ಏಕನಾಥ ಮಹಾರಾಜರು ಪೂಜೆ ಮಾಡುವ ಕ್ವಾಣ್ಯಾಗ. ಈ ಸಂತದಂಪತಿಗಳು ಅದಕ್ಕೆ ಬೇಜಾರು ಮಾಡಿಕೊಳ್ಳದೇ ಅವನನ್ನು ಪೂಜಿಸುತ್ತಾರೆ. ಹೇಗೆ ಇವರಿಗೆ ಸಿಟ್ಟು ಬರಿಸಾದು ಅಂದುಕೊಳ್ಳುತ್ತಿದ್ದ ಸಾಹೇಬ, ಇವರಿಗೆ ಊಟಕ್ಕೆ ಮಾಡಿ ನೀಡು ಅಂತೇಳಿ, ಅಡಿಗೆ ಮಾಡಿಸಿ ನೀಡಿದ್ರು, ಹ್ಯಾಂಗ ಮಾಡಿ ಇವರಿಗೆ ಸಿಟ್ಟು ಬರಿಸಲಿ ಅಂದು ಆ ತಾಯಿ ನೀಡಿ ಹೊಗೋ ಸಮಯದಲ್ಲಿ ಆಕೆಯ ದುಬ್ಬದ ಮೇಲೆ ಹಾರಿ ಆಕೆಯ ಎದೆಯನ್ನು ಹಿಡಿದು ಕೊಂಡು ಬಿಡುತ್ತಾನೆ ಸಾಯೆಬ, ಅದ್ರು ಸಹ ಕೋಪಿಸಿಕೊಳ್ಳದೆ, ಏಕನಾಥ ಮಹಾರಾಜರು, ಮಗು ಬಿದ್ದಿತು ಉಷಾರು ಎಂದು ಮಡದಿಗೆ ಹೇಳುತ್ತಾರೆ. ಆಗ ಆ ತಾಯಿ ಇಲ್ರಿ ಒಂಬತ್ತು ವರ್ಷ ಹೊತ್ತು ಹೆತ್ತು ಬೆಳೆಸಿದ ಮಗನಿಗೆ ಕೆಡುವುತೀನಾ ಎಂದು ಹೇಳುವಂತಹದ್ದು ಆಕೆಯ ಪತಿವ್ರತಾ ಧರ್ಮದಿಂದ ಆಕೆಯ ಎದೆಯಲ್ಲಿ ಹಾಲು ಬರುತ್ತವೆ. ಸಾಯೇಬನ ಬಾಯಿಯಲ್ಲಿ ಬೀಳುತ್ತವೆ. ಸಾಹೇಬ ತಲೆತಿರುಗಿದಂತಾಗಿ ಬೀಳುತ್ತಾನೆ. ತನ್ನ ತಪ್ಪಿನ ಅರಿವಾಗುತ್ತದೆ. ಹಣದ ಆಸೆಗೆ ಹೀಗೆ ಮಾಡಿದೆ ಎಂದು ಹೇಳುತ್ತಾನೆ. ಆ ಸಂತ ದಂಪತಿಗಳು ದೇವರನ್ನು ನೆನೆಯುತ್ತಾರೆ. ಅವನಿಗೆ ಬೇಕಾದ ನಾಲ್ಕು ಸಾವಿರ ರೂಪಾಯಿಗಳು ಸಿಗುತ್ತವೆ. ಅವನ್ನು ತೆಗೆದುಕೊಂಡು ಲಗ್ನಮಾಡಿಕೊಂಡು ಸುಖವಾಗಿರುತ್ತಾನೆ.

೩. ದುರಾಸೆಯ ಭಕ್ತ

ಒಂದು ಊರಲ್ಲಿ ಒಬ್ಬ ಅಂಬಾದೇವಿಯ ಭಕ್ತನಿರುತ್ತಾನೆ. ಅವನಿಗೆ ತುಂಬಾ ಬಡತನ ಹದಿನಾರು ಮಂದಿ ಮಕ್ಕಳು ಏಳು ಮಂದಿ ಹೆಣ್ಣು ಮಕ್ಕಳು ಒಂಬತ್ತು ಮಂದಿ ಗಂಡು ಮಕ್ಕಳು, ಇಷ್ಟೆಲ್ಲಾ ಕಟ್ಟಿಕೊಂಡು ಬಡತನ ಸೋಸುತ್ತಾ ಇದ್ದಾನೆ. ಇವರಿಗೆ ಅನ್ನಕ್ಕೆ ನೀರಿಗೆ ಬರವಿರುತ್ತದೆ. ಇದನ್ನು ನೋಡಿದ ಊರಿನ ಜನರು ಇವನಿಗೆ ಮೂರು ಕೂರ್ಗಿ ಹೊಲ ಕೊಡುತ್ತಾರೆ. ಎರಡು ಬೀಜದೆತ್ತು ಕೊಡುತ್ತಾರೆ. ಆಗ ಅವನು ಎರಡು ಎತ್ತು ತಗಡು ಬಿತ್ತಾಕ ಬರುತ್ತಾನೆ ಒಂದು ಕಡೆಯಿಂದ ಬಿತ್ತಿಕೊಂತ ಬರುತ್ತಾನೆ. ವಿಧಿಬಂದು ಹೊಲದಾಗ ಬೀಜ ಎಲ್ಲ ತಿಂದಬಿಡುತ್ತದೆ. ಬರಿಹುಲ್ಲು ಬೆಳಿತದೆ ಎಲ್ಲಿಯೂ ಬಂದು ಬಿತ್ತಿದ್ದು ಒಂದೊಂದು ಬೆಳೆದು ನಿಂತಿದೆ, ಹೀಗಿರಲು ನನ್ನ ಭಕ್ತ ಬರಲಿಲ್ಲ ಆತನನ್ನು ನೋಡಿಕೊಂಡು ಬರುತ್ತಿನಿ ಅಂದು ಬರುತ್ತಾಳೆ. ಬಂದು ನೋಡುತ್ತಾಳೆ ಇವನ ವಲದಲ್ಲಿ ಬರಿ ಹುಲ್ಲು ಗಿಡ ಬೆಳದಿರುತ್ತದೆ. ಉಧೋ ಉಧೋ ಅಂತ ಬಂದು ಅವನ ಹೊಲದಲ್ಲಿ ಬರುತ್ತಾಳೆ. ಈ ಬಡವ ಎಲ್ಲಾರು ಹೊಲಬಿಟ್ಟು ಈ ಗಿಡ ಗಂಟೆ ಬೆಳದ ನನ್ನ ಹೊಲಕ್ಕೆ ಯಾಕ ಬಂದೆಮ್ಮ ಅಂತಾನೆ. ಆಕೆಗೆ ನಮಸ್ಕಾರ ಮಾಡುತ್ತಾನೆ. ದೇವಿ ಹೇಳತಾಳ ಇಲ್ಲಿ ನಿನ್ನ

ಹೊಲಕ್ಕ ಬಂದಿನಿ ಎಲ್ಲಿಯಾದ್ರು ಐದಿತೆನಿ ಕೊಟ್ಟುಬಿಟ್ರೆ ಊಟ ಮಾಡ್ತಿನಿ ಅಂದಳು ಇಷ್ಟು ಹೊಲದಲ್ಲಿ ಎಲ್ಲಾರ ಬಂದು ತೆನಿ ಸಿಗುತ್ತದೆಯ ನೋಡಮ್ಮ ಅಂತಂದು ಕೇಳಿದಾಗ, ಸ್ವಲ್ಪ ನೀರನ್ನು ಕುಡಿಸು ನೀರು ಕುಡುದು ಹೋಗ್ತೀನಿ ಅಂದಾಗ ನೀರು ತರಾಕ ಹೋಳಿಗೆ ಹೊರಡುತ್ತಾನೆ. ನೀರು ತರಾದ್ರಾಗ ತನ್ನ ಹೊಲ ಬದಲಾಗಿರುತ್ತದೆ ಎಲ್ಲಾ ಹೊಲ ಬೆಳದ ನಿಂತಿರತ್ತದೆ, ತನ್ನ ಹೊಲ ಅನ್ನದೇ ಮರೆತು ಬೇರೆ ಹೊಲಕ್ಕೆ ಹೋಗುತ್ತಿರುತ್ತಾನೆ, ದೇವಿಕರೆದು ಇದಾ ನಿನ್ನ ಹೊಲ ಅಂದಾಗ ಬರುತ್ತಾನೆ ಎಷ್ಟು ಚಂದ ಬೆಳಿಸದ್ಯಮ್ಮ ಅಂದು ಆಕೆಗೆ ನಮಸ್ಕಾರ ಮಾಡತ್ತಾನೆ. ಇಗಲಾದ್ರು ನನಗೆ ಊಟಕ್ಕ ಐದು ತೆನಿ ಕೊಡಪ್ಪ ಅಂತಾಳೆ ದೇವಿ. ಇಷ್ಟು ಚೆಂದ ಬೆಳದಿರುವ ಹೊಲದಲ್ಲಿ ತೆನಿ ಮುರಿಯದು ಹೆಂಗಂತಂದು ಸುಳ್ಳಾ ಈಕಿ ತಿನ್ನದಿಲ್ಲ ಕೆಡಿಸಿಬಿಡತಾಳ, ಅಂದುಕೊಂಡು ಬೇರೆ ಹೊಲದಿಂದ ಐದು ತೆನಿತಂದು ಆಕೆಗೆ ಕೊಡುತ್ತಾನೆ. ಇವು ನಾನು ಬೆಳೆಸಿದ ಫಲ ಅಲ್ಲ ಅಂತಾಳ ಇಲ್ಲವ್ವ ಇವು ನಮ್ಮವೇ ಅಂತಾನ ಆಕಿ ಕೇಳದಿಲ್ಲ ಆಕಿ ಮೇಲೆ ಪರುಶುರಾಮನ ಮೇಲೆ ಆಣೆ ಮಾಡ್ತಾನೆ. ಆಕಿ ಕೇಳದಿಲ್ಲ ನಂತರ ಬೈಲಿಕ್ಕೆ ಸುರುಮಾಡ್ತಾನೆ. ದಂಟ ತೆಗೆದುಕೊಂಡು ಹೊಡಿಯಕ ಹೋಗುತ್ತಾನೆ. ಆವಾಗ ಆಗಲಪ್ಪಾ ಅಂದುಕೊಂಡು ತನ್ನಲ್ಲಿರುವ ಬಂಡಾರನ ಉಗ್ಗಿಬಿಡುತ್ತಾಳೆ. ಪುನಃ ಹುಲ್ಲು ಬೆಳೆದ ಹೊಲ ಆಗಿಬಿಡುತ್ತದೆ. ಇದನ್ನು ನೋಡಿದ ಆ ಬಡವ ಅವಳ ಕಾಲಹಿಡಿದುಕೊಂಡು ತಪ್ಪಾತು ಕ್ಷಮಿಸವ್ವ ಅಂತಾನೆ ಆಕಿ ಕ್ಷಮಿಸುವುದಿಲ್ಲ ರೆಡ್ಡಿ ಹೊಲಕ್ಕೆ ಹೋಗುತ್ತಾಳೆ. ಉಧೋ ಅನ್ನದ ತಡ ಎಲ್ಲಾ ತಂದು ನೀಡತ್ತಾನೆ. ಆ ರೆಡ್ಡಿ ಆಗ ನಿನ್ನ ಬದುಕು ಚಂದಾಗಿರಲಿ ಎಂದು ಆರ್ಶಿವಾದ ಮಾಡುತ್ತಾಳೆ. ರೆಡ್ಡಿ ನೀನು ರೆಡ್ಡೆಲ್ಲ ಬಂಗಾರದ ಕಡ್ಡಿ ಎಂದು ಹೇಳುವಂತಹದ್ದು ಅದರಂತೆ ಯಾವುದೇ ಮನುಷ್ಯನಿಗೆ ಪರೋಪಕಾರಿ ಬುದ್ಧಿ ಇರಬೇಕು ಆತಿ ಆಸೆ ಇರಬಾರದು ಎಂಬ ನೀತಿಯನ್ನು ಈ ದುರಾಸೆಯ ಭಕ್ತ ಕತೆಯಿಂದ ತಿಳಿದುಕೊಳ್ಳಬಹುದಾಗಿದೆ.

೪.೨ ಪಾತ್ರ ಪರಿಚಯ

ಈ ಗೊಂದಲಿಗರ ಆಟದಲ್ಲಿ ಪ್ರತಿಯೊಂದು ಪಾತ್ರವನ್ನು ಪ್ರತ್ಯೇಕವಾಗಿ ಪ್ರತಿನಿಧಿಸುವ ನಟರಿಲ್ಲವಾಗಿ ಕಥೆಗಾರ ಮತ್ತು ಹಿಮ್ಮೇಳಿಗರೇ ನಿರೂಪಣೆಯ ಮೂಲಕ ಎಲ್ಲ ಪಾತ್ರಗಳ ವೇಷಭೂಷಣಗಳನ್ನು ವರ್ಣಿಸಿ ಅವರ ಆಕೃತಿ ಕಟ್ಟಿಕೊಡುತ್ತಾರೆ. ಅಭಿನಯಕ್ಕೆ ಅಳವಡಿಸಲಾಗದ ಯುದ್ದ ಸಾವು, ಪಟ್ಟಾಭಿಷೇಕ ಮುಂತಾದವುಗಳನ್ನು ಯುದ್ದ ಮಾಡಿದರು, ಸತ್ರು, ಪಟ್ಟಕಟ್ಟಿದರು ಮುಂತಾಗಿ ಹೇಳುತ್ತಾರೆ. ಕುರೂಪ, ಸುರೂಪಗಳನ್ನು ವರ್ಣಿಸುವಾಗ ತೋರುವ ಕಲ್ಪಕ ಶಕ್ತಿಯಲ್ಲಿ ಆಯಾ ಪಾತ್ರಗಳ ಚಿತ್ರಣವನ್ನು ಬಿಂಬಿಸುವ ರೀತಿ ಪ್ರತಿಭೆ ತೋರುತ್ತದೆ.

ಇಲ್ಲಿ ಕಥಾನಾಯಕ-ನಾಯಕಿಯರು ವಿಶೇಷ ಗುಣದವರು ಪಾಂಡಿತ್ಯ ಪ್ರತಿಭೆಗಳಲ್ಲಿ ಚೆಲುವಿಕೆಯಲ್ಲಿ ಅದ್ವಿತಿಯರು ಧೀರೋಧತ್ತರು ಸುಖವಳೆದು ಕಷ್ಟ ಬಂತೆಂದು ಅಳುತ್ತ

ಕುಳಿತುಕೊಳ್ಳುವ ಹೇಡಿಗಳಲ್ಲ ಅವರು ಅದನ್ನ ಎದುರಿಸುವಂತಹ ಧೀರರಾಗಿದ್ದಾರೆ. ಎಂಥ ದುರ್ಧರ ಪ್ರಸಂಗದಲ್ಲಿ ನ್ಯಾಯನಿಷ್ಠುರತೆ, ಸತ್ಯಸಂದತೆ, ಸಾತ್ವಿಕತೆ, ಪರೋಪಕಾರ ಬುದ್ಧಿ, ಧೈರ್ಯ, ಸಾಹಸಗಳನ್ನು ಬಿಟ್ಟುಕೊಟ್ಟವರಲ್ಲ ಸಾವಿಗೆ ಅಂಜದೆ ತಮ್ಮ ಜೀವನದ ಮೌಲ್ಯಗಳನ್ನು ಪಾಲಿಸುತ್ತ ಸತ್ತು ಮತ್ತೆ ಬದುಕುವ ಬಲ್ಲಾಳರು, ಹೀಗೆಂದ ಮಾತ್ರಕ್ಕೆ ರಾಜರ ಸ್ವಭಾವದಲ್ಲಿ ವೈರುದ್ಯವಿಲ್ಲದಿಲ್ಲಿ ಅವರಲ್ಲಿ ಕೆಲವರು ಮೈಸುಖಕ್ಕಾಗಿ ಅಮಾಯಾಕ ಅಸಹಾಯಕರನ್ನು ಬಲಿಗೊಡುವ ಅಮಾನುಷರಿದ್ದಾರೆ, ಸುಳ್ಳು, ನಯವಂಚನೆ, ಮೋಸ, ಕಪಟ, ಸೇಡು, ಕುಟಿಲ ಕಾರಸ್ಥಾನ, ಕ್ರೌರ್ಯ ಅನಿಮಿತ್ತ ವೈರ ಮುಂತಾದವುಗಳಿಗೆ ದಾಸರಾದವರಿದ್ದಾರೆ ಮತ್ತು ಕಥಾ ಪ್ರಸಂಗದಲ್ಲಿ ಬಾವಾಗಳು, ಪರಮೇಶ್ವರ–ಪಾರ್ವತಿ, ದೇವಕನ್ಯೆಯರು ಉತ್ತಮರ ಹಾನಿಯನ್ನು ಕಂಡು ಮರುಗುವವರು ಅಪತ್ಕಾಲದಲ್ಲಿ ತಕ್ಕ ನೆರವಿನ ಕೃಪೆ ತೋರಿ ಮಾನವತೆಯನ್ನು ಎತ್ತಿ ಹಿಡಿಯುವಂತವರಾಗಿದ್ದಾರೆ. ಇಷ್ಟೇ ಅಲ್ಲದೆ ರಾಕ್ಷಸರೂ ಕೂಡ, ಮಾನವನ ಮನಸ್ಸಿನ ಕಲ್ಪನೆಯಿಂದ ಸೃಷ್ಟಿಗೊಂಡವರು ಎಂದು ಹೇಳಬಹುದು. ಕಥನಾಯಕ ನಾಯಕಿಯರ ಮೌಲಿಕತೆಯನ್ನು ವಿಜೃಂಬಿಸಲು ಈ ಪಾತ್ರಗಳು ಶ್ರಮಿಸುತ್ತವೆ. ಪಶು, ಪಕ್ಷಿಗಳು ಮತ್ತು ಅನ್ಯ ಜೀವರಾಶಿಗಳು ಕೂಡ ಮಾನವ ಕ್ರಿಯೆಗಳನ್ನು ಆರೋಪಿಸಿಕೊಂಡು ಜೀವಕರುಣೆ ತೋರಿಸುವಂತಹದ್ದು ಕಂಡುಬರುತ್ತದೆ. ಮುಖ್ಯವಾಗಿ ನೋಡುವುದಾದರೆ, ಕುದುರೆ ಮತ್ತು ಅದರ ಸವಾರ ಇತರ ಜಾನಪದ ಕಥೆಗಳಂತೆ ಗೊಂದಲಿಗರ ಆಟದಲ್ಲಿ ಪಾತ್ರವಹಿಸುತ್ತಾರೆ. ಇವರಿಬ್ಬರೂ ಗ್ರಾಮೀಣ ಭಾರತೀಯ ಸಾಹಿತ್ಯಕತೆಗಳ ದೃಷ್ಟಿಯಲ್ಲಿ ಪರಾಕ್ರಮದ ಸಂಗತಿ ಮತ್ತು ಸಂಕೇತ ಇಷ್ಟೇ ಅಲ್ಲ ಜೀವವಿಲ್ಲದ ಕೀಲು ಕುದುರೆ ಸ್ಥಳೀಯವಾಗಿ ನಾವು ನೋಡುವ ವಿಮಾನಗಳಂತೆ ವರ್ತಿಸುವ ವಾಹನದಂತೆ ವರ್ತಿಸುತ್ತದೆ.

೧. ಸ್ತ್ರೀ

ಗೊಂದಲಿಗರ ದೇವೇಂದ್ರಪ್ಪನ ಆಟದಲ್ಲಿ ಸ್ತ್ರೀ ಪಾತ್ರ ಪ್ರಮುಖವಾದದ್ದು ಕಥೆಯ ಶೀರ್ಷಿಕೆಯಲ್ಲಿ ಸ್ತ್ರೀಯರ ಹೆಸರುಗಳೇ ಹೆಚ್ಚು. ಶೋಷಣೆಯ ದೃಷ್ಟಿಯಿಂದ ಎಲ್ಲಾ ಕಥೆಗಳಲ್ಲೂ ಸ್ತ್ರೀಗೆ ಅಗ್ರಸ್ಥಾನ ಹಾಗೆ ನೋಡಿದರೆ ಅವಳೇ ಎಂದಿನಿಂದಲೂ ಕೌಟುಂಬಿಕ ಸಮಸ್ಯೆಯಾಗಿದ್ದಾಳೆ ಆಕೆಯು ಒಂದು ಸರ್ವಕಾಲಿಕ ಸಮಸ್ಯೆಯಾಗಿದ್ದಾಳೆ. ನಮ್ಮ ಭಾರತೀಯ ಸಮಾಜದಲ್ಲಿ ಪುರುಷನಂತೆ ಸ್ತ್ರೀಗೆ ಸ್ವಂತ ಜೀವನವೇನೋ ಇದೆ. ಆದರೆ ಅವಳಿಗೆ ಇಂದಿಗೂ ಪ್ರತ್ಯೇಕ ವ್ಯಕ್ತಿತ್ವವಿಲ್ಲ. ಸ್ತ್ರೀಯು ಝೋಪಡಿಯಲ್ಲಿರಲಿ ಎಳಂತಸ್ತಿನ ಅರಮನೆಯ ಸುಖದ ಸುಪ್ಪತ್ತಿಗೆಯಲ್ಲಿ ರಾಣಿ–ಮಹಾರಾಣಿಯಾಗಲಿ ಅವಳ ತಲೆಯ ಮೇಲೆ ಸದಾ ಶಪಿತ ಶೋಷಣೇ, ಕೌರ್ಯಗಳ ಹಿಂಸೆಗಳ ಕತ್ತಿ ತೂಗುತ್ತಿರುತ್ತದೆ.

ದೇವೇಂದ್ರಪ್ಪನವರ ಆಟಗಳಲ್ಲಿ ಸ್ತ್ರೀ ಜೀವನದ ಶೋಷಣೆ ವೇದನೆಗಳನ್ನು ಬಹಳ ಮಾರ್ಮಿಕವಾಗಿ ಚಿತ್ರಿಸುತ್ತಾರೆ 'ಶಿಲಾವತಿ' ಮತ್ತು 'ಬಾಳಬಿಕ್ಷುಕ'ನ ಮಡದಿ 'ಪದ್ಮಾವತಿ' ಪುರುಷ ಪ್ರಧಾನ ಸಮಾಜ ನೀಡಿದ. ಹಿಂಸೆ, ತೊಂದರೆ, ಕ್ರೌರ್ಯ ಯಾತನೆಗಳನ್ನು ಅನುಭವಿಸಿದ್ದು ಅದರಂತೆ ಸತಿಶಿವಲೋಚನದಲ್ಲಿ ಶಿವಲೋಚನ ತನ್ನ ಅತ್ತೆ ಸೊಸೆಯ ಶೀಲದ ಬಗ್ಗೆ ಅನುಮಾನಿಸುವಂತಹದ್ದು ಯಾವುದೇ ಸಾಕ್ಷಿಯನ್ನು ಕೇಳದೆ ತೊಂದರೆ ನೀಡುವಂತಹದ್ದು, "ಹೆಣ್ಣು ಹೆಣ್ಣಿಗೆ ಶತೃ" ಎಂಬುದನ್ನು ಚಿತ್ರಿಸುತ್ತದೆ. 'ವಿಘ್ನಾವತಿ' ಆಟದಲ್ಲಿ ತನ್ನ ಏಳು ಜನ ರಾಣಿಯರನ್ನು ಅಡವಿಗೆ ಕಳಿಸುವುದರ ಮೂಲಕ ಮೈಸುಖ ಅನುಭವಿಸುವಂತಹದ್ದು ಸವತಿ ಮತ್ಸರಕ್ಕೆ ತಕ್ಕ ಉದಾಹಣೆಯಾಗಿದೆ ಅರಸರು ತಮ್ಮ ರಾಣಿಯರನ್ನು ತಿರಸ್ಕರಿಸಿದರೆ ಇಡೀ ರಾಜ್ಯವೇ ತಿರಸ್ಕರಿಸುತ್ತದೆ ಅಂಥ ತಿರಸ್ಕೃತರು ಸ್ವಸಾಮರ್ಥ್ಯ ಸಾಹಸ, ದೈವೀನೆರವುಗಳಿಂದ ಬದುಕುವಂತಹದ್ದು.

ಧರ್ಮಸಮ್ಮತಿ ಪಾತಿವ್ರತ್ಯದ ಸಾರ ಸಂಕೇತವಾಗಿರಲೆಂದು ಮದುವೆಯಾಗುವವರೆಗೆ ಸ್ತ್ರೀಯ ಲೈಂಗಿಕ ಪರಿಶುದ್ಧತೆಯ ಮೇಲೆ ಇಡೀ ಪುರುಷ ಸಮಾಜ ಕಾಳಜಿವಹಿಸುತ್ತದೆ. ಬ್ರಾಹ್ಮಣರಾದರೆ ಋತುಮತಿಯಾಗುವ ಮುನ್ನವೇ ಕನ್ನೆಯರ ಮದುವೆ ಮುಗಿಸತಕ್ಕದ್ದು, ರಾಜರಾದರೆ ಹನ್ನೆರಡು ವರ್ಷ ತುಂಬುತ್ತಲ್ಲೇ ತಮ್ಮ ರಾಜಕುಮಾರಿಯರ ಮದುವೆ ಮಾಡಿಕೊಟ್ಟು ಪುರುಷ ಸಮಾಜದ ಪ್ರತಿಷ್ಠೆಯನ್ನು ಗಂಡನ ಮನೆಯವರೆಗೆ ವರ್ಗಾಯಿಸುವಂತಹದ್ದು, ಸ್ವಯಂ ನಾರಿಯೇ ತನ್ನ ಶೀಲ ಕಾಪಾಡಿಕೊಳ್ಳುವಂತಹದ್ದು. ಈ ಪ್ರಸಂಗವನ್ನು 'ಶಿಲಾವತಿ' ಮತ್ತು 'ಬಾಳಬಿಕ್ಷುಕ' ಕಥಾವಸ್ತುಗಳು ಬಿಂಬಿಸುತ್ತವೆ. ಅದರಂತೆ ರಾಜವೀರ ಪರಾಕ್ರಮದಲ್ಲಿ ಚಂದ್ರಮತಿಯನ್ನು ರಾಜನು ಸೂರ್ಯಕಾಂತಿಗೆ ಮನಸೋತು ರಾಜ್ಯದಿಂದ ಆಚೆಕಳಿಸುವಂತಹದ್ದು ಕಂಡುಬರುತ್ತದೆ, ಇವೆಲ್ಲವು ಸ್ತ್ರೀಯ ಶೋಷಣೆಯನ್ನು ಎತ್ತಿ ತೋರಿಸುವಂತಹ ನಿದರ್ಶನಗಳಾಗಿವೆ ಎಂದು ಹೇಳಬಹುದು.

೨. ರಾಜರು–ಪ್ರಜೆಗಳು

ಗೊಂದಲಿಗರ ಆಟಗಳಲ್ಲಿ ರಾಜ್ಯವೆಂದರೆ ಪುಟ್ಟಪಟ್ಟಣ ಆ ರಾಜ್ಯದ ಕೇಂದ್ರ ವ್ಯಕ್ತಿ ರಾಜ, ಹಿಡಂಬ, ಬರ, ವೈರಿ, ರಾಜರ ಉಪಟಳಗಳಿಂದ ಪ್ರಜಾವರ್ಗವನ್ನು ಸಕಾಲದಲ್ಲಿ ಕಾಪಾಡುವುದು ಆತನ ಹೊಣೆ, ಆತನ ಕ್ಷೇಮಾಭ್ಯುದಯ ಪ್ರಜರಿಗೆ, ಸಂಬಂಧಿಸಿದ ಸಂಗತಿ ಪರಸ್ಪರಲ್ಲಿ ಸುವ್ಯವಸ್ಥಿತ ಸಂಬಂಧವಿರುತ್ತದೆ. ಅದು ಕೌಟುಂಬಿಕ ಸ್ವಭಾವದ್ದು ಸುಖ–ದುಃಖಗಳಲ್ಲಿ ಸಮಾನ ಪಾಲುದಾರರು ರಾಜರು ಪ್ರಜರ ತಂದೆ, ಪ್ರಜರು ರಾಜರಿಗೆ ಮಕ್ಕಳ ಸಮಾನ ಅರಮನೆಯ ಆಗುಹೋಗುಗಳು ಪ್ರಜರ ಮನೆಗಳವೂ ಹೌದು ರಾಜನ ವಯಕ್ತಿಕ ಅಭಿಪ್ರಾಯಗಳನ್ನು ಒಪ್ಪದಿದ್ದರು ಎದುರು ಬಿದ್ದು ವಿರೋಧಿಸುವರಲ್ಲ.

ರಾಜರಿಗೆ ಸಂತಾನ ಫಲವಿಲ್ಲವಾದರೆ ತಮಗೆಲ್ಲ ಕೇಡೆಂದು ಪ್ರಜರ ದೃಢ ನಂಬುಗೆ ರಾಣಿ–ವಿಕಲಾಂಗಳಾದರೆ ರಾಜನ ಅಂಗವೂ ಮುಕ್ಕಾಗಿ ಶುಭ ಕಾರ್ಯಗಳಿಗೆ ಬರುವಂತಿಲ್ಲ ಎಂಬ ಭಾವನೆ. ರಾಜರಬೇಟೆ, ಮದುವೆ, ಪುತ್ರೋತ್ಸವ, ತೊಟ್ಟಿಲ ಕಾರ್ಯಗಳು ಪ್ರಜರಿಗೆಲ್ಲ ಸಂಬಂಧಿಸಿದಂತವು ರಾಜ ಕುಮಾರನಿಗೆ ಕನ್ನೆಯನ್ನು ಆಯ್ಕೆ ಮಾಡುವಾಗ ಪ್ರಜರ ಅಭಿಪ್ರಾಯವೂ ಮುಖ್ಯ, ಪ್ರಜರಲ್ಲಿ ಉಚ್ಚಕುಲದ ಬ್ರಾಹ್ಮಣರಿಂದ ಹಿಡಿದು ನೀಚಕುಲದವರೆಗೆ ಎಲ್ಲ ಪಂಗಡದವರಿದ್ದಾರೆ. ಬ್ರಾಹ್ಮಣರು ಪ್ರಮುಖವಾಗಿ ಕತೆಗಳ ಆಗು ಹೋಗುಗಳಲ್ಲಿ ಭಾಗವಹಿಸುತ್ತಾರೆ. ಹುಟ್ಟಿದ ಕೂಸಿನ ಜನ್ಮ ನಕ್ಷತ್ರದ ಆಧಾರದ ಮೇಲೆ ತಮ್ಮ ಹೊತ್ತಿಗೆಯ ನೆರವಿನಿಂದ ಅರಸು ಮನೆತನದ ಶುಭ ಅಶುಭಗಳನ್ನು ಮನಗಂಡು ಅರ್ಥೈಸುವ ಪರಿಣತರಿವರು, ಇದರಲ್ಲಿ ಏನಾದರೂ ವ್ಯತ್ಯಯಗಳಿದ್ದರೆ, ಅದಕ್ಕೆ ಪರಿಹಾರ ಮಾರ್ಗಗಳನ್ನು ಸೂಚಿಸುವ ವೆಂಕಂಭಟ್ಟರಂಥವರ ಮೇಲೆ ರಾಜನಿಂದ ಕೆಳಜಾತಿಯವರೆಗೆ ಅಚಲವಾದ ವಿಶ್ವಾಸ ಮತ್ತು ಶ್ರದ್ಧೆ ಸಂಗಮ್ಮನ ಹೆಸರಿಗೂ ಜಾನಪದ ಕಥೆ ಕಲಾ ಪ್ರಕಾರಗಳಿಗೂ ಒಂದು ತರಹದ ನಂಟು ಕಿನ್ನರಿ ಜೋಗಿಗಳ ಆಟ, ಅಜ್ಜಿ ಕಥೆಗಳಲ್ಲಿಯಂತೆ ಗೊಂದಲಿಗರ ಆಟಗಳಲ್ಲಿ ಆಕೆ ಇದ್ದಾಳೆ. 'ಬಾಳಬಿಕ್ಷುಕ' ಆಟದಲ್ಲಂತೂ ಆ ಮುದುಕಿಯ ಪಾತ್ರ ತುಂಬಾ ಮಹತ್ವದ್ದು.

೩. ಮಂತ್ರಿ

ಜಾನಪದ ಕತೆಗಳಂತೆ ಗೊಂದಲಿಗರ ಆಟಗಳಲ್ಲಿ ಕೂಡ, ರಾಜರಿರುವೆಡೆ ಮಂತ್ರಿಗಳು ಇದ್ದೇ ಇರುತ್ತಾರೆ. ಅರಸನ ಕುಲಕ್ಷತ್ರಿಯ ಎಂದು ಹೇಳಬಹುದು ಆದರೆ ಮಂತ್ರಿಯ ಕುಲ ಇಂತಹದ್ದೇ ಎಂಬ ಉಲ್ಲೇಖ ಎಲ್ಲಿಯೂ ಇಲ್ಲ. ಅರಸನ ಮೇಧಾಶಕ್ತಿಯೇ ತಾನಾಗಿ ವರ್ತಿಸುವ ಈತನ ಜಾಣ್ಮೆ ಕರ್ತವ್ಯನಿಷ್ಠೆ ವಿಧೇಯತೆಗಳು ಅದ್ಭುತವಾದವುಗಳು. ವಿಶ್ವಾಸ, ನಿಸ್ವಾರ್ಥತೆ, ಸಮಯ ಪ್ರಜ್ಞೆಗ್ಗಳ ಒಕ್ಕೂಟವೇ ಮಂತ್ರಿ ರಾಜ ಮತ್ತು ಪ್ರಜರಿಗಾಗಿ ಏನು ಮಾಡಲಿಕ್ಕೂ ಹಿಂದೆಗೆಯದ ವ್ಯಕ್ತಿ ತನ್ನ ಪ್ರಭುವಿಗೆ ಏಕವಚನದಲ್ಲಿ ಸಕಾಲಿಕವಾಗಿ ಎಚ್ಚರಿಸುವ ನ್ಯಾಯ ನಿಷ್ಠುರವಿದ್ದರೂ ಮಂತ್ರಿಯೂ ನಿರಂಕುಶ ಪ್ರವೃತ್ತಿಯ ತನ್ನ ರಾಜನ ತಲೆದಂಡದ ಮಾತಿಗೆ ತಲೆಬಾಗುವುದು ಉಂಟು.

೪. ರಾಕ್ಷಸರು

ಗೊಂದಲಿಗರ ಆಟದ ರಾಕ್ಷಸರು ಆಧುನಿಕ ಲೋಕದವರಾಗಿದ್ದಾರೆ. ಬಹುತೇಕ ಕ್ರೂರ ಸ್ವಭಾವದ ಪ್ರಾಣಿ ಸರ್ವ ಪ್ರಾಣಿಗಳನ್ನು ತಿನ್ನುವಂತಹವರು ಮಾನವರನ್ನು ಪೀಡಿಸುವುದರಲ್ಲಿ ಪ್ರಮುಖರು ಇವರಿಗೆ ಹಿಡಂಬಗಳೆಂದು ಕರೆಯುವುದು ಉಂಟು. ಈ ದೈತ್ಯರದು ಶಾಶ್ವತ ಸಂಸಾರವಲ್ಲ ತಾತ್ಕಾಲಿಕವಾಗಿ ಬದುಕುವಂತಹವರು ದೇವರುಗಳಂತೆ ಮರ್ತ್ಯಲೋಕವೇ ವಾಸಸ್ಥಳ. ಇಲ್ಲಿಯ ಮಾನವರಿಗೆ ಆ ಇಬ್ಬರು ಮೋಹಗೊಳ್ಳುತ್ತಾರೆ.

ಈ ರಾಕ್ಷಸರನ್ನು ನೇರವಾಗಿ, ಸದೆಬಡಿದು ಕೊಲ್ಲಲು ಆಗುವುದಿಲ್ಲ. ಇವರ ಪ್ರಾಣಗಳು ಗಡಿಗೆ, ಗೊಂಬೆ, ಮರಸೋಟಗಳಂಥ ಅನ್ಯ ವಸ್ತುಗಳು ಹಾಗೂ ಗಿಳಿಗಳಂಥ ಪಕ್ಷಿಗಳಲ್ಲಿರುವುದೇ ಹೆಚ್ಚು ಇವುಗಳನ್ನು ನಾಶ ಮಾಡಿದಾಗಲೇ ಆ ಪೀಡಕರಿಗೆ ಸಾವು ಸಮಿಪಿಸುತ್ತದೆ.

ಗೊಂದಲಿಗರ ಆಟಗಳಲ್ಲಿ ಒಂದು ರಾಕ್ಷಸಿ ಮಾತ್ರ ಭೂತದಯೆಯುಳ್ಳವಳಾಗಿರುವುದು. ಪ್ರಮುಖವಾಗಿದೆ. 'ವಿಘ್ನಾವತಿ' ಆಟದಲ್ಲಿ ಅಕ್ಕಂಬೋ ರಾಕ್ಷಸಿ ನಾವು ನೋಡಬಹುದಾಗಿದೆ.

೫. ತುರಂಗಿ ಬಾವಾ

ಹಿಡಿಂಬಾಗಳಂಥ ಅಮಾನುಷರ ಎಲ್ಲ ವಿಧದ ಮಂತ್ರ ಮಾಟ. ಮೋಸಗಳನ್ನು ನಿವಾರಿಸಿ ಸಜ್ಜನರಿಗೆ ನೆರವಾಗುವ ಬಾವಾಗಳಲ್ಲಿ ತುರಂಗಿ ಬಾವಾ ಒಬ್ಬ. ಅಸಮಾನ್ಯ ಮಾನವ ವ್ಯಕ್ತಿ ಜನ ಸಂಪರ್ಕವಿಲ್ಲದ ಏಕಾಂತ ಸ್ಥಳದಲ್ಲಿ ಈತನ ವಾಸ ಆಪತ್ತಿನಲ್ಲಿರುವ ಕಥಾನಾಯಕ, ನಾಯಕಿಯರಿಗೆ, ಈತ ಮಂತ್ರಿಸಿದ ಹರಳುಗಳನ್ನು ಕೊಡುತ್ತಾನೆ. ತನ್ನ ನೀಲಾ ಹೊತ್ತಿಗೆಯ ನೆರವಿನಿಂದ ಅಂಥವರಿಗೆ ಮಾರ್ಗದರ್ಶನ ಮಾಡುತ್ತಾನೆ. ಮಂತ್ರಕ್ಕೆ ಮಾವಿನಕಾಯಿ ಉದುರುವುದಿಲ್ಲವೆಂಬುದು ನೋಡುಗರಿಗೆ ಗೊತ್ತಿದ್ದರೂ ಕಥೆಗಳ ವಸ್ತು ಸ್ಥಿತಿ ಹುಟ್ಟಿಸುವ ಭ್ರಮೆ ಅದ್ಭುತ ಮಾಂತ್ರಿಕ ಶಕ್ತಿಯದೇ "ಇಚ್ಛಾಶಕ್ತಿಯಿಂದ ತಮ್ಮ ಅನಿಸಿಕೆಯನ್ನು ಅನ್ಯರ ಮೇಲೆ ಹೇರಬಹುದು. ಆಗು ಹೋಗುಗಳನ್ನು ಬದಲಿಸಬಹುದು" ಎನ್ನುವ ಬ್ರಮೆ ಮನುಷ್ಯವನಲ್ಲಿ ಅವನ ಅನಾಗರಿಕ ಅವಸ್ಥೆಯಿಂದಲೂ ಉಳಿದು ಬಂದಿರುವುದನ್ನು ನಾವು ಕಾಣುತ್ತವೆ. ಇಂದಿಗೂ ಇದರ ಕೈಚಳಕ ಸ್ವಾಮಿಗಳನ್ನು ಭಾವಗಳನ್ನು ಸೃಷ್ಟಿಸುತ್ತಲೇ ಇದೆ "ಈ ಕಾಲ್ಪನಿ ಈ ವೃತ್ತಿಯ ಬಗ್ಗೆ ಗಾಢವಾಗಿ ಜಾನಪದ ಗೀತೆಗಳಲ್ಲಿ ಭಕ್ತಿ ಗೀತೆಗಳಲ್ಲಿ ಉಲ್ಲೇಖವಿರುವುದೊಂದು ವಿಶೇಷ ಉತ್ತರ ಭಾರತದ ಜಾನಪದ ಸಾಹಿತ್ಯ ಸಂಪರ್ಕದಿಂದ ಈತ ನಮ್ಮ ಗೊಂದಲಿಗರ ಆಟಗಳಲ್ಲಿ ನುಗ್ಗಿರಬೇಕೆಂದು ಶ್ರೀ ಮುದೇನೂರು ಸಂಗಣ್ಣನವರು" ಅಭಿಪ್ರಾಯ ಪಡುತ್ತಾರೆ.

ಅಧ್ಯಾಯ - ಐದು

ಕಥೆಯ ಆಕರ, ಭಾಷಾ ಶೈಲಿ, ಮತ್ತು ಸ್ವರೂಪ

೫.೧. ಕಥೆಯ ಆಕರ

೫.೨. ಭಾಷಾ ಶೈಲಿ

೫.೩. ಕಥೆಗಳ ಸ್ವರೂಪ

ಅಧ್ಯಾಯ – ಐದು

ಕಥೆಯ ಅಕರ, ಭಾಷಾ ಶೈಲಿ, ಮತ್ತು ಸ್ವರೂಪ

೧. ಕಥೆಯ ಅಕರ

ಕನ್ನಡ ಜಾನಪದ ಸಾಹಿತ್ಯದಲ್ಲಿ ಗೊಂದಲಿಗರ ಆಟಗಳು ಅತ್ಯಂತ ಪ್ರಮುಖವು ಮತ್ತು ಪ್ರಾಚೀನವಾದಂತವುಗಳಾಗಿವೆ. ಗೊಂದಲಿಗರ ಆಟಗಳು ಅಂಬಾಭವಾನಿ ದೇವಿಯ ಸ್ತುತಿಯನ್ನು ಒಳಗೊಂಡಂತವುಗಳು ಈ ಆಟಗಳಲ್ಲಿ ಅದ್ಭತ ರಮ್ಯವಾದಂತಹವು ಮತ್ತು ಸಾಮಾಜಿಕ ತುಡಿತಗಳನ್ನು ಹೊಂದಿದಂತವುಗಳು ಜೀವಪರವಾದಂತಹ ಹೋರಾಟಗಳಿಂದ ಕೂಡಿದಂತಹವುಗಳಾಗಿವೆ ಗೊಂದಲಿಗರ ಕಥಾ ಸಾಹಿತ್ಯವನ್ನು ಜನಪದ ಪದ್ಯ ಮತ್ತು ಗದ್ಯವೆಂದು ನಿಶ್ಚಿತವಾಗಿ ಗೆರೆ ಎಳೆಯಲು ಸಾಧ್ಯವಿಲ್ಲವಾಗಿದೆ. ಈಗ ಈ ಕಥೆಗಳು ಗದ್ಯಪದ್ಯ ಮಿಶ್ರಿತವಾದವುಗಳೇ ಆಗಿವೆ. ಪದ್ಯಕ್ಕಿಂತಲೂ ಗದ್ಯದಲ್ಲಿ ಕಥೆಗಳನ್ನು ನಿರೂಪಿಸಿ ಜನರ ಮೆಚ್ಚುಗೆಯನ್ನು ಪಡೆದಿರುವುದು ನಮಗೆ ದೇವೇಂದ್ರಪ್ಪನ ಆಟಗಳಿಂದ ತಿಳಿದು ಬರುತ್ತದೆ. ಅಂತಹ ಸತ್ವವನ್ನು ಅವು ಒಳಗೊಂಡಿವೆ.

ಕನ್ನಡ ಜನಪದ ಕಥೆಗಳು ಮೂಲದಿಂದಲೂ ಅಜ್ಜಿಯರಿಂದ ಹರಿದು ಬಂದಂತವು ಇವು ಸಾಮಾನ್ಯ ಜನರ ನಾಲಿಗೆಯಲ್ಲಿ ತುಂಬಿಕೊಂಡು ಇನ್ನಿತರರ ಮನಸ್ಸನ್ನು ಮತ್ತು ಹೃದಯಗಳನ್ನು ಸೇರಿವೆ. ಕರ್ನಾಟಕದಲ್ಲಿ ವೃತ್ತಿ ಗಾಯಕರು ಈ ಜನಪದ ಸಂಪತ್ತನ್ನು ಹಾಗೆಯೇ ಕಾಯ್ದುಕೊಂಡು ಬಂದಿದ್ದಾರೆ. ಕರ್ನಾಟಕದಲ್ಲಿ ಗೊಂದಲಿಗರು ಜನಪದ ಸಾಹಿತ್ಯದ ಆಗರವೇ ಆಗಿದ್ದಾರೆ. ಶಾಸನಗಳು ಸಹ ಎಂದು ಕರೆಯಬಹುದಾಗಿದೆ. ಆದ್ದರಿಂದ ಈ ಜೀವಂತ ಶಾಸನಗಳೂ ಸಂಸ್ಕೃತಿಯನ್ನು ಕಥೆಗಳ ಮೂಲಕ ನಿರೂಪಿಸಿದ್ದಾರೆ. "ಗೊಂದಲಿಗ ಜೋಗಿಗಳ ಕಥೆಗಳನ್ನು ಚಂಪೂ ಎಂದು ಕರೆಯಬಹುದಾಗಿದೆ. ಈ ಕಥೆಗಳ ಕೆಲವು

ಭಾಗಗಳು ಸಂದರ್ಭೋಚಿತವಾದ ಮಟ್ಟುಗಳಿಂದ ಕೂಡಿದವು ಮತ್ತು ಆಶುಪದ್ಯಗಳಲ್ಲಿ ಸಾಗಿಕೊಂಡುಬಂದವು ಮಿಕ್ಕಭಾಗವು ಆಲಾಪನೆಯಿಂದ ಕೂಡಿದವುಗಳಾಗಿವೆ. ಇಂತಹ ಆಲಾಪನೆಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸಿಕೊಳ್ಳುವ ಜಾಣ್ಮೆ ಅವರಲ್ಲಿದೆ ಈ ಹಿನ್ನಲೆಯಲ್ಲಿ ಅವರು ತಮ್ಮ ಆಟದಲ್ಲಿ ತುಂತಣಿ, ಚೌಡಿಕೆ, ಸಂಬಾಳ, ತಾಳ ಮೊದಲಾದ ವಾದ್ಯಗಳಿಂದ ಆಟಗಳು ನಡೆಯುತ್ತವೆ ಜನಪದ ಚೆಂಪೂ ಒಂದಷ್ಟು ಸರಿಹೊಂದುತ್ತದೆ"[೧] (ಗೊಂದಲಿಗರ ಸಂಸ್ಕೃತಿ ಪು.೧೧೮)

ಗೊಂದಲಿಗರ 'ಕಥನ ಶೈಲಿ' ಮತ್ತು 'ಕಥಾ ಶಿಲ್ಪಿ' ಒಂದೇ ಮಾದರಿಯಾಗಿರುವುದು ಒಂದು ಪ್ರದೇಶದಲ್ಲಿ ಮಾತ್ರ ಇನ್ನು ಹಲವೆಡೆ ಈ ಮಾದರಿಗಳು ಬೇರೆ ಬೇರೆ ಆಗಿರುವುದನ್ನು ಕಾಣಹುದಾಗಿದೆ. ಆದರೆ ಜಾನಪದ ಸಾಹಿತ್ಯ ಮಾತ್ರ ಇವರಿಗೆ ಬಳುವಳಿಯಾಗಿ ನಿಂತಿದೆ. ಜನಪದ ಕತೆಗಳನ್ನು ಗ್ರಂಥ ರೂಪದಲ್ಲಿ ಬರೆದು ಶಿಷ್ಟರೂಪಕ್ಕೆ ತಂದಿರುವುದನ್ನು ಕಾಣುತ್ತೇವೆ. "ಯಾವುದೇ ಕತೆಗಳನ್ನು ನೋಡಿದರೂ ಅವುಗಳನ್ನು ಪೂರ್ವದಲ್ಲಿ ತಲೆಮಾರಿನಿಂದ ತಲೆಮಾರಿನವರೆಗೆ ಅಸಂಖ್ಯಾತ ಜನರು ಹೇಳುತ್ತಾ ಬಂದಿರುವುದು ನಮಗೆ ಕಂಡುಬರುತ್ತದೆ. ಈ ಕಥೆಗಳು ಜನಸಾಮಾನ್ಯರ ನಾಲಿಗಯ ಮೇಲೆ ಅವು ಸಹಜವಾಗಿಯೇ ಪ್ರಚಲಿತವಾಗಿರಬೇಕು. ಹೀಗೆ ಇವುಗಳ ಆದರಿಸಿ ದೇವೇಂದ್ರಪ್ಪನವರ ಆಟಗಳು ಬೆಳೆದುಬಂದಿರಬಹುದು ಗಮನಿಸಬಹುದಾಗಿದೆ. ಜನಪದ ಸ್ವರೂಪದ ಈ ಕಥಾ ಸಾಹಿತ್ಯ ಸಾಮಗ್ರಿಗೇ ಶ್ರೇಷ್ಠ ಸಾಹಿತ್ಯದ ಒಂದು ವಿಶಿಷ್ಠ ರೂಪಕೊಟ್ಟವರು 'ವಸುಭಾಗಭಟ್ಟರು' ಮತ್ತು ವಿಷ್ಣು ಶರ್ಮ (ಗೊಂದಲಿಗರ ಸಂಸ್ಕೃತಿ, ಪುಟ-೧೧೯) ಈ ದೃಷ್ಠಿಯಿಂದ ನೋಡಿದರೆ ಜನಪದ ಸ್ವರೂಪದ ಕಥಾ ಸಾಹಿತ್ಯವು ಗ್ರಂಥರಚನಾ ಕಾರನ ಕೈಯಲ್ಲಿ ಶ್ರೇಷ್ಠ ಸಾಹಿತ್ಯ ಆಗಿ ಬೆಳೆದುಬಂದಿರುವುದು ನಮಗೆ ಸ್ಪಷ್ಟವಾಗುತ್ತದೆ.

ಜಾನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯವು ಪರಸ್ಪರ ಒಂದಕ್ಕೊಂದು ಅವಿನಾಭಾವ ಸಂಬಂಧವನ್ನು ಹೊಂದಿರುವುದು ಹೀಗಿರುವಾಗ ಯಾವುದು ಮೂಲ ಅನ್ನುವುದು ಕಷ್ಟವಾದರೂ ಮೊದಲ ಬೆಳೆ ಪ್ರಾಕೃತವಾಗಿರುವುದನ್ನು ಕಾಣುತ್ತೇವೆ. ಹೀಗೆ ನಾವು ಬಿ.ಎಂ.ಶ್ರೀಯವರ "ಜನವಾಣಿ ಬೇರು ಕವಿ ವಾಣಿ ಹೂವು" ಎಂಬುದು ಈ ಹಿನ್ನಲೆಯಲ್ಲಿ ಅರ್ಥಪೂರ್ಣವಾಗಿದೆ ಅದರಂತೆ ಶಿಷ್ಟವಾದ ಕಥೆ ಹಾಗೂ ಕಥಾ ಗ್ರಂಥಗಳಿಗೆ ಜನಪದವೇ ಮೂಲವಾಗಿದೆ. ಜನಪದ ಸಂಸ್ಕೃತಿ ಮತ್ತು ನಗರ ಸಂಸ್ಕೃತಿಗಳು ಸೇರಿಕೊಂಡಿವೆ. ಕೇವಲ ಗ್ರಾಮದಲ್ಲಿ ಜನಪದ ಸಂಸ್ಕೃತಿ ಇರದೆ, ನಗರದಲ್ಲಿ ಜನಪದ ಸಂಸ್ಕೃತಿಯನ್ನು ಕಾಣಬಹುದಾಗಿದೆ.

ಜಾನಪದ ಸಾಹಿತ್ಯದಲ್ಲಿ ಭಾಷಾ ಸತ್ವ ಮತ್ತು ಸಂಸ್ಕೃತಿಯ ಸತ್ವಗಳು, ತುಂಬಿಕೊಂಡಿರುವುದನ್ನು ಕ್ರಿ.ಶ.೧೮೪೫ರಲ್ಲಿ ಜಾನಪದ ಪಂಡಿತರು ಗುರುತಿಸಿದರು. ಜೇಕಬ್

ಗ್ರಿಮ್ಸ್ (೧೭೫೮-೧೮೬೩) ಇವರ 'ಡೆಶ್ಚೊ ಮಾಯಾಥಾಲಜಿ' ಎಂಬ ಜನಪದ ಗ್ರಂಥವು ವೈಜ್ಞಾನಿಕ ಅಧ್ಯಾಯನಕ್ಕೆ ತಳಹದಿಯಾಗಿದೆ. ಜಾನಪದ ಸಾಹಿತ್ಯದ ಒಂದು ಪ್ರಕಾರ ಜನಪದ ಕಥೆ, ಜನಪದ ಕಥನ ಅಧ್ಯಯನದಲ್ಲಿ ಮಾನವ ವಿಜ್ಞಾನಕ್ಕೆ ಪೂರಕವಾಗಿ ಭಾಷಾ ವಿಜ್ಞಾನ ಕಾರ್ಯವೆಸಗುತ್ತ ಬಂದಿರುತ್ತದೆ."[೨] (ಜಾನಪದ ಸಾಹಿತ್ಯದರ್ಶನ-ಭಾಗ೨, (ಸಂ) ಎ.ಎಸ್.ಸುಂಕಾಪುರ)

ಈ ದೃಷ್ಟಿಯಿಂದ ಗೊಂದಲಿಗರ ಕಥಾ ಸಾಹಿತ್ಯವನ್ನು ಸಿರಿವಂತಿಕೆಯಿಂದ ತುಂಬಿದ ಜನಪದ ಶ್ರೀಮಂತ ಸಾಹಿತ್ಯವೆಂದು ಹೇಳಬಹುದಾಗಿದೆ. ಈ ಆಟಗಳಿಗೆ, ಐತಿಹಾಸಿಕ, ಪೌರಾಣಿಕ, ಸ್ಪರ್ಶವಿಲ್ಲದಿಲ್ಲ. ಇವುಗಳಲ್ಲಿ ಬರುವ ಅನೇಕ ಪಾತ್ರಗಳು ಪೌರಾಣಿಕ ಮತ್ತು ಐತಿಹಾಸಿಕ ಸಂಬಂಧವನ್ನು ಹೊಂದಿಕೊಂಡಿರುವುದು ನಮಗೆ ತಿಳಿಯುತ್ತದೆ. ಗೊಂದಲಿಗರ ಆಟಗಳಲ್ಲಿ ಕುಮಾರರಾಮ ಹಾಗೂ ಸೋಮಶೇಖರ ಚಿತ್ರಶೇಕರಗಳಂಥ ಐತಿಹಾಸಿಕ ವಸ್ತುಗಳೂ ಇವೆ. ಇವುಗಳಿಗೆ ಐತಿಹಾಸಕ್ಕೆ ಹತ್ತಿರದ ಐತಿಹ್ಯದ ಸ್ವಭಾವ ಇರುವುದರಿಂದ ಸಾಕ್ಷಿ ಬೇಕಲಾಗುವುದಿಲ್ಲ. ಯಾಕೆಂದರೆ ಐತಿಹ್ಯಕ್ಕೆ ಭೌತಿಕ ಆಧಾರವೊಂದು ಇರುವುದಾದರೂ ಅದಕ್ಕೆ ಕಾಲ್ಪನಿಕತೆ, ಅತಿಮಾನವತೆ ನಂಬಿಕೆಗಳು ಸೇರಿಕೊಳ್ಳುವುದು ಕಂಡುಬರುತ್ತದೆ. ಈ ಗೊಂದಲಿಗರು ಐತಿಹಗಳಿಗೆ ಪೌರಾಣಿಕ ಸ್ಪರ್ಶವನ್ನು ನೀಡುವುದರಲ್ಲಿಯು ಬಲ್ಲವರಾಗಿದ್ದಾರೆ. 'ಕುಮಾರರಾಮನ' ಆಟದಲ್ಲಿ ರತ್ನಾಜಿಗೆ ದೇವಲೋಕದ ನಂಟನ್ನು ಅಂಟಿಸಿದ್ದಾರೆ. ಅದರಂತೆ ಕಾಲ್ಪನಿಕ ಕತೆಗಳಿಗೂ ಪೌರಾಣಿಕ ಸಂಬಂಧವನ್ನು ಕಲ್ಪಿಸಿದ್ದಾರೆ, ಮುಖ್ಯವಾಗಿ ನಾವು ದೇವೇಂದ್ರಪ್ಪನವರ ಆಟದಲ್ಲಿ ನೋಡುವುದಾದರೆ "ವೀರಪರಾಕ್ರಮ ಆಟದಲ್ಲಿ ದೇವಲೋಕದ ವಿಧಿಮಾಯೆ ತನ್ನ ಬಂಜೆತನ ನೀಗಿಸಿಕೊಳ್ಳಲಿಕ್ಕಾಗಿ ಈ ಭೂಲೋಕದ ರಾಜ ಚಂದ್ರಶೇಖನನ್ನು ಸೂರ್ಯಕಾಂತಿಯಾಗಿ ಕೈಹಿಡಿಯುತ್ತಾಳೆ" ಅದರಂತೆ ಸತಿ ಶಿವಲೋಚನ ಆಟದಲ್ಲಿ ಈ ಮರ್ತ್ಯ ಲೋಕದಲ್ಲಿ ಶಿವಲೋಚನೆಯಾಗಿ ಜನ್ಮತಾಳುತ್ತಾಳೆ ಹೀಗೆ ಈ ದೇವೇಂದ್ರಪ್ಪನವರ ಆಟಗಳು ಐತಿಹಾಸಿಕ ಮತ್ತು ಪೌರಾಣಿಕ ಸಂಬಂಧವನ್ನು ಹೊಂದಿದವುಗಳಾಗಿವೆ"

ಗೊಂದಲಿಗರ ಆಟ ಒಂದು ಸಮಾಜಿಕ ಕ್ರಿಯೆ, ಈ ಆಟಗಳು ಪ್ರಮುಖವಾಗಿ 'ಸುಧಾರಾಮೆ' ಕಥೆಯಲ್ಲಿಯ ಹಲವುಘಟನೆಗಳು ಹಾಗೂ 'ಕಡ್ಡಿ ಮಟ್ಟಿ ಸ್ಟೇಷನ್ ಮಾಸ್ತರ' ಕಥೆಯಲ್ಲಿ ಬರುವ ಕೂಸಿನ ಕೊಲೆಯ ಪ್ರಸಂಗವನ್ನು ನೋಡಿದರೆ, 'ಶಿಲಾವತಿ' ಆಟದ ಕಥಾ ಭಾಗದಲ್ಲಿ ನಾವು ಈ ಮೇಲಿನ ಪ್ರಸಂಗಗಳನ್ನು ಕಾಣುತ್ತೇವೆ. ಇವರ ಆಟಗಳಿಗೆ ಕೇವಲ ಪರಮಾರ್ಥ ತತ್ವಜ್ಞಾನ ಆಧ್ಯಾತ್ಮ ಭಕ್ತಿಯ ಮೇರು ಪ್ರಮಾಣದ ಅಗಾಧತೆಗಳನ್ನು ವಿವರಿಸುವುದು ಇವಕ್ಕಿಲ್ಲ ಸಂಸಾರಹೇಯ ಸ್ಥಳಾಸಕ್ತಿ ವಿರತಿಗಳ ಮಾತಿಲ್ಲ ಎಲ್ಲ ಆಟಗಳು ಅತ್ಯಂತವಾಗಿ ಲೌಕಿಕ ಆಗುಹೋಗುಗಳ ದೃಷ್ಟಿಯಿಂದಲೆ ಬೆಳೆದು ಬಂದಂತಹ ಕಥನಕಗಳಾಗಿವೆ.

ಗೊಂದಲಿಗರ ದೇವೇಂದ್ರಪ್ಪನವರ ಆಟಗಳು ರಾಜರಾಣಿಯವಾದರೂ, ಅವನ್ನು ಕಟ್ಟಿದವರು, ಆಡುವವರು, ನೋಡುವವರು ಸಾಮಾನ್ಯ ಜನಪದರೇ ಆಗಿರುವುದರಿಂದ ಜನಪದರು ದಿನ ನಿತ್ಯದಲ್ಲಿ ಅನುಭವಿಸುವಂತಹ ಕಷ್ಟ ಸಹಿಷ್ಣತೆಯನ್ನು ಪ್ರತಿಬಿಂಬಿಸುವ ಸಾಮಾಜಿಕ, ಆಟಗಳೇ ಆಗಿವೆ ಎಂದು ಹೇಳಬಹುದಾಗಿದೆ, ಇವರ ಆಟಗಳಲ್ಲಿ ಬೇಟೆಗಳು, ವಿಶ್ವಾಸ ಘಾತುಕತನಗಳು ಅನಿಮಿತ್ತವೈರ, ಸ್ವಾರ್ಥ, ಲಾಲಾಸೆ, ಅಮಾನುಷತೆ, ಯುದ್ದ, ಕೊಲೆ, ಸುಲಿಗೆ, ಅಧಿಕಾರದಾಹ ಪ್ರಣಯ ಪ್ರಸಂಗ, ಕರ್ತವ್ಯ ನಿಷ್ಠೆ, ಜೀವ ಕಾರುಣ್ಯ, ಸಮಾಧಾನ, ದೈವೀನಿಷ್ಠೆ, ಸಾಮಾಜಿಕತೆ, ಮಾನವ ಧರ್ಮಾನುಸಂಧಾನ ಇವೆಲ್ಲವುಗಳನ್ನು ಮನಗಾಣಿಸುವುದು. ಈ ಆಟಗಳ ಪ್ರಮುಖ ಉದ್ದೇಶವಾಗಿದೆ. ಮತ್ತು ಘಟನೆಗಳನ್ನು ಅವುಗಳ ನಿಭೀಡತೆಯನ್ನು ಪ್ರತಿಬಿಂಬಿಸುವ ಗಟ್ಟಿತನ ಈ ಆಟಗಳಿಗೆ ಇರುವುದು.

ಒಂದು ಕಾಲದಲ್ಲಿ ಕರಾವಳಿಯ ಪಾಡ್ದದನಗಳಂತೆ ನಿರ್ದಿಷ್ಟ ಪಂಗಡಗಳ ಆರಾಧನೆಯ ಮಾಧ್ಯಮವಾಗಿ ಮೈದಳೆದ ಧಾರ್ಮಿಕ ಕಲೆಗಳಲ್ಲಿ ಗೊಂದಲವು ಒಂದು ಆದರೆ ಕಾಲಕ್ರಮೇಣ ಬದಲಾದ ಪರಿಸ್ಥಿತಿಯಲ್ಲಿ ಜೀವನ ನಡೆಸುವುದಕ್ಕಾಗಿ ಅನ್ಯಕಥಾವಸ್ತು ಮತ್ತು ಪ್ರಸ್ತುತಿಯ ತಂತ್ರಗಳಿಂದ ಗೊಂದಲಿಗರು ತಮ್ಮ ಆಟಗಳಿಗೆ ರಂಜನೀಯ ರೋಚಕ ರೂಪಕೊಟ್ಟುಕೊಂಡು ಸರ್ವಜನರಿಗೆ ಇಡಿಸುವಂತಹ ಕಲೆಯನ್ನಾಗಿಸಿಕೊಂಡಿರಬಹುದಾಗಿದೆ.

ಇವರ ಆಟಗಳಲ್ಲಿ ಗಂಡು–ಹೆಣ್ಣು, ಗಂಡು–ಗಂಡು, ಹೆಣ್ಣು–ಹೆಣ್ಣು ಪಾತ್ರಗಳ ಮದ್ಯೆ ಆಂತರಿಕ ಕ್ರಿಯೆ ಹಾಗೂ ಸಂಘರ್ಷಗಳೇ ಆಟದ ಕಥಾ ವಸ್ತುಗಳಾಗಿವೆ. ಬದುಕಿನ ಗೊತ್ತು ಗುರಿಗಳನ್ನು ನಿರ್ದೇಶಿಸುವುದರೊಂದಿಗೆ ಎಲ್ಲದರ ಬಗ್ಗೆ ವಿವೇಚಿಸುವಂತಹ ಪ್ರಚೋಧನೆಯನ್ನು ನೀಡುವುದು ಕುಲ ಗೋತ್ರ ಧಾರ್ಮಿಕ ಚೌಕಟ್ಟುಗಳನ್ನು ದಾಟಿ ಲೌಕಿಕ ಆವರಣದಲ್ಲಿ ಆಟ ಮುಂದುವರೆಯುತ್ತವೆ. ಬಾಲ್ಯವಿವಾಹ, ಬಹುಪತ್ನಿತ್ವ, ಸ್ತ್ರೀ ಶೋಷಣೆ ವೇಶ್ಯಾಪದ್ದತಿ, ರಾಜ್ಯಕ್ಕೆ ಸಂಬಂಧಿಸಿದಂತೆ ಶ್ರೇಣಿಕೃತ ವ್ಯವಸ್ಥೆ ರಾಜ, ರಾಣಿ, ಮಂತ್ರಿ, ಸೈನ್ಯ ಹಾಗೂ ಪ್ರಜರ ಕರ್ತವ್ಯಗಳು ಎಂಬವು ಎಂಥಹವು ಎಂಬುದರ ಹಿನ್ನಲೆಯಲ್ಲಿ ಕತೆ ಹುಟ್ಟುಕೊಂಡಿರುತ್ತದೆ. ಎಲ್ಲವು ಅರಸುಮನೆತನದ ಕತೆಗಳೇ ಆದರೆ ಅವು ಜಾನಪದ ಬದುಕಿನಿಂದ ಹುಟ್ಟಿಕೊಂಡು ಬಂದು ಒಂದು ಹೊಸ ವಿಶಿಷ್ಠ ಸೃಷ್ಠಿಯಾಗಿರುವುದು ನಾವು ಮರೆಯುವಂತಿಲ್ಲ.

ಈ ಗೊಂದಲಿಗರು ತಾವು ನೆಲೆಸಿರುವ ಪರಿಸರದ ನಂಬಿಕೆ ಆಚರಣೆಗಳನ್ನು ತಮ್ಮ ಕಥಾವಸ್ತುಗಳಿಗೆ ಅಳವಡಿಸಿಕೊಳ್ಳುತ್ತಾರೆ. “ಸತಿ ಶಿವಲೋಚಾನಳ ಶವವನ್ನು ಕೈವಲ್ಯದಲ್ಲಿರಿಸಿಕೊಂಡು ಬಾಜಾ ಬಜಂತ್ರಿಯಿಂದ ಯಾತ್ರೆ ಹೊರಟಾಗ ಬೀದಿಗುಂಟ ಚುರುಮರಿಯನ್ನು ಸುರಿಸುತ್ತ ಹೋಗಲಾಗುತ್ತದೆ. ಇದು ಲಿಂಗಾಯತ ಶವಸಂಸ್ಕಾರ ವಿಧಿ

ಇಂತವುಗಳೆಲ್ಲವುಗಳನ್ನು ಆದರಿಸಿ ಕತೆಯನ್ನು ಎಣೆಯುವಂತಹದ್ದು, ಸಮಾಜದಲ್ಲಿ ನಡೆಯುವುದನ್ನೇ ಪ್ರಮುಖವಾಗಿ ಬಿಂಬಿಸುವಂತಹ ಚಾತುರ್ಯ ಅವರದು ಎಂದು ಹೇಳಬಹುದಾಗಿದೆ.

ಒಟ್ಟು ನಮ್ಮ ಕನ್ನಡನಾಡಿನಲ್ಲಿ ಗೊಂದಲಿಗರು ಆಡುವ ಕಥೆಗಳು ಅರವತ್ತರಿಂದ ಎಂಬತ್ತರವರೆಗೆಂದು ಕೆಲವು ವಿದ್ವಾಂಸರು ಅಂದಾಜು ಮಾಡಿದ್ದಾರೆ. "ಡಾ.ನಿಂಗಣ್ಣ ಸಣ್ಣಕ್ಕಿ ಅವರು ತಮ್ಮ ಮಹಾಪ್ರಬಂಧದಲ್ಲಿ ಹಾಗೂ ಅನ್ಯಲೆಖನಗಳಲ್ಲಿ ಇಪ್ಪತ್ತೇಳು ಕತೆಗಳನ್ನು ಹೆಸರಿಸಿದ್ದಾರೆ. ಇವುಗಳನ್ನು ಕಾಲ್ಪನಿಕ, ಪೌರಾಣಿಕ, ಐತಿಹಾಸಿಕಗಳನ್ನಾಗಿ ಜನಪದರ ಕತೆಗಳನ್ನಾಗಿ ವರ್ಗೀಕರಿಸಿದ್ದಾರೆ"[೩] (ಗೊಂದಲಿಗರ ಸಂಸ್ಕೃತಿ- ೧೨೨)

ಅದರಂತೆ ಶ್ರೀ ಕ್ಯಾತನಹಳ್ಳಿ ರಾಮಣ್ಣನವರು ಬಿಜಾಪುರದ ಗೊಂದಲಿಗರ ಮೇಳದಿಂದ "ಗೊಂದಲಿಗರ ಕತಗಳು" ಮತ್ತು "ಶಿವಮೊಗ್ಗ ಜಿಲ್ಲೆಯ ಗೊಂದಲಿಗರ ಕತೆಗಳು" ಹಾಗೂ ಗೊಂದಲಿಗರ ಕತೆಗಳನ್ನು 'ಬಿ.ಎಸ್.ಗದ್ದಿಗಿಮಠರೂ' (ಜಯಕರ್ನಾಟಕ ಸಂ-೩೩, ಸಂ-೩೨). 'ಶ್ರೀ ಗೋ.ರು. ಚೆನ್ನಬಸಪ್ಪನವರೂ ಪಟ್ಟಿ ಮಾಡಿದ್ದಾರೆ.'[೪] (ಕ.ಜ.ಕಲೆಗಳು, ಕ.ಸಾ.ಪ.ಬೆಂಗಳೂರು, ಪುಟ-೬೫(೨೪ ಕತೆಗಳು)೧೯೯೭)

ಮೇಲೆ ತಿಳಿಸಿರುವ ವಿದ್ವಾಂಸರ ಪಟ್ಟಿಯನ್ನು ಗ್ರಹಿಸಿ ಶ್ರೀಮುದೇನೂರು ಸಂಗಣ್ಣನವರು ಪ್ರತಿಕ್ರಿಯಿಸಿದ್ದು ಹೀಗೆ "ಡಾ.ನಿಂಗಣ್ಣ ಸಣ್ಣಕ್ಕಿಯವರು ಉಲ್ಲೇಖಿಸಿರುವ ಬಸವೇಶ್ವರ-ಚನ್ನಬಸವೇಶ್ವರ ಕಥೆ, ಸತ್ಯಹರಿಶ್ಚಂದ್ರನ ಕತೆ, ಭಕ್ತಸಿರಿಯಾಳನ ಕಥೆಯಂಥವು ಅವರ ಪ್ರದೇಶದಲ್ಲಿದ್ದರೂ ಕರ್ನಾಟಕದ ಅನ್ಯಭಾಗದಲ್ಲಿ ಪ್ರಚಲಿತವಿರುವುದು ನನಗೆ ಕಂಡಿಲ್ಲ. ಉತ್ತರ ಕರ್ನಾಟಕದ್ದೇ ವಿಶಿಷ್ಟಕೊಡುಗೆಯಾದ ಸಣ್ಣಾಟಗಳ ರೂಪದಲ್ಲಿ ಬಸವೇಶ್ವರ, ಬಸವಂತ-ಬಲವಂತ, ಸತ್ಯ ಹರಿಶ್ಚಂದ್ರಗಳು ಜನಪ್ರಿಯವಿರುವುದರಿಂದ ಆ ಭಾಗದಲ್ಲಿ ಅಲ್ಲಲ್ಲಿ ಹಲವು ಗೊಂದಲಿಗರು ಅವುಗಳನ್ನು ತಮ್ಮ ಆಟಗಳಿಗೆ ವಸ್ತುವಾಗಿಸಿಕೊಂಡಿದ್ದರೆ. ಆಶ್ಚರ್ಯ ಪಡಬೇಕಾಗಿಲ್ಲವೆಂದು ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಾರೆ."[೫] (ಗೊಂದಲಿಗರ ದೇವೇಂದ್ರಪ್ಪನ ಆಟಗಳು, ಪೀಠಿಕೆ ಭಾಗ, ಪುಟ-೩೩)

ಈ ಹಿನ್ನಲೆಯಲ್ಲಿ ದೇವೇಂದ್ರಪ್ಪನ ಆಟಗಳನ್ನು ನೋಡಿದರೆ. ಇವು ಐತಿಹಾಸಿಕ, ಪೌರಾಣಿಕ, ಜಾನಪದ, ಸಾಮಾಜಿಕ ಸಂಬಂಧಗಳನ್ನು ಹೊಂದಿಕೊಂಡು ಬೆಳೆದುಬಂದಂತವು ಏಕೆಂದರೆ ಈ ಆಟಗಳಲ್ಲಿ ಎಲ್ಲಾ ಕಾಲಕ್ಕೆ ತಕ್ಕ ಹಾಗೆ ತಮ್ಮ ನೈಜತೆಯನ್ನು ಮೆರೆದಂತವುಗಳಾಗಿವೆ, ಈ ಆಟಗಳಲ್ಲಿ ಐತಿಹಾಸಿಕತೆ ಕಂಡು ಬಂದರೂ ಇವು ಇಂದಿನ ಜನಸಾಮಾನ್ಯರ ಅನುಭವ ಮತ್ತು ಜೀವನದ ಕ್ರಮವನ್ನು ಪ್ರಚುರ ಪಡಿಸುತ್ತಾ ಜನರಲ್ಲಿ ನೀತಿ ಸಹಿಷ್ಣುತೆಯನ್ನು ತುಂಬುತ್ತಾ ಹೋಗುವಂತಹದ್ದು ನಮಗೆ ಕಂಡುಬರುತ್ತದೆ. ಆದ್ದರಿಂದಲೇ ಇವು ಈ ಎಲ್ಲಾ ಸಂಬಂಧಗಳನ್ನು ಮೇಳೈಸಿಕೊಂಡು ಬೆಳವಣಿಗೆ ಪಡೆದಿವೆ ಎಂದು ಹೇಳಬಹುದಾಗಿದೆ.

ಮುಖ್ಯವಾಗಿ ಜಾನಪದ ನಂಬಿಕೆ, ಆಚರಣೆಗಳನ್ನು ಹೊಂದಿದಂತಹ ಈ ಕಥಾವಸ್ತು ಕೆಲವೆಡೆ ಸಾಂಸ್ಕೃತಿಕ, ನಂಬುಗೆಗಳನ್ನು ಹೆಚ್ಚು ಹೆಚ್ಚು ಶ್ರೀಮಂತಗೊಳಿಸುವುದು ಕಂಡುಬರುತ್ತದೆ. ಆದ್ದರಿಂದ ಇವರ ಆಟಗಳನ್ನು ಸಂಪೂರ್ಣ ಜಾನಪದ ಆವರಣದಲ್ಲಿ ನಡೆಯುವ ಒಂದು ಕಥಾ ನಾಟಕ ಮೂಲ ಕಥಾವಸ್ತುವಿನ ಆಕೃತಿ ನಿರ್ದಿಷ್ಟ ಉದ್ದೇಶವನ್ನು ಅನುಭವಕ್ಕೆ ತರುವ ರೀತಿಯ ಸಂರಚನೆಯಾಗಿರುತ್ತದೆ ಎಂದು ಹೇಳುಬಹುದು.

ಒಟ್ಟು ಈ ದೇವೇಂದ್ರಪ್ಪನ ಆಟಗಳು ಇಂದಿನ ಸಾಮಾಜಿಕ ಪರಿಸ್ಥಿತಿಯನ್ನು ಗ್ರಹಿಸಿ, ಅವುಗಳಿಗೆ ತಕ್ಕಹಾಗೆ ಆಟಗಳನ್ನು ರೂಪಿಸಿಕೊಂಡು ಆಡುವಂತಹದ್ದು ನಮಗೆ ಕಂಡುಬರುತ್ತದೆ. ಈ ಮೇಲಿನ ಎಲ್ಲಾ ವಿವರಗಳನ್ನು ನೋಡಿ, ಇವು ಸಾಮಾಜಿಕ ಆಟಗಳಾಗಬಾರದೇಕೆ? ಎಂಬುದು ನನ್ನ ಅಭಿಮತ, ಇಂತಹ ಸಾಮಾಜಿಕವಾದಂತಹ ಆಶಯಗಳು ಈ ಹಿಂದೆಯೂ ಇದ್ದಿರಬಹುದು ಈಗಲೂ ಸಹ ಇವೆ ಎಂಬುದು ನಮ್ಮ ಗಮನಕ್ಕೆ ಬಾರದಿರದು.

ಭಾಷಾ ಶೈಲಿ

ಭಾಷೆ ಎಂದ ತಕ್ಷಣ ಇಬ್ಬರು ವ್ಯಕ್ತಿಗಳ ನಡುವೆ ನಡೆಯುವ ಸಂಭಾಷಣೆ ನೆನಪಿಗೆ ಬರುತ್ತದೆ. ಹಾಗೆಯೇ ಜನರು ಆಡುವ ಬರೆಯುವ ಪ್ರಕ್ರಿಯೆ ಕಣ್ಣೆದುರಿಗೆ ಬಂದು ನಿಲ್ಲುತ್ತದೆ ಇಂಥ ಭಾಷೆಯ ಬಗ್ಗೆ ಸಾಮಾನ್ಯವಾಗಿ ಯಾರು ತಲೆಕೆಡಿಸಿಕೊಳ್ಳುವುದಿಲ್ಲ. ಜನಸಾಮಾನ್ಯರಿಗೆ ಇದರ ಪರಿವೇ ಇರುವುದಿಲ್ಲ. ಹಾಗೆ ಚಿಂತಿಸಬೇಕಾದ ಸಂದರ್ಭವೂ ಬರುವುದಿಲ್ಲ. ಇದ್ದಕ್ಕಿದ್ದಂತೆ ನಾನು ಆಡುವ ಭಾಷೆ ಹೇಗೆ ಹುಟ್ಟಿತು ಎಂದು ಯೋಚಿಸಿದರೆ. ಒಂದು ಕ್ಷಣ ದಿಗಿಲಾಗುತ್ತದೆ. ಆದರೆ ಭಾಷೆಯ ಬಳಕೆ ಇಲ್ಲದ ಸಮಾಜವೊಂದನ್ನು ಈ ಭೂಮಿಯಮೇಲೆ ನೋಡಲು ಸಾಧ್ಯವಿಲ್ಲ ಎನ್ನುವುದು ಸತ್ಯವಾದದ್ದು, ಭಾಷೆಯಿಲ್ಲದ ಜಗತ್ತನ್ನು ಕಲ್ಪಿಸಿಕೊಳ್ಳುವುದೂ ಕೂಡ ಕಷ್ಟ ಏಕೆಂದರೆ ಭಾಷೆಯಿಲ್ಲದೆ ಪ್ರಾಣಿಗಳಂತೆ ಬದುಕುವುದು ಕಲ್ಪನಾತೀತವಾದದ್ದು ಮನುಷ್ಯ ತನ್ನ ಭಾವನೆಗಳನ್ನು ಇತರರಿಗೆ ಹೇಳಲು ಬೇರೆಯವರ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಪರಸ್ಪರ ಸಂವಹನಕ್ಕಾಗಿ ಇರುವ ಮಾಧ್ಯಮವೇ ಭಾಷೆ, ಭಾಷೆ ಇಲ್ಲದಿದ್ದರೆ ಸಮಾಜದಲ್ಲಿ ಪರಸ್ಪರ ಸಂವಹನ ನಿಂತುಬಿಡುತ್ತದೆ. ಸಂವಹನವೇ ಇಲ್ಲದಿದ್ದರೆ. ಸಮಾಜ, ಸಮುದಾಯದ ನಿರ್ಮಾಣವೇ ಅಸಾಧ್ಯವಾಗಿಬಿಡುತ್ತದೆ. ಭಾಷೆ ಇಲ್ಲದ ಮನುಷ್ಯನ ಬಾಳು ವ್ಯರ್ಥ ಏಕೆಂದರೆ ಮನುಷ್ಯ ಯೋಚನೆ ಮಾಡುವುದು ಕೂಡ ಭಾಷೆಯಲ್ಲಿಯೇ ಹಾಗಾಗಿ ಭಾಷೆಯಿಲ್ಲದಿದ್ದರೆ, ಮನುಷ್ಯ ಕೂಡ ಪ್ರಾಣಿಗಳಿಗಿಂತ ಭಿನ್ನವಾಗಿಯೇನು ಇರುತ್ತಿರಲಿಲ್ಲ. ಭಾಷೆ ಮನುಷ್ಯನನ್ನು ಜೀವಿಸಲು ಸಂಘಜೀವಿಯಾಗಲು ನಾಗರೀಕನಾಗಿ ಬಾಳಲು ಕಾರಣವಾಗಿರುವುದು ಭಾಷೆ ಒಂದು ವಿಧದಲ್ಲಿ ಮನುಷ್ಯನ ಒಂದು ಅಂಗವೇ ಆಗಿದೆ ಮನುಷ್ಯ ಹುಟ್ಟಿ ಅನಂತರ ಭಾಷೆ ಕಲಿತರೂ ಆತನಿಂದ ಅದನ್ನು ಬೇರ್ಪಡಿಸಲು ಸಾಧ್ಯವಿಲ್ಲವೆಂದು ಹೇಳಬಹುದಾಗಿದೆ.

ಈ ಹಿನ್ನಲೆಯಲ್ಲಿ ಗೊಂದಲಿಗರ ದೇವೇಂದ್ರಪ್ಪನ ಆಟಗಳ ಭಾಷೆಯನ್ನು ನೋಡುವಂತಹದ್ದು ಯಾವುದೇ ಒಂದು ಕಥೆ, ಕಥನ, ಗೀತೆ, ಕಾದಂಬರಿಗಳು ಉನ್ನತಮಟ್ಟ ತಲುಪಬೇಕಾದರೆ. ಅದರಲ್ಲಿರುವ ಭಾಷೆಯೇ ಮೂಲ ಕಾರಣ ಪ್ರಾದೇಶಿಕ ಭಾಷೆಯ ಹಿನ್ನಲೆಯಲ್ಲಿ ಅದು ಬೆಳವಣಿಗೆ ಪಡೆದುಕೊಳ್ಳುತ್ತದೆ ಇಂತಹ ಭಾಷೆಯು ಜನರದೇ ಆಗಿರುವುದರಿಂದ ಅವರಿಗೆ ಅರ್ಥವಾಗುವಂತಹದ್ದು ಇಲ್ಲದಿದ್ದರೆ ಪಂಡಿತರೇ ಅರ್ಥಮಾಡಿಕೊಳ್ಳಬೇಕಾಗುತ್ತದೆ, ಅದು ಜನರಿಗೆ ಜನರ ಮನಸ್ಸಿಗೆ ಮುಟ್ಟಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅದು ಜನರ ಮಿಡಿತಗಳಿಗೆ ಮತ್ತು ಗ್ರಹಿಕೆಗೆ ನಿಲುಕುವಂತಹದ್ದಾಗಿರಬೇಕು ಅಂದಾಗ ಮಾತ್ರ ಅವು ಜನರ ಮಾನಸದಲ್ಲಿ ಉಳಿಯಲು ಸಾಧ್ಯವಾಗುತ್ತವೆ. ದೇವೇಂದ್ರಪ್ಪನವರ ಆಟಗಳು ಅಚ್ಚ ದೇಸಿಯತೆಯನ್ನು ಮೈಗೂಡಿಸಿಕೊಂಡು ಬೆಳೆದಂತಹವುಗಾಳಾಗಿವೆ. ಕುಮಾರವ್ಯಾಸನು ಹೇಳಿರುವ ಹಾಗೆ, 'ಕಲಿಯದವರಿಗೆ ಕಾಮದೇನು ಕಲಿತವರಿಗೆ ಕಲ್ಪವೃಕ್ಷವಿದ್ದಂತೆ,' ಈ ದೇವೇಂದ್ರಪ್ಪನವರ ಆಟಗಳು, ಅಷ್ಟು ಸಾಮಾನ್ಯ ರೀತಿಯಲ್ಲಿ ಹಿರಿದಾದಂತಹ ಆಶಯಗಳನ್ನು ಹೊಂದಿದಂತಹ ಒಂದು ಜನಪದ ಕಲೆಗಳ ಪ್ರಕಾವೆಂದರೆ ತಪ್ಪಾಗಲಾರದು ಇವುಗಳಿಗೆ ನಿರೂಪಣೆಯ ಸಂದರ್ಭದಲ್ಲಿ ಭಾಷಣದಗತ್ತಿಲ್ಲ ಮತ್ತು ಆಟಗಳಲ್ಲಿ ಪಾತ್ರಗಳ ಕ್ರಿಯೆ–ಪ್ರಕ್ರಿಯೆಗಳ ನಿರೂಪಣೆಯೇ ವಿಧಾಯಕವಾಗಿ ಕೆಲಸ ನಿರ್ವಹಿಸುತ್ತವೆ. ಆಟದ ನಿರೂಪಣಾಭಾಗ ಪ್ರೇಕ್ಷಕರ ದೃಷ್ಠಿಯಲ್ಲಿ ಒಂದು ನಾಟಕಾಭಿನವಾಗಿಯೇ ತೋರುತ್ತದೆ. ಕಥೆಗಾರ ತನ್ನ ಕಥೆಯನ್ನು ನಿರೂಪಿಸುತ್ತಲೇ ತನ್ನ ನೋಡುಗರನ್ನು ಘಟನಾ ಸ್ಥಳಗಳಿಗೆ ಕರೆದೊಯ್ದು ಅಲ್ಲಿನ ಭೀಕರತೆಯನ್ನು ಚಿತ್ರಿಸುವುದು ಬೆರಗುಗೊಳಿಸುವ ರೀತಿಯದು ಪ್ರಮುಖವಾಗಿ ಇವರ ಆಟಗಳಲ್ಲಿ 'ನಾಂದಿ' ಹಾಡುವ ಮೂಲಕ ಕಥೆಯನ್ನು ಪ್ರಾರಂಭಿಸುತ್ತಾರೆ. ಇವರು ಸಂಭಾಷಣೆಯಲ್ಲಿ ಇಡಿ ರಾಜ್ಯದ ಪರಿಚಯ ಮಾಡುವಂತಹದ್ದು ಮತ್ತು ರಾಜನ ಗುಣಗಾನ ಮಾಡುವಂತಹದ್ದು, ಉದಾಹರಣೆಗೆ "ಶಿವಲೋಚನ" ಕಥೆಯಲ್ಲಿ "ಏನ್ರೀ ಈ ಮಧ್ಯಲೋಕದಲ್ಲಿ ಧರ್ಮಾವತಿ ಪಟ್ಟಣದಲ್ಲಿ ಧರ್ಮಸೇಕ ಮಹಾರಾಜರ; ಬುದ್ದಿವಂತ ಮಂತ್ರಿ, ರಾಜ ಒಳ್ಳೇ ಧರ್ಮಿಷ್ಟ ಇದಕ್ಕೆ ಪ್ರತಿಯಾಗಿ ಹಿಮ್ಮೇಳಗ; 'ಹೌದು' ಎನ್ನವಂತ ಒಪ್ಪಿಗೆಯನ್ನು ಸೂಚುಸುವುದು ಈ ಸನ್ನಿವೇಶ ಜನರಲ್ಲಿ ಅಥವಾ ಪ್ರೇಕ್ಷಕರಲ್ಲಿ ಇಡೀ ರಾಜ್ಯದ ಚಿತ್ರಣ ಮತ್ತು ರಾಜನ ಗುಣ ಹಾಗೂ ಮಂತ್ರಿಯ ಬುದ್ದಿವಂತಿಕೆಯನ್ನು ಚಿತ್ರಿಸುತ್ತವೆ. ಹೀಗೆ ಇವರ ಭಾಷೆಯಲ್ಲಿ ಸರಳತೆ ಇರುವುದು ಕಂಡು ಬರುತ್ತದೆ. ಇಂತಹ ಸರಳವಾದ ಭಾಷೆ ಜನರಾಡುವುದೇ ಆಗಿರುವುದರಿಂದ ಜನಪದರಿಗೆ ಬೇಗನೇ ಅರ್ಥವಾಗುತ್ತದೆ.

ಅದರಂತೆ ಆಟಗಳಲ್ಲಿ ಬರುವಂತಹ ರಾಜರನ್ನು ಕುರಿತು ಅವರ ಕಾರ್ಯವನ್ನು ವರ್ಣಿಸುವಲ್ಲಿ ಮತ್ತು ಬುದ್ದಿವಂತಿಕೆಯನ್ನು ವರ್ಣಿಸುವಲ್ಲಿ ಬಳಸುವಂತಹ ಪದಗಳು "ಓದು

ಬರಹ, ಶಾಸ್ತ್ರಪುರಾಣ ಯುದ್ದದಲ್ಲಿ ಮಹಾಬುದ್ದಿವಂತ, ಸಂಗೀತ, ಶ್ಲೋಕ ನಾನಾ ತರದ ವಿದ್ಯಾ ನಿಪುಣರು" ಎಂದು ವರ್ಣಿಸುವರು, ಅಂದರೆ ಈ ವರ್ಣಾನುಕ್ರಮವು ಶಿಷ್ಟರಲ್ಲಿ ಇರುವಂತೆ ಇಲ್ಲಿ ಜನಸಾಮಾನ್ಯರ ಮಟ್ಟದಲ್ಲಿ ಇರುವಂತಹದ್ದು ಕಂಡು ಬರುತ್ತದೆ. ಶಿಷ್ಟದಲ್ಲಾದರೆ "ರಜದಿರಾಜ ಚಂಡಮಾರ್ತಾಂಡ ಸಕಲ ವಿದ್ಯಾನಿಪುಣ ಬಹುಪರಾಕ ಬಹು ಪರಾಕ್" ಎಂದಿರುತ್ತದೆ. ಆದರೆ ಜನಪದಿಯರು ಹಾಗೆ ವರ್ಣಿಸುವುದಿಲ್ಲ ಇವರಲ್ಲಿ ಎಲ್ಲರೂ ಒಂದೇ ಕೆಲವೆಡೆ, ದೇವರಿಗೆ ಅವಾಚ್ಯ ಶಬ್ದಗಳಿಂದ ಬೈಯುವುದು ಉಂಟು ಅಂದರೆ ಜನಪದರು. ಅಷ್ಟರ ಮಟ್ಟಿಗೆ ದೇವರೊಂದಿಗೆ ಸಂಬಂಧವನ್ನು ಹೊಂದಿರುವುದು ತಿಳಿದು ಬರುತ್ತದೆ. ಕೆಲವೆಡೆ ರಾಜರಿಗೆ ತಿಳಿಸಿಹೇಳುವಷ್ಟರ ಮಟ್ಟಿಗೆ ಸಂಬಂಧವನ್ನು ಹೊಂದಿರುತ್ತಾರೆ. ಉದಾಹರಣೆಗೆ:– 'ರಾಜವೀರಪರಾಕ್ರಮ' ಆಟದಲ್ಲಿ ಪ್ರಜೆಗಳೆಲ್ಲ ಕುತ್ಕೊಂಡು ಮಹಾರಾಜಗೆ ಹೇಳ್ತಾ ಇದ್ದಾರೆ, 'ಮಹಾರಾಜ ನಿಮಗೆ ಮಕ್ಕಳಿಲ್ಲ' ಎಂದು ಹೇಳುತ್ತಾರೆ. ಅಂದರೆ, ಜನಪದ ಅಸಾಧ್ಯವಾದುದನ್ನು ಸಾಧ್ಯವಾಗಿಸಿತೋರಿಸುವಂತಹದ್ದು, ದೇವೇಂದ್ರಪ್ಪನವರ ಭಾಷೆ ಶೈಲಿಯಲ್ಲಿ ನೋಡಬಹುದು, ಯಾವುದೇ ಹಂಗಿಲ್ಲದೆ ಅವರು ನಿರರ್ಗಳವಾಗಿ, ಹಾಡುವಂತಹದ್ದು, ಕೆಟ್ಟದನ್ನು ನೇರವಾಗಿಯೇ, ಪ್ರತಿಕ್ರಿಯಿಸುವ ಮನೋಭಾವ ಜನಪದರಲ್ಲಿದೆ, ಇಂದಿನ ಸಮಾಜದ ಎಲ್ಲ ಪಾತ್ರಗಳ ಗುಣ ಸ್ವಭಾವಗಳ ವೈಶಿಷ್ಟ್ಯವನ್ನು ತೆರೆದಿಟ್ಟು ನೋಡುಗರಿಗೆ ಪರಿಚಯಿಸುವಂತಹ ಕಲೆ ದೇವೇಂದ್ರಪ್ಪನರಿಗಿದೆ, ಕಥೆಯನ್ನು ಹಿಡಿತದಲ್ಲಿರಿಸಿಕೊಳ್ಳಲು ನಿರೂಪಣೆ ಸಹಕಾರಿಯಾಗುತ್ತದೆ. ತಾವು ನಿರೂಪಿಸ ಹೊರಟ ವಸ್ತುವನ್ನು ನೇರವಾಗಿಯೇ ಹೇಳುವಂತಹದ್ದು ವೃತ್ತಿ ಪರತೆಗೆ ತಕ್ಕಂತೆ ಶಬ್ದಗಳಿಗೆ ತಡಕಾಡುವುದಿಲ್ಲ. ಗ್ರಾಮ್ಯ ಭಾಷೆಯಲ್ಲಿಯೇ ಹೇಳುವುದು ಪ್ರಸಂಗವರ್ಣನೆಯಲ್ಲಿ ಅವರ ಭಾಷಾ ಶೈಲಿ ವರ್ಣರಂಜಿತಗೊಂಡು ಭಾವುಕತೆಯನ್ನು ನೋಡುಗರಲ್ಲಿ ಉಕ್ಕಿಸುತ್ತದೆ.

ಇವರ ಆಟಗಳು ಮುಖ್ಯವಾಗಿ ಭಾಷೆಯ ಬೆನ್ನೇರಿ ನಡೆಯುವಂತ ಕ್ರಿಯೆ, ಮೂರ್ತಗೊಳ್ಳುವುದೇ ಭಾಷೆಯ ಮೂಲಕ ಆಟಗಳ ನಿರ್ವಹಣೆಗೆ ದೈನಂದಿನ ವ್ಯಾವಹಾರಿಕ ಶಬ್ದಗಳನ್ನು ಅವರು ಬಳಸಿಕೊಳ್ಳುತ್ತಾರೆ. ಉದಾಹರಣೆಗೆ:– "ಸಾಧಕ, ಸವಾಸ, ಸಾಸ್ವಿಕಟ್ಟಿ, ಸೈಲು ಸೋಸಿನೋಡು ಸಂಗಾಟ, ಸಂಸಾರಲಂಬಾಟ ಹತಾರು, ರಾಜತ್ವ, ಯಂಗ, ಯತ್ಲಾಗರ, ಮುಡದಾರ, ಮುಜರೆ, ಮುಂಡಾಸ," ಹೀಗೆ ಅನೇಕ ಶಬ್ದಗಳನ್ನು ಬಳಸುವುದು ನಮಗೆ ಕಂಡು ಬರುತ್ತದೆ. ಇಲ್ಲಿ ಭಾಷಾ ಸಾಮಾಗ್ರಿ ತನ್ನ ಈ ವ್ಯವಹಾರಿಕ ನೆಲೆಯನ್ನು ಬಿಟ್ಟು ಅಸಮಾನ್ಯ ರೀತಿಯಲ್ಲಿ ಸಂವಹನಗೊಂಡು ಆಟದ ಶ್ರೇಯಸ್ಸಿಗೆ ದುಡಿಯುತ್ತದೆ. ಭಾಷಾ ಅಶುದ್ದತೆ ಹಾಗೂ ವ್ಯಾಕಾರಣ ದೋಷಗಳನ್ನು ಇವರ ಆಟದ ಗತಿ, ಸ್ವರೂಪ, ಗೌಣವಾಗಿಸುತ್ತದೆ.

ದೇವೇಂದ್ರಪ್ಪನವರು ಗ್ರಂಥಸ್ಥವಲ್ಲದ ಮೌಖಿಕ ನಿವೇದನೆಯಲ್ಲಿ ಸುಲಭವಾಗಿ ಗ್ರಹಿಸುವಂತಹ ಸಂಕ್ಷಿಪ್ತತೆ ಇರುತ್ತದೆ. ನೆನಪಿನಲ್ಲಿ ಉಳಿಯುವಂತೆ ಮಾಡುವಷ್ಟು ಪದಪುಂಜಗಳ ಸಂಘಟನೆಗಳು ಚಿತ್ರಮಯವಾಗಿವೆ, ಮೆಚ್ಚುಗೆಗಳಿಸಬಲ್ಲ ಸ್ಪಷ್ಟತೆ ಇರುತ್ತದೆ. ತಮ್ಮ ಪ್ರದೇಶದ ಭಾಷಾ ಪರಂಪರೆಯ ವಿಶಿಷ್ಟವಿನ್ಯಾಸದ ಜಾಯಮಾನವನ್ನು ತಮ್ಮ ವಯಕ್ತಿಕ ಶೈಲಿಗೆ ಅಳವಡಿಸಿಕೊಳ್ಳುತ್ತಾರೆ. ಉದಾಹರಣೆಗೆ:–"ಚಂದ್ರಶೇಕ, ಮಹಾರಾಜ, ಹನ್ನೆರಡು ಸಾವಿರ ದಂಡು, ಎಲ್ಲಿನೂರು, ಮಲ್ಲನೂರು, ಗಂಡ್ನೂರು, ಸಂಪೂರೂ ಆರ್ಬಾರ್‌ದಂಡು, ಸಿದ್ದೇರ ದಂಡು, ಈ ಪ್ರಕಾರವಾಗಿ ಪ್ರಜೆಗಳನ್ನು ಆಳ್ತಾ ಇರೋ ಕಾಲಕ್ಕೆ–ಚಂದ್ರಸೇಕ ರಾಜಧಿರಾಜಗೆ ಭಗವಂತ ಐಶ್ವರ್ಯ ಕೊಟ್ಟು ಮರೆತಾನೆ ಆದ್ರ ಅಷ್ಟೆಲ್ಲಾ ಕೊಟ್ಟು ಏನು ಮಾಡ್ಬೇಕು? ಆ ರಾಜಗೆ ಮಕ್ಕಳ ಸಂತಾನ ಇರ್ಲಿಲ್ಲ!" ಈ ರೀತಿಯಾಗಿ, ಅವರು ಬಳಸಿಕೊಂಡು ತಮ್ಮ ಶೈಲಿಯನ್ನು ಮರೆಯುವುದು ನಮಗೆ ಕಂಡುಬರುತ್ತದೆ, ಈ ರೀತಿಯ ಕಥನ ಶೈಲಿಯಿಂದ ಆಟಕ್ಕೆ ಇಂದ್ರೀಯ ಗೋಚರಾನುಭವ ನೀಡುವಂಥ ಮೂರ್ತರೂಪ ಕೊಡುತ್ತಾರೆ. ಅದರಂತೆ ಅವರ ಪದ ವ್ಯಾಕ್ಯಗಳ ಪುನಾರ್ವರ್ತನೆ ಇಲ್ಲಿ ಕಂಡುಬರುತ್ತದೆ.

ಉದಾ:–

ರಾಜದೇವಸ್ಥಾನಕ್ಕೆ ನಡುದಾನs ಹರ ಮಹಾದೇವ
ಒಂದುಗಾವುದಾ ನಡುದಾನs ಹರಮಹಾದೇವ
ಎರಡು ಗಾವುದಾ ನಡುದಾನs ಹರ ಮಹಾದೇವ
ರಾಜದೇವರಿಗೆ ಹೋಗಿ ಕುಂತಾನೆ ಹರಮಹಾದೇವ"[೬] (ಪುಟ–೧೫ ಅದೇ)

ಈ ಪದವು ಮತ್ತೊಮ್ಮೆ ಪುನಾರಾವರ್ತನೆಯಾಗುವುದು ಕಂಡು ಬರುತ್ತದೆ. ಹಾಡಿನ ನಂತರ ಕತೆಗಾರ ಅದನ್ನು ಬಿಡಿಸಿ ಹೇಳುವಂತಹದ್ದು ಕಂಡು ಬರುತ್ತದೆ. ಅದು ಹೇಗೆಂದರೆ **ಕತೆಗಾರ** –ಎರಡು ಗಾವುದ, ಎಂಟುಹರದಾರಿ, ದೂರ ಊರು–ಉದ್ಮಾನ ಪ್ಯಾಟಿ–ಪಟ್ಣ ಎಲ್ಲಾ ಬಿಟ್ಟು ಅಡಿವ್ಯಾಗ ಒಂದು ದೇವಸ್ಥಾಲಕ್ಕೆ ಬಂದು ನಿಂತ್ಕೊಂಡ, ರಾಜ! "ಹೀಗೆ ಬಿಡಿಸಿ ಹೇಳುವಂತಹದು ಇವರ ಶೈಲಿಯಲ್ಲಿ ಕಂಡುಬರುತ್ತದೆ ಇದು ಕ್ರಿಯಾ ತೀವ್ರತೆಯನ್ನು ಟಿ.ವಿ.ಜಾಹಿರಾತಿನ ಧ್ವನಿಯ ರೀತಿಯ ಒತ್ತಿನಿಂದ ತಮ್ಮ ಸಾಂದರ್ಭಿಕ ಅರ್ಥ ವ್ಯಾತ್ಯಾಸವನ್ನು ಹೊಳೆಯಿಸುತ್ತದೆ. ಇಂತಹ ಪುನರಾವರ್ತನೆಗಳು ಎಲ್ಲಾ ಆಟಗಳಲ್ಲಿ ಬರುವಂತಹವುಗಳೇ ಆಗಿವೆ. ಹೀಗೆ ಪುನರ್ ಉಚ್ಚರಿಸುವುದು ಲೋಕ ರೂಢಿಯ ಭಾಷೆಯ ವಿಶೇಷ ಲಕ್ಷಣವೆಂದು ಹೇಳಬಹುದು.

ಇವರು ಮುಖ್ಯವಾಗಿ ಈ ಮೊದಲೇ ಹೇಳಿದಂತೆ ಗ್ರಾಂಥಿಕ ಭಾಷೆಗಿಂತ ಆಡು ಮಾತುಗಳಲ್ಲಿ ಅನ್ಯ ಭಾಷಾ ಸಂಸರ್ಗದಿಂದ ಎಷ್ಟೇಲ್ಲ ಶಬ್ದಗಳು ಸೇರಿಕೊಂಡಿವೆ ಎಂಬುದು

ನಮ್ಮ ಕಣ್ಣಿಗೆ ಕಾಣುವ ಸಂಗತಿ ದೇವೇಂದ್ರಪ್ಪನವರ ಆಟಗಳು ಇದಕ್ಕೇನು ಹೊರತಲ್ಲ. ಉದಾ:- "ಬೋರ್ಡ್, ಟೈಮು, ಪ್ಲ್ಯಾನು, ಮೇಷ್ಟ್ರು, ಟಾಂಟಾಂ, ಫೋಟೋ, ಹೈಕ್ಲಾಸ್, ಫಿಯುನೋದಂಥ ಇಂಗ್ಲೀಷ್ ಶಬ್ದಗಳು ಒಂದು ಉದಾಹರಣೆ ಅದರಂತೆ ರೋಜ್ಗಾರ್ ಇನ್ನುಮುಂತಾದ ಪದಗಳ ಬಳಕೆ ಇವೆ. ಶಿಲಾವತಿ ಆಟದಲ್ಲಿ ಉರ್ದು ಮಾತುಗಳ ಬಳಕೆ ಆಗಿರುವುದು ಕಂಡುಬರುತ್ತದೆ. ಈ ಹಿನ್ನಲೆಯಲ್ಲಿ ನೋಡುವುದಾದರೆ ಮುದೇನೂರು ಸಂಗಣ್ಣನವರು ಹೇಳಿದಂತಹ ಮಾತು ತುಂಬಾ ಅರ್ಥಪೂರ್ಣವಾಗಿದೆ, "ವರ್ಣನಾ ವಾಕ್ಯಗಳನ್ನು ಧ್ವನಿಪೂರ್ಣವಾಗಿ ದ್ರುತಗತಿಯಲ್ಲಿ ಕತೆಗಾರ ಹೇಳಿದಾಗ ಅವು ಕೊಡುವ ಅರ್ಥಗೌರವ ಅದ್ಭುತ ಪರಿಣಾಮ ಮಾಡುವಂಥದು ಗೊಂದಲಿಗರು ಅವರವೇ ಆದ ಶಬ್ದ ರೂಪಗಳ ಬಳಕೆ ಕಥನ ನಿರೂಪಣಾ ವೈಶಿಷ್ಟ್ಯಕ್ಕೆ ಕಾರಣವಾಗುತ್ತದೆ ಎಂದು ಹೇಳುವು ಮಾತು ಅರ್ಥಪೂರ್ಣವಾಗಿದೆ.

ವೀರರನ್ನು ವರ್ಣಿಸುವ ಸಂದರ್ಭದಲ್ಲಿ ದೇವೇಂದ್ರಪ್ಪನವರು ಬಳಸುವ ಪದಗಳು ಅವು ಜನಸಾಮಾನ್ಯರಿಗೆ ಚಿರಂಪರಿಚಿತವಾದಂತಹವುಗಳು ಅವುಗಳನ್ನೇ ಬಳಸುವುದು ಎಲ್ಲಾ ಆಟಗಳಲ್ಲಿ ಕಂಡುಬರುತ್ತದೆ. ಮುಖ್ಯವಾಗಿ, 'ಬಾಳಬಿಕ್ಷುಕ' ಮತ್ತು 'ರಾಜವೀರಪರಾಕ್ರಮ'ದಲ್ಲಿ ಕಂಡುಬರುವಂತಹದ್ದು ಇವರನ್ನು ವರ್ಣಿಸುವುದು "ವೀರಪರಾಕ್ರಮ ಹುಡುಗ! ಉಕ್ಕಿನ ಲೋಡು ತಿರುವಬೇಕು ಉಕ್ಕಿನ ಗುಂಡು ತಿರುವಬೇಕು, ವಡೇಕೈ, ಬಡೇಕೈ, ಉಷ್ಣೋಕೈ, ತಪ್ಪೋಕೈ, ಕತ್ತಿಕಠಾರಿ ಕೈ, ಬಿಲ್ಲುಬಾಣದಕೈ, ಕುಸ್ತಿ, ತಾಲೀಮು, ಲೇಜೀಮು, ಪಟಾದಾಂಡಕಟಿಗಿ, ಹಿಂಗಾಣಿ, ಮುಂಗಾಣಿ ಸಮ್‌ಶಕ್ತಿ ಮಾಡ್ತಾನ ಪ್ರಯಕ್ಕೆ ಬರೋ ಮಟ," ಇವೆಲ್ಲವನ್ನು ಕಲಿತು ವೀರನಾಗುವಂತಹದ್ದು, ಅದರಂತೆ ಇಂತಹ ವೀರರು ತಮ್ಮ ಪೌರುಷವನ್ನು ಹೇಳಿಕೊಳ್ಳುವ ರೀತಿಯನ್ನು ವರ್ಣಿಸುವ ಶೈಲಿ ಅತ್ಯಂತ ಮಹತ್ವದ್ದಾಗಿದೆ, ಉದಾಹರಣೆಗೆ, 'ಬಾಳಬಿಕ್ಷುಕ' ಆಟದಲ್ಲಿ "ಕಾಸಿ ತೊಟ್ಟವರ ಗಂಡ, ಮೀಸಿ ತಿದ್ದುವರ ಮಿಂಡ, ಹರಿವ ಹಾವಿನ ಗಂಡ, ಉರಿವಕಿಚ್ಚಿನ ಗಂಡ ವಿಧಿಮಾಯ ಗಂಡ-ಆಂದ್ರೆ ನಾನೇ ಬಾಳ ಬಿಕ್ಷುಕ ಅಂತೇಳಿ ತನಗೆ ತಾನೆ ಭಟ್ಟಂಗಿ ಸಾರ್ಕೊಂಡ" (ಪುಟ ೧೫೩ ಅದೇ)ಈ ರೀತಿ ವರ್ಣನೆಗಳು ಕಂಡುಬರುತ್ತವೆ. "ಇದನ್ನು ಕೇಳಿದ ವಿಧಿಮಾಯೆ ದೇವಲೋಕದಿಂದ ಕೆಳಿಬಿಟ್ಲು ಸರ್‌ನ ಗರಡಿ ಮನಿಯಾಗ ಇಳಿದೇ ಬಿಟ್ಲು ವಿಧಿಮಾಯಿ" ಅಂದರೆ ಯಾವುದೇ ವಿದ್ಯಕಲಿತರೂ ಅಹಂಕರ ಒಳ್ಳೆಯದಲ್ಲವೆಂಬ ಒಂದು ಜನಪದರ ನಂಬಿಕೆ ಆಗಿರುವಂತಹದು ಅವರು ಎಲ್ಲಾ ಅಂಶಗಳನ್ನು ಸಮನಾಗಿಯೇ ಸ್ವೀಕರಿಸುವಂತಹದ್ದು ಕಂಡು ಬರುತ್ತದೆ, ಹೀಗೆ ವೀರರನ್ನು ವರ್ಣಿಸುವಲ್ಲಿ ಮೈನವಿರೇಳುವಂತಹ ಭಾವ ಪರವಶ ಮಾಡುವಂತಹ ಸಂಭಾಷಣೆಯನ್ನು ಇವರ ಆಟಗಳಲ್ಲಿ ಕಾಣಬಹುದಾಗಿದೆ.

ಇನ್ನು ಸ್ತ್ರೀಯರನ್ನು ಕುರಿತು ವರ್ಣಿಸುವ ರೀತಿ ಅಮೋಘವಾದುದ್ದಾಗಿದೆ. ಈ ವರ್ಣನೆಯಲ್ಲಿ ಐತಿಹಾಸಿಕ ಮತ್ತು ಪೌರಾಣಿಕವಾಗಿ ಗ್ರಾಂಥಿಕ ರೂಪದಲ್ಲಿ ಬಳಕೆಯಾಗುವಂತಹ ಶಬ್ದಗಳನ್ನು ಬಳಸಿದರೂ ಸಹ ಇಂತಹ ಶಬ್ದಗಳನ್ನು ಆಟಗಳ ಉನ್ನತಿಯನ್ನು ಕಾಪಾಡುವ ಸಲುವಾಗಿ ಬಳಸಿರುವುದು ಕಂಡುಬರುತ್ತದೆ, ಜನಪದಿಯರಿಗೆ ಅರ್ಥವಾಗುವಂತಹ ರೀತಿಯಲ್ಲೆ ಹೊಗಳಿಕೆಗಳಿವೆ ವರ್ಣನೆಗಳಿವೆ ಹೆಣ್ಣನ್ನು ಮೊದಲಬಾ ನೋಡಿದ ಕೂಡಲೇ ಗಂಡಿನ ಮನಸ್ಸಿನ ಭಾವನೆಗಳನ್ನು ತೆರೆದಿಡುವಂತಹದ್ದು, ದೇವೇಂದ್ರಪ್ಪನವರಲ್ಲಿ ಕರಗತವಾಗಿದೆ ಎಂದೇ ಹೇಳಬಹುದಾಗಿದೆ ಉದಾ:–"ದೇವಲೋಕದ ಕನ್ಯೆಯೋ, ಅಪ್ಸರೆಯೋ, ತ್ರಿಲೋತ್ತಮೆಯೋ, ಊರ್ವಶಿಯೋ, ಮೇನಕೆಯೋ, ರಂಭೆಯೋ ರತಿಯೋ, ಸರಸ್ವತಿಯೋ" ಈ ರೀತಿಯ ಭಾವಪರವಶತೆಯನ್ನು ಜನರಲ್ಲಿ ತುಂಬುವಂತಹದ್ದು ಈ ಚಿತ್ರಣವನ್ನು ನೋಡುಗರ ಮೇಲೆ ಅಚ್ಚೊತ್ತುವಂತೆ ಮಾಡುವಂತಹ ತಂತ್ರ ದೇವೇಂದ್ರಪ್ಪನವರಲ್ಲಿ ಕರಗತವಾಗಿದೆ ಎಂದೇ ಹೇಳಬೇಕು ಅದರಂತೆ 'ಬಾಳಬಿಕ್ಷುಕ' ಆಟದಲ್ಲಿ "ಆಹಾ ಏನ್ ಹೆಣ್ಣು, ಏನ್ ಪ್ರಕಾಶ, ಏನು ರೂಪ ಲಾವಣ್ಯ ಇದದು ಕಣ್ಣಿಗೆ ಮೂರ್ಚೆಗವಿತು. ಅಂಥಾ ಹೆಣ್ಣಿಗೆ ನಾನು ಹೆಂಗಬಿಡ್ಲಿ, ಅನ್ನುವಂತಹದ್ದು ಅಂದರೆ ಮನುಷ್ಯನ ಸೂಪ್ತ ಭಾವನೆಗಳನ್ನು ತಮ್ಮ ಈ ಮಾತುಗಳಿಂದ ತೆರೆದಿಡುವಂತಹ ಲೌಕಿಕ ದೃಷ್ಠಿ ಇವರದು "ಮುಖನೋಡಿದ್ರ ನೀರಡಿಕೆ ಹೋತು, ಸೂರ್ಯಚಂದ್ರಮನ ಪ್ರಕಾಶ," "ಕಣ್ಣು ಕವಳೀ ಹಣ್ಣು, ಮೂಗು ಸಂಪಿಗೀ ತೆನಿ, ಹಲ್ಲು ದಾಳಿಂಬ್ರಿ ಹಣ್ಣು, ಹುಬ್ಬು ಕಾಮನಬಿಲ್ಲು" ಈ ರೀತಿಯ ವರ್ಣನೆಯು ಪ್ರಕೃತಿಗೆ ಸ್ತ್ರೀಯನ್ನು ಹೋಲಿಸಿ ನೋಡುವಂತಹ ದೃಷ್ಠಿಕೋನದ್ದಾಗಿದೆ. ಹೀಗೆ ಸ್ತ್ರೀಯರನ್ನು ಕುರಿತಾದ ಮಾತುಗಳು ಆಟಗಳಲ್ಲಿ ಕಂಡುಬರುತ್ತವೆ. ಈ ರೀತಿಯ ವರ್ಣನೆಗಳನ್ನು ನೋಡಿದರೆ ಇವರ ಭಾಷೆಯ ಶೈಲಿ ಉನ್ನತವಾಗಿರದಿದ್ದರೂ. ಸಾಮಾನ್ಯ ಜನರಿಗೆ ಅರ್ಥವಾಗುವಂತಹದ್ದು ಮತ್ತು ಈ ವರ್ಣನೆಯಲ್ಲಿ ಯಾವ ಕವಿಗಳಿಗೇನು ಕಡಿಮೆಯಲ್ಲ ಈ ದೇವೇಂದ್ರಪ್ಪನವರು ಅಂಥ ಅಗಾದವಾದ ಶಕ್ತಿಯನ್ನು ಮೈಗೂಡಿಸಿಕೊಂಡಿದ್ದಾರೆ.

ಅದರಂತೆ ದೈತ್ಯರನ್ನು ವರ್ಣಿಸುವಲ್ಲಿ ಅವರ ಕಲ್ಪನಾ ಶಕ್ತಿ ಅಗಾದವಾದುದು. ರಾಕ್ಷಸರ ಸ್ವರೂಪ ಹೇಗಿದೆ ಎಂದು ತಿಳಿಯಬೇಕಾದರೆ, ಜನಪದರು ಕಂಡುಕೊಂಡಂತಹ ದೊಡ್ಡದಾದ ವಸ್ತುಗಳಿಗೆ ಹೋಲಿಕೆ ಮಾಡಿಕೊಂಡು ಅವುಗಳ ದೇಹ ರಚನೆಯನ್ನು ವಿವರಿಸುವಂತಹದ್ದು ಕಂಡುಬರುತ್ತದೆ. ಜನಪದರು ತಮ್ಮ ಅಕ್ಕ ಪಕ್ಕದ ವಸ್ತುಗಳನ್ನು ನೋಡಿಯೇ ಅದು ಎಂಥಹ ಸ್ವರೂಪದ್ದಾಗಿರುತ್ತದೆ ಎಂದು ಅರ್ಥಮಾಡಿಕೊಳ್ಳುವಂತಹದ್ದು ಮನಗಂಡು ಅವರು ಚಿತ್ರಿಸಿರುವುದು ಬಹಳ ಸಮಂಜಸವೆನಿಸುತ್ತದೆ. ಉದಾಹರಣೆಗೆ "ಕಣ್ಣು ಬಂಡಿಗಾಲಿ, ಮೂಗುಗುಂಬೀಗೆರಸಿ, ಹಲ್ಲು ಕುಂಟಿ ಕೂರ್ಗಿ ದಿಂಡು, ಅಗಸಿಯಂತ ಬಾಯಿ"

ಇವು ತಮ್ಮ ಗ್ರಹಿಕೆಗೆ ಬಂದಿರುವುದರಿಂದ ಅತೀ ಬೇಗನೇ ದೈತ್ಯರನ್ನು ಅವರ ಚಹರೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಸತಿಪತಿಗಳ ಸಮಾಗಮವನ್ನು ವರ್ಣಿಸುವಾಗ ಈ ಸೃಷ್ಠಿಯಲ್ಲಿರುವಂತಹ ಜೀವರಾಶಿಗಳು ಒಂದಕ್ಕೊಂದು ಸ್ವಾವಲಂಬಿಗಳಾಗಿರದೆ, ಒಂದಕ್ಕೊಂದು ಪರಾವಲಂಬಿಗಳಾಗಿವೆ, ಅವುಗಳಲ್ಲಿ ಮನುಷ್ಯನು ಒಬ್ಬ. ತಮ್ಮ ದಾಂಪತ್ಯ ಜೀವನವನ್ನು ಹೇಗೆ ನಡೆಸಬೇಕು ಎಂಬುದು ಆ ನೀತಿಯನ್ನು ಅವರು ಈ ಸೃಷ್ಠಿಯ ನಿಯಮದಲ್ಲಿ ಇವೆಲ್ಲ ಅನಿವಾರ್ಯ ಎಂಬಂತೆ ಒಂದಕ್ಕೊಂದು ಸಂಬಂಧ ಕಲ್ಪಿಸಿರುವುದು ಬಹಳ ಮಹತ್ತರವಾದುದು, ಈ ಹಿನ್ನಲೆಯಲ್ಲಿ ದೇವೇಂದ್ರಪ್ಪನವರು ಜನಪದರಲ್ಲಿ ಒಂದು ಮಹತ್ವದ ಸಂದೇಶವನ್ನು ನೀಡುತ್ತಾರೆ. ಈ ಪ್ರಪಂಚದಲ್ಲಿ ಒಂದಕ್ಕೊಂದು ಸಂಬಂಧವಿದ್ದದ್ದೇ ಎಂದು ನಿರೂಪಿಸುತ್ತಾರೆ. ಅದು ಹೇಗೆಂದರೆ" ಹಕ್ಕಿ–ಪಕ್ಷಿ ಜೋಡು, ಭೂಮಿ–ಕೈಲಾಸ ಜೋಡು, ಮರ–ಗಿಡ ಜೋಡು, ತಾಯಿ–ಮಗ ಜೋಡು, ಸತಿ–ಪತಿ ಜೋಡು, ಕೆಲವೆಡೆ ಜೋಡು ನುಡಿಗಳನ್ನು ಬಳಸುವ ಮೂಲಕ ತಮ್ಮ ಭಾಷೆಯ ಸಂಭಾಷಣೆಯಲ್ಲಿ ಹಿಡಿತವನ್ನು ಸಾಧಿಸಿದ್ದಾರೆಂದು ಹೇಳಬಹುದಾಗಿದೆ.

ತತ್ವಪದಗಳ ಬಳಕೆ

ದೇವೇಂದ್ರಪ್ಪನವರು ತಮ್ಮ ಆಟಗಳಲ್ಲಿ ಕಥಾವಸ್ತುವಲ್ಲದೆ, ಕಥಾವಸ್ತು ಆಧರಿಸಿ ಲಾವಣಿ ಮತ್ತು ತತ್ವಪದಗಳನ್ನು ಹಾಡುವ ಮೂಲಕ ಜನರಲ್ಲಿ ಅಂದ ಶ್ರದ್ಧೆಯನ್ನು ತೊಡೆದು ಹಾಕಲು ಪ್ರಯತ್ನಿಸಿದ್ದಾರೆ. ಇದಕ್ಕೆ ಮುಖ್ಯ ಉದಾಹರಣೆ ಎಂದರೆ ಸತ್ಯ ಶಿಲಾವತಿ ಆಟದಲ್ಲಿ ಬರುವಂತ ಈ ಪದವನ್ನು ನಾವು ನೋಡಬಹುದಾಗಿದೆ.

"ಯಾರಿಗೂ ಯಾರಿಲ್ಲ ಯರವೀನ ಸಂಸಾರ
ನೀರ ಮೇಲಿನ ಗುಳ್ಳಿ ನಿಜವಿಲ್ಲ ಹರಿಯೇ !!ಪ!!
ಬಾಯಾರೀತು ಎಂದು ಬಾವಿ ನೀರಿಗೆ ಹೋದೆ
ಬಾವಿಯ ಜಲಬತ್ತಿ ಬರಿದಾಯ್ತು ಹರಿಯೇ!
ಯಾರಿಗೂ ಯಾರಿಲ್ಲ ಯರವಿನ ಸಂಸಾರ!
ನೀರ ಮೇಲಿನ ಗುಳ್ಳಿ ನಿಜವಿಲ್ಲ ಹರಿಯೇ!!
ಬಿಸಿಲ ಗಾಳಿಗೆ ಬೆದರಿ ಮರದ ನೆರಳಿಗೆ ಬಂದೆ!
ಮರಬಾಗಿ ಶಿರದ ಮೇಲೆ ಎರಗಿತು ಹರಿಯೇ
ಯಾರಿಗೂ ಯಾರಿಲ್ಲ ಯರವೀನ ಸಂಸಾರ
ನೀರ ಮೇಲಿನ ಗುಳ್ಳಿ ನಿಜವಿಲ್ಲ ಹರಿಯೆ!!

ಅಡವಿಯೊಳ ಮನೆ ಮಾಡಿ ಗಿಡಕೆ ತೊಟ್ಟಿಲ ಕಟ್ಟಿ!
ತೊಟ್ಟಿಲದೊಳಗಿನ ಶಿಶುಮಾಯ ಮಾಡಿದೆಯ ಹರಿಯೇ!!
ತಂದೆ ಶ್ರೀಪುರಂದರ ವಿಠಲಾ ನಾರಾಯಣ!
ತಂದೆ ಶ್ರೀಪುರಂದರ ವಿಠಲಾ ನಾರಾಯಣ!!
ನಾ ಸಾಯೋ ಹೊತ್ತಿಗೆ ನೀ ಕಾಯೋ ಶಂಕರಾ ಶಂಕರಾ...[೭]
(ಅದೇ ಪುಟ ಸಂ-೧೯)

ಗಾದೆಗಳ ಬಳಕೆ

ದೇವೇಂದ್ರಪ್ಪನವರು ತಮ್ಮ ಆಟಗಳಲ್ಲಿ ಗಾದೆಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ. "ವೇದಸುಳ್ಳಾದರು ಗಾದೆಸುಳ್ಳಾಗದು" ಎಂಬ ಮಾತಿನ ಹಿನ್ನಲೆಯಲ್ಲಿ ಅವುಗಳನ್ನು ಸಮಯೋಚಿತವಾಗಿ ಬಳಸಿರುವುದು ಅತ್ಯಂತ ಗಮನಾರ್ಹವಾಗಿದೆ. ಈ ಗಾದೆಗಳ ಬಳಕೆ ಭಾಷೆಯ ಶೈಲಿಗೆ, ಒಂದು ರೀತಿಯ ಮೆರಗನ್ನು ತಂದು ಕೊಡುತ್ತದೆ ಎಂದು ಹೇಳಬಹುದಾಗಿದೆ, ಅದರಂತೆ ಎಲ್ಲಾ ಆಟಗಳಲ್ಲಿ ಸಂದರ್ಭನುಸಾರ, ಗಾದೆಗಳ ಬಳಕೆ ಇರುವುದು ಕಂಡು ಬರುತ್ತವೆ. ಉದಾಹರಣೆಗೆ "ಬಾಳಬಿಕ್ಷುಕನ ಆಟದಲ್ಲೂ ಮಂತ್ರಿಯು ಚಿಕ್ಕಮಗುವಿಗೆ ವದುವನ್ನು ಹುಡುಕಲು ಹೋಗುವಂತಹದ್ದು ಆಗ ಈ ಮಾತು ಬರುತ್ತದೆ. ಇಂದಿನ ದಿನಮಾನಗಳಲ್ಲಿಯೂ ಸಹ ಈ ಪದ್ದತಿ ಇಲ್ಲದಿಲ್ಲ. ಆದ್ದರಿಂದ ಗಾದೆಗಳು ಇಂದು ಸಹ ಪ್ರಸ್ತುತವಾಗಿಯೇ ನಿಲ್ಲುತ್ತವೆ. "ಕುದ್ರಿನೋಡಿ ಬೆಲೆ ಮಾಡು, ಆಳು ನೋಡಿ ಅನ್ನ ನೀಡು, ವರನೋಡಿ ಕನ್ಯಾ ಕೋಡು" ಇಂತಹ ಗಾದೆಗಳು ಒಂದು ಸಂಬಂಧವನ್ನು ಬಿಗಿಗೊಳಿಸುವುಲ್ಲಿ ಮಹತ್ವದ ಅಂಶವನ್ನು ಹೊಂದಿದವುಗಳಾಗಿವೆ. ಇವು ಸರ್ವಕಾಲಿಕ ಸತ್ಯಗಳಾಗಿ ನಿಲ್ಲುತ್ತವೆ ಎಂದು ಹೇಳಬಹುದಾಗಿದೆ.

ಅದರಂತೆ 'ರಾಜ ವೀರ ಪರಾಕ್ರಮ' ಆಟದಲ್ಲಿ ರಾಜನಿಗೆ ಮಕ್ಕಳಿಲ್ಲದ ಸಂದರ್ಭ ಆತನ ರಾಣಿ ಬಂಜೆಯಗಿರುವಂತಹ ಸಂದರ್ಭದಲ್ಲಿ ಜನರು ಬಳಸುವ ಈ ಗಾದೆ ಅತ್ಯಂತ ಮಹತ್ವದ್ದಾಗಿದೆ, "ಮಕ್ಕಳಿಲ್ಲದ ಮನೆ ಅಲ್ಲ, ಹೊಲ ಇಲ್ಲದ ಒಕ್ಕಲುತನ ಅಲ್ಲ" ಅದರಂತೆ ಮುಂದುವರೆದು "ಬೆಳಗಾಗಲಿಕ್ಕೆ ಬಂಜಿ ಮುಖಾ ನೋಡಬಾರ್ದು ಬಂಜಿ ರಾಜಂದು ಚಾಕರಿ ಮಾಡ್ಬಾರ್ದು" ಅನ್ನವಂತಹ ಗಾದೆಗಳು ಪ್ರಮುಖವಾಗಿ ಆ ಕತೆಯಲ್ಲಿನ ಹಂದರವನ್ನು ಎತ್ತಿ ತೋರಿಸುವಂತಹವುಗಳಾಗಿವೆ. ಈ ಮೂಲಕ ರಾಜನಿಗೆ ಸಂದೇಶವನ್ನು ನೀಡುವಂತಹದ್ದು ಕಂಡುಬರುತ್ತದೆ. 'ಬಾಳಬಿಕ್ಷುಕ' ಆಟದಲ್ಲಿ ಬರುವಂತಹ ಇನ್ನೊಂದ ಗಾದೆ "ಮಾತು ಕೊಟ್ರ ಹೋತು; ಮುತ್ತು ಒಡೆದ್ರ ಹೋತು" ಎಂಬ ಮಾತು ಪದ್ಮಾವತಿಯನ್ನು ಮೂಲದಲ್ಲಿ ನಿಶ್ಚಯ ಮಾಡುವ ಸಂದರ್ಭದಲ್ಲಿ ಮತ್ತು ಕೊನೆಯವರೆಗೆ, ಮದುವೆ ಮಾಡುವ

ಸಂದರ್ಭದವರೆಗೆ ಕೆಲವೆಡೆ ಬಳಸುವುದು ಕಂಡುಬರುತ್ತದೆ ಮತ್ತು ಇದೇ ಆಟದಲ್ಲಿ "ಕೊಟ್ಟ ಹೆಣ್ಣುಕುಲಕ್ಕೆ ಹೊರ್ತು" ಎನ್ನುವಂತಹ ಗಾದೆಯನ್ನು ಅವರು ಸಂದರ್ಭಕ್ಕೆ ತಕ್ಕಂತೆ ಬಳಸಿರುವುದು ಕಂಡುಬರುತ್ತದೆ.

'ಮಹಾಸತಿ ಶಿವಲೋಚನಾ' ಆಟದಲ್ಲಿ ಬರುವಂತಹ ಗಾದೆ "ಸೂಳಿದ್ರೂ ಸೂಳಿ ತಾಯಿ ಇರಬಾರ್ದು" ಎಂಬುದು ಈ ಆಟದಲ್ಲಿ ರಂಬಾವತಿ ಎಂಬ ಒಬ್ಬಳು ಸೂಳೆ ಇರತ್ತಾಳೆ ಆಕೆ ನೀಲಕುಮಾರನನ್ನು ತನ್ನ ರೂಪಲಾವಣ್ಯದಿಂದ ತನ್ನಪರವಶ ಮಾಡಿಕೊಳ್ಳುತ್ತಾಳೆ ಅದರಂತೆ ಅವಳ ತಾಯಿ ಅವನನ್ನು ಸರ್ವನಾಶಮಾಡಬೇಕೆಂಬ ಅವನ ಆಸ್ತಿಯನ್ನು ತನ್ನದಾಗಿಸಬೇಕೆಂಬ ಹಂಬಲದವಳಾಗಿರುತ್ತಾಳೆ ಆದ್ದರಿಂದಲೇ ಜನಪದರು ಈ ಮೇಲಿನ ಗಾದೆಯನ್ನು ಬಳಸುತ್ತಿದ್ದರೆಂದು ನನಗನ್ನಿಸುತ್ತದೆ. ಒಂದು ನಿಶ್ಚಿತ ಚೌಕಟ್ಟಿನಲ್ಲೇ ವರ್ತಿಸುವ ನಿಶ್ಚಿತ ಪಾತ್ರಗಳು ಇಂಥ. ಹೃದ್ಗತ ವ್ಯಕ್ತಿ ಚಿತ್ರಣಗಳು ಎಲ್ಲ ಆಟಗಳಲ್ಲೂ ಮಿಂಚುತ್ತವೆ.

ಹೀಗೆ ಗೊಂದಲಿಗರ ಆಟಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಪಾತ್ರಗಳು ಸಾಮಾಜಿಕ ಸಂಬಂಧವನ್ನು ಹೊಂದಿದವುಗಳಾಗಿವೆ. ದೇವತಾ ಪಾತ್ರಗಳು, ಮಾನವ ಪಾತ್ರಗಳು ಇದರಲ್ಲಿ ಪುರುಷ ಮತ್ತು ಸ್ತ್ರೀ ವರ್ಗ ಅವರವರ ಅಂತಸ್ತು ಮತ್ತಿತರ ಅರ್ಹತೆಗಳಿಂದ ಗೊಂದಲಿಗರ ಆಟದ ಭಾಷೆ ಆಯಾಪಾತ್ರಗಳಲ್ಲಿ ವ್ಯಕ್ತಗೊಳ್ಳುವಾಗ ಒಂದು ಸ್ತರದಲ್ಲಿ ಶಿಷ್ಟವೆನಿಸಿದರೂ ಜನಪದವಾಗಿಯೇ ತೋರುತ್ತದೆ. ಈ ಆಟಗಳಲ್ಲಿ ಭಾಷೆಯು ಯಾವುದೇ ಬಿಗಿಬಂದನವನ್ನು ಹೊಂದದೆ ಸರಳವಾಗಿ ಅವರಾಡುವ ಭಾಷೆಯಲ್ಲಿಯೇ ಸಂಬಾಷಣೆ ನಡೆಯುವಂತಹದ್ದು ಕಂಡುಬರುತ್ತದೆ.

ಇಲ್ಲಿ ದೇವತೆಗಳು ರಾಜಮಹಾರಾಜರು ಮತ್ತು ತುರಂಗಿಬಾವಗಳು ಮಾತನಾಡುವಲ್ಲಿ ಮತ್ತು ಲೌಕಿಕ ಪಾತ್ರಗಳು ಸಹ ನಿತ್ಯವ್ಯಹಾರಕ್ಕೆ ಹತ್ತಿರವಾದ ಒಂದು ರೀತಿಯ ಅನೌಪಚಾರಿಕ ಶೈಲಿಯನ್ನು ಅನುಸರಿಸುವಂತಹದ್ದು ನಮಗೆ ಕಂಡು ಬರುತ್ತವೆ.

ಡಪ್ಪಿನಾಟದ ಪೌರಾಣಿಕ, ಐತಿಹಾಸಿಕ, ಪಾತ್ರಗಳ ಜನ ಸಾಮಾನ್ಯರ ಪ್ರತಿನಿಧಿಗಳಾಗಿವೆ. ರಾಜ, ಮಂತ್ರಿ, ರಾಣಿ, ಯಾರೇ ಇರಲಿ ಅವರ ಮಾತು ಸ್ವಭಾವ ನಡವಳಿಕೆ ಸಾಮಾನ್ಯರಂತೆಯೇ ಆಯಾ ಪಾತ್ರಗಳಿಗೆ ಇರಬೇಕಾದ ನಯ ನಾಜೂಕತೆ ಗಾಂಭಿರ್ಯ ತಿಳುವಳಿಕೆಯನ್ನು ನಾವು ಕಾಣಲಾಗದು ಆ ಪಾತ್ರದ ಹೊರ ಮೈ ಯಾವುದಿದ್ದರೂ ಅಂತರಂಗ ಮಾತ್ರ ಅಪ್ಪಟ ಜಾನಪದ. ಜನಸಾಮಾನ್ಯರ ಪ್ರೀತಿ, ಪ್ರೇಮ, ರೋಷ, ತಾಪ, ಆಸೆ ನಿರಾಸೆಗಳಲ್ಲಿ ಇಂಥ ಪಾತ್ರಗಳಲ್ಲಿ ಎದ್ದು ಕಾಣುತ್ತವೆ. ಇನ್ನು ಸಾಮಾಜಿಕ ಪಾತ್ರಗಳಂತೂ ಸರಿಯೇ ಸರಿ, ಹೀಗೆ ಭಾಷೆಯನ್ನು ಅಳವಡಿಸಿಕೊಂಡು ಬೆಳೆದಂತಹವುಗಳು ಜನರ ಮನಸ್ಸಿಗೆ ಹತ್ತಿರವಾದಂತಹ ಆಟಗಳೆಂದು ಈ ದೇವೇಂದ್ರಪ್ಪನ ಆಟಗಳನ್ನು ನಾವು ಕರೆಯಬಹುದಾಗಿದೆ.

"ಕಥೆಗಳ ಸ್ವರೂಪ"

ಈ ದೇವೇಂದ್ರಪ್ಪನವರ ಆಟಗಳು ಸಾಮಾಜಿಕ ಐತಿಹಾಸಿಕ, ಕಾಲ್ಪನಿಕ ಪೌರಾಣಿಕ ಮತ್ತು ಭಕ್ತಿಯ ಆಟಗಳಲ್ಲಿ ಸಾಮಾಜಿಕ ಮೌಲ್ಯಗಳಿದ್ದು ಅವು ಸಹಜವಾಗಿಯೇ ಜನರ ಮನಸ್ಸನ್ನು ಪರಿವರ್ತಿಸುತ್ತವೆ. ಸಾಮಾಜಿಕ ಮೌಲ್ಯಗಳು ಮನುಷ್ಯನ ಮೂಲ ಪ್ರವೃತ್ತಿಯ ದೋಷಗಳನ್ನು ತಿದ್ದುವ ಹಾಗೂ ನಿಯಂತ್ರಿಸುವ ಸಾಧನಗಳಾಗಿದ್ದು ಇಂಥ ಮೌಲ್ಯಗಳನ್ನು ಈ ಆಟಗಳು ಸ್ವೀಕರಿಸಿ ಜನರನ್ನು ಜಾಗೃತ ಮಾಡಿವೆ. ಇದಕ್ಕೆ ದೇವೇಂದ್ರಪ್ಪನವರ ಶ್ರಮ ಮಹತ್ವದ್ದಾಗಿದೆ.

ಸಮಾಜ ಒಪ್ಪಿಕೊಂಡ ಸರಿ–ತಪ್ಪುಗಳ ಕಲ್ಪನೆ ಮಾನವನಿಗೆ ಇದ್ದರೂ ತನ್ನ ಮೂಲ ಪ್ರವೃತ್ತಿಗೆ ತಲೆಬಾಗಿ ಒಂದೊಂದು ಸಲ ತಪ್ಪಾಗಿ ನಡೆದುಕೊಳ್ಳುತ್ತಾನೆ. ಆಗ ಸಾಮಾಜಿಕ ಮೌಲ್ಯಗಳು ಅವನನ್ನು ವಿರೋಧಿಸುತ್ತವೆ. ದೇವಾನುದೇವತೆಗಳನ್ನು ಮತ್ತೆ ಮತ್ತೆ ಹಾಡಿ ಹೊಗಳುವ ಪೌರಾಣಿಕ ಕತೆಗಳಿಗೆ ಜನರು ಬೇಸರಪಟ್ಟಾಗ ಉತ್ತರ ಕರ್ನಾಟಕದ ಜನಪದ ರಂಗಭೂಮಿ ಬದಲಾವಣೆ ಹೊಂದಿ ಮತ್ತೆ ಸಣ್ಣಾಟಗಳು ವ್ಯವಸ್ಥಿತವಾಗಿ ಪುನರುಜ್ಜೀವನಗೊಂಡವು ಸ್ತ್ರೀಯರು ಭಾಗವಹಿಸಿರುವುದು ಇಲ್ಲಿಯ ವಿಶೇಷ.

'ಅಪರಾಧ ಮಾಡುವುದು ತಪ್ಪು' ಎಂಬ ಜನಾಂಗಿಕ ಮೌಲ್ಯಗಳು ಈ ಆಟಗಳಲ್ಲಿ ಪ್ರಚಾರಗೊಂಡು ಗ್ರಾಮೀಣದಲ್ಲಿ ನೈತಿಕ ಹೊಣೆ ಅಥವಾ ಮನೋಧರ್ಮವನ್ನು ಬೆಳೆಸಿದವು ಎಂದು ಹೇಳಬಹುದಾಗಿದೆ, ಮಹಾ ಸತಿ ಶಿವಲೋಚನಾ, 'ಬಾಳಬಿಕ್ಷುಕ', 'ಸತ್ಯಶಿಲಾವತಿ', 'ರಾಜವೀರಪರಾಕ್ರಮ', ವಿಘ್ನಾವತಿ, ಅಡ್ಡ ಕತೆಗಳಾಗಿ– ಜಗಳಗಂಟಿ ಜಕ್ಕವ್ವ, 'ಸಂತದಂಪತಿಗಳು', 'ದುರಾಸೆಯ ಭಕ್ತ,' ಈ ಆಟಗಳು ಈ ದಿಸೆಯಲ್ಲಿ ಯಶಸ್ಸನ್ನು ಪಡೆದಿವೆ. ನಡೆದ ಘಟನೆಯನ್ನು ಸಾಮಾಗ್ರಿ ಮಾಡಿಕೊಂಡು, ಈ ಆಟಗಳು ನೀತಿ ಅನೀತಿಯನ್ನು ಮಾರ್ಮಿಕವಾಗಿ ಪ್ರದರ್ಶಿಸಿದವುಗಳಾಗಿವೆ. ಕಥೆಯ ಸಹಜತೆಯಿಂದ ಜನರಿಗೆ ಹತ್ತಿರವೆನಿಸಿದವುಗಳಾಗಿವೆ.

ಸಮಾಜದಲ್ಲಿ ನಡೆಯುವ ವಿಕೃತ ಕಾಮ, ಹಾದರ, ದ್ವೇಷ, ಕೊಲೆ, ದಬ್ಬಾಳಿಕೆ, ಮುಂತಾದ ಪ್ರಸಂಗಗಳು ಅವುಗಳ ಪರಿಣಾಮವನ್ನು ಪ್ರದರ್ಶಿಸಿ ಹೀಗೆ ಯಾರೂ ಮಾಡಬಾರದೆಂಬ ನೀತಿಯನ್ನು ಸೂಚ್ಯವಾಗಿ ತಿಳಿಸುತ್ತವೆ. 'ಮಹಾಸತಿ ಶಿವಲೋಚನ' ಆಟದಲ್ಲಿ ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಳ್ಳುವಂತಹದ್ದು ತನ್ನ ಬಸುರಿಗೆ ತನ್ನಗಂಡನಲ್ಲದೆ ಬೇರೆ ಯಾರೂ ಅಲ್ಲವೆಂದು ಪ್ರತಿಪಾದಿಸುವಂಹದ್ದು ಕಂಡುಬರುತ್ತದೆ. ಅದಕ್ಕೆ ಪ್ರತಿಯಾಗಿ 'ಶಿವಲೋಚನೆ'ಯ ಅತ್ತೆ ಆಕೆಗೆ ಅಪರಾದ ಹೊರೆಸಿ, ಆಕೆಯನ್ನು ಹಿಂಸಿಸುವ ರೀತಿ ಇವೆರಡು, ಅತ್ತೆ–ಸೊಸೆಯರ ಸಂಬಂಧವನ್ನು ಪ್ರತಿಬಿಂಬಿವಸುವಂತಹದ್ದು ಮತ್ತು ಅದಕ್ಕಾಗಿ ಹೆಣ್ಣು ಕಷ್ಟ

ಅನುಭವಿಸಿ, ಪುರುಷ ಸಮಾಜದ ಕಾಮುಖ ದೃಷ್ಠಿಯಿಂದ ಪಾರಾಗುವಂತಹದ್ದು ಈ ಆಟದಲ್ಲಿ ಪ್ರತಿಬಿಂಬಿತವಾಗಿದೆ. ಇಲ್ಲಿ ಶಿವಲೋಚನೆಯನ್ನು ಮಗನೇ ಬಯಸುವಂತಹ ಸನ್ನಿವೇಷವು ಸಹ ಕಂಡುಬರುತ್ತದೆ, ಅದು ತಪ್ಪೆಂದು ಆಗೆ ಮಾಡುವುದು ಅಪರಾದವೆಂಬ ಪರಿಜ್ಞಾನವನ್ನು ಪಾತ್ರಕ್ಕೆ ತೊಡಿಸುವುದರಿಂದ ಅವಳು ಮಹಾ ಸತಿಯಾಗಿ ಅವಳ ಗಂಡನನ್ನು ಪುನಃ ಪಡೆಯುವಂತಹದ್ದು ಅಂದರೆ ಪ್ರಕೃತಿ ಹೇಗೆ ಅದು ತನ್ನ ಸಮತೋಲನವನ್ನು ಕಾಪಾಡಿಕೊಳ್ಳುತ್ತದೆ ಎಂಬುದನ್ನು ಆಟದಲ್ಲಿ ಚಿತ್ರಿಸುವಂತಹದ್ದು ಕಂಡುಬರುತ್ತದೆ.

'ಸತ್ಯಶಿಲಾವತಿ' ಈ ಆಟದಲ್ಲಿ ತನ್ನ ಸ್ನೇಹಿತನ ಮಡದಿಯ ಮೇಲೆ ಮೋಹಪರವಶನಾಗುವಂತಹದ್ದು, ಕಂಡುಬರುತ್ತದೆ, 'ಕಡ್ಲಿ ಮಟ್ಟಿ ಸ್ಟೇಷನ್ ಮಾಸ್ತರ' ಕತೆಯಂತೆ ಈ ಆಟದಲ್ಲಿ ಶಿಲಾವತಿಯನ್ನು ಪುರುಷನು ಶೋಷಣೆ ಮಾಡುವಂತಹದ್ದು ಕಾಣಬಹುದಾಗಿದೆ, ಅವಳನ್ನು ಬಲಾತ್ಕಾರ ಮಾಡಿಶೀಲ ಹಾಳು ಮಾಡಲು ಹೋದಾಗ ಆಕೆಯು ದೇವರ ಗುಡಿಯಲ್ಲಿ ಅವಿತು ಕುಳಿತುಕೊಳ್ಳುವಂತಹದ್ದು, ಆಗ ಅವನು ಅವಳ ಮಗುವನ್ನು ಕಡಿದು ಸಾಯಿಸುವಂತಹದ್ದು, ಇದೇ ರೀತಿ 'ಕಡ್ಲಿ ಮಟ್ಟಿ ಸ್ಟೇಷನ್ ಮಾಸ್ತರ' ಕತೆಯಲ್ಲಿಯೂ ಸಹ ಇದೆ ಎಂದು ಹೇಳಬಹುದು. ಹೀಗೆ ಈ ಕತೆಯು ಮಹಿಳೆಯ ಶೋಷಣೆಯನ್ನು ಪ್ರಮುಖವಾಗಿ ಬಿಂಬಿಸುವಂತಹದ್ದಾಗಿದೆ ಎಂದು ಹೇಳಬಹುದಾಗಿದೆ.

'ವಿಘ್ನಾವತಿ' ಆಟದಲ್ಲಿ ಸ್ತ್ರೀಯರ ರಾಕ್ಷಸಿಯ ಬುದ್ದಿಯು ಹೇಗೆ ಇನ್ನೊಬ್ಬರಿಗೆ ಕಂಠಕ ಪ್ರಾಯವಾಗುತ್ತವೆ ಮತ್ತು ತಮ್ಮ ಸುಖಕ್ಕೆ ಬೇರೆಯವರು ಹೇಗೆ ಬಲಿಪಶುಗಳಾಗುತ್ತಾರೆ ಎಂಬುದು ಈ ಆಟದಲ್ಲೂ ಕಂಡುಬರುತ್ತದೆ, 'ಶಿವಲೋಚನಾ' ಮತ್ತು ಈ 'ವಿಘ್ನಾವತಿ'ಗಳಲ್ಲಿ ಪಾತ್ರಗಳೇ ಖಳನಾಯಕಿಯರಾಗಿದ್ದಾರೆ ತಾವು ಒಲಿದ ಅರಸರ ಮೂಲಕ ತಮ್ಮ ಸವತಿಯರನ್ನು ಹಿಂಸಿಸುತ್ತಾ ಮೈ ಸುಖ ಪಡೆಯುತ್ತಾರೆ. ಈ ಆಟದಲ್ಲೂ ಒಂದು ತರಹದ ಸವತಿ ಮತ್ಸರವನ್ನು ಕಾಣಬಹುದಾಗಿದೆ.

'ಬಾಳಬಿಕ್ಷುಕ' ಆಟದಲ್ಲಿ ತೊಟ್ಟಿಲ ಮಗುವಿಗೆ ಕನ್ಯೆಯನ್ನು ಹುಡುಕುವಂತಹದ್ದು ಬಾಲ್ಯವಿವಾಹವನ್ನು ಪ್ರತಿಬಿಂಬಿಸುತ್ತದೆ. ಆದರೆ ಇದು ಸರಿಯಾದ ಮಾರ್ಗವಲ್ಲವೆಂದು, ಕಲಾವಿದರು ತಮ್ಮ ಆಟಗಳ ಮೂಲಕ ಜನರಿಗೆ ಮನವರಿಕೆ ಮಾಡಿಕೊಡುತ್ತಾರೆ. ಈ ಆಟದಲ್ಲಿ 'ಬಾಳಬಿಕ್ಷುಕನ' ಮಡದಿ 'ಪದ್ಮಾವತಿ' ಪುರುಷ ಪ್ರದಾನ ಸಮಾಜ ನೀಡಿದ ಹಿಂಸೆ, ತೊಂದರೆ, ಕ್ರೌರ್ಯ ಯಾತನೆಗಳನ್ನು ಅನುಭವಿಸಿದ್ದು ಅರಸರು ತಮ್ಮರಾಣಿಯರನ್ನು ತಿರಸ್ಕರಿಸಿದರೆ ಇಡೀ ರಾಜ್ಯವೇ ತಿರಸ್ಕರಿಸುವಂತಹದ್ದು, ಮತ್ತು ಅಂಥ ತಿರಸ್ಕೃತರು ಸ್ವಸಾಮರ್ಥ್ಯ, ಸಾಹಸ, ದೈವೀನೆರವುಗಳಿಂದ ತಮ್ಮ ಪಾಲಿನ ಅಗ್ನಿದಿವ್ಯದಲ್ಲೂ ಯಶಸ್ಸು ಪಡೆದು. "ಸತ್ಯಮೇವಜಯತೆ" ಮಾತನ್ನು ಮರೆಯುವಂತೆ ಮಾಡುವಂತಹದ್ದು ಕಂಡುಬರುತ್ತದೆ.

'ವೀರ ಪರಾಕ್ರಮ' ಈ ಆಟದಲ್ಲಿ, ಈ ಮೇಲೆ ತಿಳಿಸಿರುವಂತೆ ರಾಜನಿಂದ ತಿರಸ್ಕರಿಸಲ್ಪಟ್ಟ ರಾಣಿಯ ಬಹಳ ಯಾತನೆಯನ್ನು ಅನುಭವಿಸುವಂತಹದ್ದು ಈ ಒಂದು ಸಂಕಷ್ಟವನ್ನು ರಾಜ ವೀರಪರಾಕ್ರಮ ಸರಿಪಡಿಸುವಂತಹದ್ದು, ಈ ಆಟದಲ್ಲಿ ದಾಯಾದಿಗಳು ಹೇಗೆ ಪರಸ್ತ್ರಿಯನ್ನು ಕಂಡರೆ ಆಗುವುದಿಲ್ಲವೋ ಹಾಗೆ, ಅದರಂತೆ ವೀರನಾಗಿದ್ದಾನೆ. ಅವನನ್ನು ಹೇಗಾದರೂ ಮಾಡಿ ಸದೆಬಡಿಯಬೇಕೆಂಬುದು ಮತ್ತು ಅವನ ಹೆಂಡತಿಯ ಮೇಲೆ ಮೋಹಗೊಂಡು ಅವನನ್ನು ಬಾವಿಯಲ್ಲೇ ಬಿಟ್ಟುಬಿಡುವಂತಹದ್ದು, ಇಲ್ಲಿ ಮಾಂತ್ರಿಕ ಶಕ್ತಿಯ ಕಾರ್ಯ ನಿರ್ವಹಿಸುವುದು ಕಂಡುಬರುತ್ತವೆ.

ಅದರಂತೆ ಈ 'ಅಡ್ಡ ಕತೆಗಳನ್ನು' ತೆಗೆದುಕೊಂಡರೂ ಸಹ ಅದರಲ್ಲಿ ಜಗಳಗಂಟಿ ಜಕ್ಕವ್ವ ಹೆಸರೇ ಸೂಚಿಸುವಂತೆ ಜಗಳವೇ ಅವಳ ಬಂಡವಾಳ ಅವಳ ಊಟ, ಇಂತಹದ್ದು ಸಮಾಜದಲ್ಲಿ ಸರಿಕಾಣದು ಎಂಬಂತಹ ನೀತಿಯನ್ನು ಪ್ರತಿಪಾದಿಸುವಂತಹದ್ದು, ಅದರಂತೆ ಸಂತದಂಪತಿಗಳಿಗೆ ಬರುವಂತಹ ಅಡೆತಡೆಗಳನ್ನು ನೋಡಿದರೆ, ಇಲ್ಲಿ ಅಸೂಯೆ ಮನೋಭಾವನೆ ಕೆಲಸ ಮಾಡುತ್ತದೆ. ಒಬ್ಬರ ಏಕಾಗ್ರತೆಯನ್ನು ಹಾಳುಮಾಡುವುದು ಸರಿಯಲ್ಲ ಎಂಬಂತಹ ಒಂದು ಸಂದೇಶವನ್ನು ನೀಡುವಂತಹದ್ದು ಈ ಆಟದಿಂದ ತಿಳಿದುಬರುತ್ತದೆ. 'ದುರಾಸೆಯ ಭಕ್ತ' ಈ ಆಟದಲ್ಲಿ ಪ್ರಮುಖವಾಗಿ ಕಲಾವಿದರು, ಪ್ರತಿಪಾದಿಸಿರುವುದೇನೆಂದರೆ, ಪ್ರತಿಯೊಬ್ಬನು ಪರಸ್ಪರವಾಗಿ, ಪರೋಪಕಾರಿಯಾಗಿ ಜೀವಿಸಬೇಕು. ಅಸಿದವರಿಗೆ ಅನ್ನ ನೀಡುವಂತಹದ್ದು ಮಾನವೀಯಧರ್ಮ ಎಂಬುವಂತಹದ್ದು, ತನ್ನಲ್ಲಿ ಎತೇಚ್ಚವಾದ ದವಸದಾನ್ಯಗಳಿದ್ದರೂ ಬೇರೆಯವರ ದವಸದಾನ್ಯಗಳನ್ನು ಕದಿಯುವಂತಹದು ಕಂಡುಬರುತ್ತದೆ. ಅಂದರೆ ತನ್ನಲ್ಲಿರುವ ಆಹಾರವನ್ನು ಪರರಿಗೂ ಹಂಚಿ ತಿನ್ನಬೇಕು ಎಂಬುದು, ಈ ಆಟದ ಮುಖ್ಯ ಸಂದೇಶವೆಂದು ಹೇಳಬಹುದಾಗಿದೆ, 'ಅತಿ ಆಸೆ ಗತಿಗೆಡಿಸಿತು' ಎಂಬ ಗಾದೆಯಂತೆ ದುರಾಸೆ ಇರಬಾರದು ಎಂಬುದು ಹಾಗಿದ್ದರೆ, ಅವರಿಗೆ ಮುಂದೆ ತೊಂದರೆ ಉಂಟಾಗುತ್ತದೆ ಎಂಬಂತಹ ಮಹತ್ವದ ವಿಚಾರಗಳನ್ನು ಜನರಿಗೆ ಅರ್ಥವಾಗುವಂತೆ ಈ ಆಟಗಳು ಪ್ರತಿಬಿಂಬಿಸಿರುವುದು ಅತ್ಯಂತ ಮಹತ್ವದ್ದಾಗಿದೆ.

ದಾಸ ಸಂಪ್ರದಾಯ ಹಾಗೂ ಶರಣಸಂಪ್ರದಾಯದ ಸಣ್ಣಾಟಗಳಲ್ಲಿಯೂ ಪ್ರೀತಿ ಪ್ರಣಯಕ್ಕೆ ಸಾಕಷ್ಟು ಅವಕಾಶವುಂಟು, ಆದರೆ ಇಲ್ಲಿ ಭಕ್ತಿಯೇ ಮುಖ್ಯ ಅಂಶವಾಗಿರುತ್ತದೆ ಮನುಷ್ಯನ ವಿಕಾರಭಾವನೆಗಳಿಂದ ದೋಷಗಳುಂಟಾಗಿ ಸಮಾಜದಲ್ಲಿ ಹಾಹಾಕಾರ ಉಂಟಾದಾಗ ಸುಖಶಾಂತಿ ನೆಮ್ಮದಿ ಕದಲುತ್ತದೆ. ಅಂಥ ವೇಳೆಯಲ್ಲಿ ಸಮಾಧಾನ ಶಾಂತಿ ಭಕ್ತಿಯಿಂದ ವರ್ತಿಸಬೇಕು. ಅಂದಾಗ ಅನಾಹುತವಾಗುವುದಿಲ್ಲ ಕೆಟ್ಟವರನ್ನು ತಿದ್ದಬೇಕು ಆಗಲೇ ಸಮಾಜದಲ್ಲಿ ಸಂಸ್ಕೃತಿ ಉಳಿಯಲು ಬೆಳೆಯಲು ಸಾದ್ಯ ಎನ್ನವ ನೀತಿ ಮೌಲ್ಯಗಳನ್ನು

ಈ ಆಟಗಳು ಸಾರುತ್ತವೆ. ಅಲ್ಲದೆ ಸದ್ಗುಣಗಳಿಂದ ಬದುಕಿ ಸಮಾಜದಲ್ಲೂ ಶಾಂತತೆ ಕಾಪಾಡಿಕೊಳ್ಳಬೇಕೆಂದು ಹೇಳುವುದರೊಂದಿಗೆ ಮತಪ್ರಚಾರ ಕೆಲಸವನ್ನು ಮಾಡುತ್ತದೆ.

ಪ್ರೀತಿ, ಹಾದರ, ದ್ವೇಷ–ಕೊಲೆ ಶೋಷಣೆ–ಸಂಘರ್ಷ ಭಕ್ತಿ ಮತೀಯತೆ ಮೌಲ್ಯಗಳು ಆಟಗಳಲ್ಲಿ ಪ್ರಯೋಗಗೊಂಡು ಹಳೆಯ ಬಯಲಾಟ ರಂಗಭೂಮಿಯಿಂದ ಬೇಸತ್ತವರಿಗೆ ಆನಂದ ನೀಡುವಂತಹವು ಈ ಆಟಗಳು, ನ್ಯಾಯ–ಅನ್ಯಾಯ, ನೀತಿ–ಅನೀತಿ ಪ್ರಜ್ಞೆ ಮೂಡಿಸಿದ ಈ ಆಟಗಳು ಗ್ರಾಮೀಣ ಜನರ ಬದುಕಿಗೆ ದಾರಿದೀಪಗಳಾದವು ಹಾಗೂ ನೀತಿಪಾಠಗಳಾದವು.

ಈ ದೇವೇಂದ್ರಪ್ಪನವರ ಆಟಗಳು ಬದುಕು ಹಾಗೂ ಸಾಮಾಜಿಕ ಘಟನೆಗಳನ್ನು ವಸ್ತು ಮಾಡಿಕೊಂಡವಲ್ಲದೆ ಭಕ್ತಿ ಮತ್ತು ಮತೀಯತೆಯನ್ನು ಸ್ವೀಕರಿಸಿ ಪ್ರಭಾವ ಬೀರಿದವು ಆರಂಭದ ಸಣ್ಣಟಗಳು ತೋಂಡಿ ಸಂಪ್ರದಾಯಕ್ಕೆ ಸೇರಿದ್ದು ಆಮೇಲೆ ಲಿಖಿತರೂಪ ಪಡೆದುಕೊಂಡಿರುವುದು ನಮಗೆ ಕಂಡುಬರುತ್ತದೆ.

ಅದರಂತೆ ಇವರ ಆಟಗಳು ಸರಳ, ಸಂಕ್ಷಿಪ್ತ, ನಿಗದಿತ ಅವಧಿಯಲ್ಲಿ ಪ್ರಯೋಗಗೊಳ್ಳುವ ಬಯಲಾಟದ ರೂಪಕ್ಕೆ ಸಣ್ಣಾಟ ಅಥವಾ ಡಪ್ಪಿನಾಟವೆಂದು ಅನೇಕ ವಿದ್ವಾಂಸರು ಕರೆದಿರುವುದು ನಮಗೆ ತಿಳಿದುಬರುತ್ತದೆ. ತರ್ಕಬದ್ಧ ಸಂಬಾಷಣೆಯಿದ್ದು, ಲಾವಣಿ, ಸ್ವರವಚನ, ತತ್ವಪದ, ದಾಸರಪದ ಭಜನೆಪದಗಳ ಧಾಟಿಗಳನ್ನು ಒಳಗೊಂಡಿವೆ ಮತ್ತು ಮರಾಠಿಲ್ಲಿ ಮಾತ್ರ ಸಿಗುವ ಜೋಗುಳದ ಹಾಡುಗಳು ಹೆಣ್ಣುಮಕ್ಕಳು ಪಂಚಮಿಯ ದಿನದಂದು ಹಾಡುವ ಹಾಡುಗಳನ್ನು ಒಳಗೊಂಡಿವೆ, ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಜನಪದ ಮತ್ತು ಭಕ್ತಿಪಂಥವನ್ನು ಹೊಂದಿದ ಈ ಆಟಗಳು ಮಾನವರಲ್ಲಿ ನೀತಿ, ನ್ಯಾಯ, ಸಂಸ್ಕಾರ, ಸಂಸ್ಕೃತಿ ಬೆಳೆಸುವಲ್ಲಿ ಸಹಕಾರಿಯಾಗಿದ್ದರಿಂದ ಸಾಮಾಜಿಕ ಮೌಲ್ಯಗಳು ಸೇರಿಕೊಂಡವು. ಸಮಾಜದ ಸಂಪೂರ್ಣ ಚಿತ್ರಣವನ್ನು ಪ್ರದರ್ಶಿಸಿ ಒಳ್ಳೆಯ ಕೆಟ್ಟುದರ ಪ್ರಸಂಗ–ಪರಿಣಾಮ ತಿಳಿಸಿ ಗ್ರಾಮಗಳ ಸಂಸ್ಕೃತಿಯನ್ನು ಪ್ರಸಾರ ಮಾಡಿದ್ದು ಇಂಥಹ ಆಟಗಳೆಂದೆ ಹೇಳಬಹುದು.

ಹೀಗೆ ಒಂದು ರೀತಿಯ ವ್ಯವಸ್ಥೆಯನ್ನು ಹೊಂದಿರುವಂತಹವುಗಳು ಗೊಂದಲಿಗರ ದೇವೇಂದ್ರಪ್ಪನ ಆಟಗಳು ಇವು ಇಂದು ಆದುನಿಕತೆಯ ಸಂದರ್ಭದಲ್ಲಿ ಪ್ರಸ್ತುತವಾಗಿ ನಿಲ್ಲುವುದರಲ್ಲಿ ಅನುಮಾನವಿಲ್ಲವೆಂದೇ ಹೇಳಬಹುದಾಗಿದೆ.

ಅಡಿ ಟಿಪ್ಪಣಿಗಳು

೧. ಗೊಂದಲಿಗರ ಸಂಸ್ಕೃತಿ, ಡಾ.ನಿಂಗಣ್ಣ ಸಣ್ಣಕ್ಕಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ ಬೆಂಗಳೂರು ೫೬೦೦೦೨, ಪುಟ ಸಂಖ್ಯೆ–೧೧೮, ೧೯೯೩

೨. ಜಾನಪದ ಸಾಹಿತ್ಯದರ್ಶನ ಭಾಗ–೨, (ಸಂ) ಎಂ.ಎಸ್.ಸುಂಕಾಪುರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪುಟ ಸಂಖ್ಯೆ–೧೦೨

೩. ಗೊಂದಲಿಗರ ಸಂಸ್ಕೃತಿ, ಡಾ.ನಿಂಗಣ್ಣ ಸಣ್ಣಕ್ಕಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ ಬೆಂಗಳೂರು ೫೬೦೦೦೨, ಪುಟ ಸಂಖ್ಯೆ–೧೨೨, ೧೯೯೩

೪. ಕರ್ನಾಟಕ ಜನಪದ ಕತೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ ಬೆಂಗಳೂರು, ಪುಟ ಸಂಖ್ಯೆ–೬೫, ೧೯೯೭ (೨೪ ಕತೆಗಳು)

೫. ಗೊಂದಲಿಗರ ದೇವೇಂದ್ರಪ್ಪನ ಆಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ಸಂಖ್ಯೆ–೩೩

೬. ಅದೇ ಪುಟ–೧೫

೭. ಅದೇ ಪುಟ–೧೯

ಅಧ್ಯಾಯ-ಆರು

ಆಧುನಿಕತೆಯ ಸಂದರ್ಭದಲ್ಲಿ ಡಪ್ಪಿನಾಟಗಳು

ಅಧ್ಯಾಯ-ಆರು

ಆಧುನಿಕತೆಯ ಸಂದರ್ಭದಲ್ಲಿ ಡಪ್ಪಿನಾಟಗಳು

ಊರೊಳಗೆ ಗೊಂದಲಿಗರು ಬಂದಿದ್ದಾರೆ ಎಂಬ ಸುದ್ದಿಯು ಮಿಂಚಿನಂತೆ ಹರಡುತ್ತಿತ್ತು. ಎಲ್ಲೆಲ್ಲೂ ಸಂಭ್ರಮ ಸಡಗರ ಒಂದು ರೀತಿಯಲ್ಲಿ ಹಬ್ಬದ ವಾತಾವರಣ ಏರ್ಪಡುತ್ತಿತ್ತು. ಗೊಂದಲಿಗರ ಆಟಗಳಿಗೆ ಗೌರವ ಆದರಗಳು ಸಿಗುತ್ತಿದ್ದವು ಈ ಕಲೆಗೆ ಸಾಕಷ್ಟು ಪ್ರೋತ್ಸಾಹ ಸಿಗುತ್ತಿತ್ತು. ಅವುಗಳನ್ನು ಜನರು ಅಷ್ಟರಮಟ್ಟಿಗೆ ಪೋಷಿಸಿಕೊಂಡು ಬರುತ್ತಿದ್ದರು ಪರಿಸ್ಥಿತಿ ಬದಲಾದಂತೆಲ್ಲಾ ಸಾಕಷ್ಟು ಜನಪದ ಪ್ರದರ್ಶಕ ಕಲೆಗಳೂ ಕೂಡ ಬದಲಾವಣೆಯನ್ನು ಕಂಡವು ಒಂದರ್ಥದಲ್ಲಿ ಎಲ್ಲವೂ ಕೂಡ ಬದಲಾವಣೆಗಳನ್ನು ಕಂಡವೆಂದು ಹೇಳಬಹುದು.

ಗೊಂದಲಿಗರು ಇಂದು ತಮ್ಮ ಆಟಗಳನ್ನು ತೋರಿಸುವುದು ಬಿಟ್ಟಿದ್ದಾರೆ ಇಂದಿನ ದಿನಗಳಲ್ಲಿ ನೋಡುವವರ ಸಂಖ್ಯೆಯು ಕಡಿಮೆಯಾಗಿದೆ ಕಾರಣ ಪ್ರಸ್ತುತದಿನಗಳಲ್ಲಿ ಚಾಲ್ತಿಯಲ್ಲಿರುವ ಆಧುನಿಕ ಮನೋರಂಜನಾ ಮಾಧ್ಯಮಗಳು ಮತ್ತು ಹೆಚ್ಚು ವೇಗದಲ್ಲಿ ಬೆಳೆಯುತ್ತಿರುವ ವೈಜ್ಞಾನಿಕ ಅಂಶಗಳು ಪ್ರೇರಕವಾಗಿ ಕಂಡುಬಂದರೆ ಮತ್ತೊಂದು ಬದಿಯಲ್ಲಿ ಮಾರಕವಾಗಿ ಪರಿಣಮಿಸುತ್ತಿವೆ. ವಿಜ್ಞಾನದಲ್ಲಿ ಹೊಸ ಹೊಸ ಅವಿಷ್ಕಾರವಾಗಿವೆ. ದಿನನಿತ್ಯವೂ ಸಹ ಒಂದಿಲ್ಲ ಒಂದು ರೀತಿಯಲ್ಲಿ ಆವಿಸ್ಕಾರಗಳಾಗುತ್ತಲ್ಲಿವೆ. ಇದರಲ್ಲಿ ವಿಜ್ಞಾನದ ಪಾತ್ರವೂ ಪ್ರಮುಖವಾದುದು. ಗೊಂದಲಿಗರು ಅಲೆಮಾರಿಗಳಾಗಿದ್ದು ಅವರು ವಂಶಪಾರಂಪರ್ಯದಿಂದ ಆಟವನ್ನು ತೋರಿಸಿ ಅದರಿಂದ ಬಂದ ಹಣದಿಂದ ಬದುಕುವುದು ಸರ್ವೇಸಾಮಾನ್ಯವಾಗಿದೆ. ಆದರೆ ಪ್ರಸ್ತುತ ದಿನಗಳಲ್ಲಿ ಈ ಕಲೆಗೆ ತೀವ್ರವಾದ ಪೆಟ್ಟು ಬಿದ್ದು ಈ ಕಲೆಯು ನಶಿಸಿಹೋಗುತ್ತಿದೆ. ಈಗ ಈ ಆಟಗಳನ್ನು ಆಡಿಸುವವರೂ ವಿರಳ ಇದನ್ನು ನೋಡಿ

ಆಸ್ವಾದಿಸುವವರು ವಿರಳವಾಗಿದ್ದಾರೆ. ಏಕೆಂದರೆ ಈ ಆಟಗಳನ್ನು ನೋಡುವುದು ಕೀಳರಿಮೆ ಎಂದು ಭಾವಿಸಿದ್ದಾರೆ.

ಈ ಆಟಗಳು ಅವನತಿಯನ್ನು ಹೊಂದಲು ಮುಖ್ಯ ಕಾರಣವೆಂದರೆ ಮುಖ್ಯವಾಗಿ ಗ್ರಾಮಗಳಲ್ಲಿ ಜನಪದ ಕಲೆಗಳನ್ನು ನೋಡುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಈ ಕಲೆಗಳನ್ನು ನೋಡುವ ಪ್ರೇಕ್ಷಕರು ವಯಸ್ಕರಾಗಿದ್ದು, ಯುವಕರು ಇಂತಹ ಕಲೆಗಳನ್ನು ನೋಡುವುದನ್ನು ಬಿಟ್ಟಿದ್ದಾರೆ. ಇದಕ್ಕೆ ಕಾರಣ ಆಧುನಿಕ ತಂತ್ರಜ್ಞಾನ. ಇದರ ಫಲವಾಗಿ ಇವರ ಅಭಿರುಚಿಯನ್ನು ಸಂವಹನ ಮಾಧ್ಯಮಗಳು ಕಸಿದುಕೊಂಡುಬಿಟ್ಟಿವೆ. ಹಿಂದೆ ಈ ಕಲೆಗಳನ್ನು ಆಡಿಸಿ ಆಸ್ವಾದಿಸುತ್ತಿದ್ದರು. ಆದರೆ ಇಂದು ಕೆಲವೇ ಕ್ಷಣಗಳಲ್ಲಿ ರಂಜನೀಯವಾದ ಚಿತ್ರಗಳನ್ನು ತೋರಿಸುವಂತಹ ಮಾಧ್ಯಮಗಳು ಬಂದಿರುವುದು ಇವುಗಳ ಪ್ರಭಾವದಿಂದ ಜನರು ಸಿನಿಮಾ, ಧಾರವಾಹಿಗಳಿಗೆ ಮಾರುಹೋಗುತ್ತಿದ್ದಾರೆ. ಈ ಸಿನಿಮಾಗಳಲ್ಲಿ ಬರಿ ಆಡಂಬರ ಜೀವನ ಶೈಲಿಯನ್ನು ನಿರೂಪಿಸುವಂತಹದ್ದು ಕಂಡುಬರುತ್ತದೆ. ಇದರ ಸವಿಯನ್ನು ಪಡೆಯಲು ಇಂದಿನ ವಯಸ್ಕರು ಹಾತೊರೆಯುತ್ತಿದ್ದಾರೆ. ಆದರೆ ಜನಪದ ಕಲೆಗಳಲ್ಲಿ ಹಾಗೇ ಇರುವುದಿಲ್ಲ ಜೀವನದಲ್ಲಿ ನೀತಿ-ನಿಯಮ ಮತ್ತು ಮೌಲ್ಯಯುತವಾದ ಜೀವನ ಶೈಲಿಯನ್ನು ಪ್ರತಿಬಿಂಬಿಸುವಂತಹವುಗಳಾಗಿವೆ. ಇದೆಲ್ಲವನ್ನು ಮರೆತು ಗ್ರಾಮೀಣ ಜನರಲ್ಲಿ ಈ ಆಡಂಬರದ ಜೀವನಕ್ಕೆ ಮಾರು ಹೋಗುವಂತಾಗಿದೆ. ಸಿನಿಮಾದಲ್ಲಿ ತೋರಿಸುವಂತ ಪಟ್ಟಣದ ಸಂಸ್ಕೃತಿಯು ಇವರನ್ನು ಕೈಬೀಸಿ ಕರೆಯುತ್ತಿದೆ. ಇಂತಹ ಒಂದು ಸಂದರ್ಭದಲ್ಲಿ ಇಡಿ ದಿನ ರಾತ್ರಿ ಆಡುವಂತಹ ಪ್ರದರ್ಶನ ಕಲೆಯಾದಂತಹ ಡಪ್ಪಿನಾಟಗಳನ್ನು ನೋಡುವ ತಾಳ್ಮೆ ಜನರಲ್ಲಿ ಉಳಿದಿಲ್ಲ ಮತ್ತು ಕಲಾವಿದರನ್ನು ಕರೆಯಿಸಿ ಆಡಿಸುವಂತಹ ಮನೋಭಾವ ಕಡಿಮೆಯಾಗಿದೆ, ಮುಂದುವರೆದ ತಂತ್ರಜ್ಞಾನದ ಫಲವಾಗಿ, ಇಂದು ಜನಪದ ಗೀತೆಗಳನ್ನು ಕ್ಯಾಸೆಟ್‌ನಲ್ಲಿ, ಧ್ವನಿ ಸುರುಳಿಯಲ್ಲಿ, ಹಿಡಿಟ್ಟು, ಅವುಗಳನ್ನು ಕೇಳುವಂತಹ ಪರಿಪಾಠ ಹೆಚ್ಚಾಗಿದೆ. ಅದರಂತೆ ಅವರಿಗೆ ಬೇಕಾದಂತ ಚಿತ್ರಣಗಳನ್ನು ಕ್ಷಣ ಮಾತ್ರದಲ್ಲಿ ತಮ್ಮ ಮನೆಯ ದೂರದರ್ಶನದಲ್ಲಿ ನೋಡಬಹುದಾಗಿದೆ. ಅದಲ್ಲದೆ ಡಿವಿಡಿ ಪ್ಲೇಯರ್‌ನಂತಹ ಸಾಧನಗಳಲ್ಲಿ ಚಿತ್ರಗಳನ್ನು ನೋಡುವಂತಹ ಈಗಿನ ದಿನಗಳಲ್ಲಿ ಜನರು ಜನಪದ ಕಲೆಗಳನ್ನು ಊರುಮುಂದೆ ಹೋಗಿ ನೋಡುವುದಕ್ಕೆ ತಮ್ಮ ಪ್ರತಿಷ್ಠೆ ಕಡಿಮೆಯಾಗುತ್ತದೆ ಏನೋ ಎಂಬ ಪರಿಕಲ್ಪನೆ ಬೆಳೆದುಬಿಟ್ಟಿದೆ. ಇದಲ್ಲದೆ ಮೊಬೈಲ್‌ಗಳಂತಹ ಸಾಧನಗಳು ಈ ಎಲ್ಲಾ ಸಮೂಹ ಸಂವಹನ ಮಾಧ್ಯಮಗಳನ್ನು ಹೊಂದಿರುವುದರಿಂದ ವಯಸ್ಕರ ಮನಸ್ಸು ಅಭಿರುಚಿಯು ಅತ್ತಕಡೆಯೇ ಬೆಳೆಯುತ್ತಿದೆ. ಅದರಲ್ಲಿ ತೋರಿಸುವಂತಹ ಚಿತ್ರಗಳು ಮತ್ತು ಹಾಡುಗಳು ಅವರನ್ನು ಜನಪದ ಕಲೆಗಳನ್ನು ನೋಡುವಂತಹ ಅಭಿರುಚಿಯನ್ನು ಕಡಿಮೆ ಮಾಡುತ್ತಿವೆ. ಅನಕ್ಷರಸ್ಥರು ಸಹ ಇದಕ್ಕೆ

ಹೊರತಾಗಿಲ್ಲ ಇವರು ಸಹ ಸಿನಿಮಾಗಳಲ್ಲಿ ಬಿತ್ತರಿಸುವ ಚಿತ್ರದೋಪಾದಿಯಲ್ಲಿ ತಮ್ಮ ಜೀವನ ಶೈಲಿಗಳನ್ನು ಬದಲಾವಣೆ ಮಾಡಿಕೊಂಡಿದ್ದಾರೆ. ಕೆಲವೇ ಕ್ಷಣದಲ್ಲಿ ಸಿನಿಮಾಗಳನ್ನು ನೋಡಬಹುದು ಎಂಬ ಕಲ್ಪನೆ ಇವರಿಗೆ ಮನದಟ್ಟಾಗಿದೆ. ಆದ್ದರಿಂದ ಈ ಪರಿಪಾಠವನ್ನು ಇವರು ಸಹ ಅನುಕರಿಸುತ್ತಿದ್ದಾರೆ.

ಹಿಂದೆ ಮಳೆ ಬಾರದಿದ್ದಾಗ ದನಕರುಗಳಿಗೆ ರೋಗರುಜಿನ ಮತ್ತು ಮದುವೆ ಸಂದರ್ಭದಲ್ಲಿ ಮಗು ನಾಮಕರಣ ಸಂದರ್ಭದಲ್ಲಿ, ಹೆಣ್ಣು ಮಕ್ಕಳು ಮೈನೆರೆಯುವ ಸಂದರ್ಭದಲ್ಲಿ ಮನುಷ್ಯರಿಗೆ ಸೆಟೆವ್ವ ಎಂಬ ರೋಗ ರುಜಿನಗಳು ಬರುವಂತಹ ಸಂದರ್ಭದಲ್ಲಿ ಈ ಊರಿನ ಪ್ರಮುಖರು ಕುಳಿತು ಚರ್ಚಿಸಿ ಗೊಂದಲಿಗರ ಆಟಗಳನ್ನು ಆಡಿಸಿದರೆ ತಮಗೆ ಒಳ್ಳೆಯದಾಗುತ್ತದೆ. ಎಂದು ನಂಬಿದ್ದರು ಬಹುಶಃ ಈ ಜನಪದ ನಂಬಿಕೆ ಇದ್ದುದರಿಂದಲೇ ಈ ಕಲೆ ಬಹಳಷ್ಟು ಪ್ರಚುರತೆಯನ್ನು ಪಡೆದಿತ್ತು. ದಿನ ಉರುಳಿದಂತೆಲ್ಲಾ ಎಲ್ಲವೂ ಕಾಲಕ್ಕೆ ಅನುಗುಣವಾಗಿ ಬದಲಾವಣೆಯನ್ನು ಹೊಂದಿದವು.

ಸಮೂಹ ಮಾಧ್ಯಮಗಳಾದ ವೃತ್ತಪತ್ರಿಕೆ, ರೇಡಿಯೋ, ದೂರದರ್ಶನ ಮತ್ತು ಅಂತರ್ಜಾಲ ಮತ್ತು ಹೊಸ ತಂತ್ರಜ್ಞಾನಗಳಲ್ಲಿ ಆದ ಕ್ರಾಂತಿಕಾರಕ ಬದಲಾವಣೆ ಇವುಗಳಿಗೆ ಪೂರಕವಾಗಿ ಆಡಿಯೋ ಮತ್ತು ಸಿನಿಮಾಗಳು ತಮ್ಮ ಪ್ರಭಾವಗಳನ್ನು ಬೀರುತ್ತಿರುವುದರಿಂದ ಇಂತಹ ಪ್ರದರ್ಶಕ ಕಲೆಗಳು ಗಣನೀಯವಾಗಿ ಗೌಣವಾದವು. (ಮರೆಯಾದವು) ಪ್ರದರ್ಶನ ಕಲೆಗಳಿಗೆ ಪ್ರದರ್ಶನ ವಿಲ್ಲದಿದ್ದರೆ ಅವು ಉಳಿಯುವ ಸಾಧ್ಯತೆ ಕಡಿಮೆ ಪ್ರದರ್ಶನ ಸಂದರ್ಭವು ಸಹ ಅವುಗಳ ಮೇಲೆ ಪರಿಣಾಮಬೀರುತ್ತವೆ.

ಈಗಿನ ಜನರೂ ಸಹ ಪ್ರದರ್ಶನ ಕಲೆಗಳನ್ನು ನಿರ್ಲಕ್ಷಿಸುತ್ತಿದ್ದಾರೆ. ಕಾರಣ ಹೊಸ ರೀತಿಯ ತಂತ್ರಜ್ಞಾನದಿಂದ ಕೂಡಿದ ಸಿನಿಮಾ ದೂರದರ್ಶನವು (ಟಿ.ವಿ) ಸಹ ಇದಕ್ಕೆ ಹೊರತಾಗಿಲ್ಲ ಬರೀ ಶೋಕಿಗಾಗಿ ಯಾವುದಾದರೊಂದು ನೃತ್ಯವನ್ನು ನೋಡುವುದು ಕೀಳು ಅಭಿರುಚಿಯನ್ನು ಪ್ರತಿಬಿಂಬಿಸುತ್ತವೆ. (ವಂತಹ) ಚಲನ ಚಿತ್ರವನ್ನು ನೋಡುವುದು. ಸಹಜವಾಗಿದೆ. ಪ್ರದರ್ಶನ ಕಲೆಗಳಬಗ್ಗೆಯೂ ಸಹ ಸರಿಯಾಗಿ ತಿಳಿದಿಲ್ಲದ ಎಷ್ಟೋ ಜನರನ್ನು ನಮ್ಮ ಸುತ್ತ ಮುತ್ತ ನೋಡುತ್ತೇವೆ. ಈ ವ್ಯವಸ್ಥೆ ಬರಲು ಯಾರು ಕಾರಣ? ನಿರ್ಲಕ್ಷವೇ? ಪರಿಸ್ಥಿತಿಯೇ? ಅಥವಾ ಸಂದರ್ಭ ಎನ್ನುಬಹುದೇ? ಒಟ್ಟಾರೆಯಾಗಿ ನೋಡಿದಾಗ ಆಧುನಿಕ ತಂತ್ರಜ್ಞಾನದ ಫಲದಿಂದಾಗಿ ಜನಪದ ಪ್ರದರ್ಶನ ಕಲೆಗಳು ನಶಿಸಿಹೋಗುತ್ತಿವೆ.

ಹಳ್ಳಿಗಳೂ ಕೂಡ ಇದಕ್ಕೆ ಹೊರತಾಗಿಲ್ಲ ಏಕೆಂದರೆ ಎಲ್ಲರೂ ಹೊಸತನ್ನ ನಾವಿನ್ಯತೆಯನ್ನು ಬಯಸುತ್ತಿದ್ದಾರೆ ಹಿಂದೆ ಹಳ್ಳಿಗಳಲ್ಲಿ ವಾಸಿಸುವ ಜನರು ಉತ್ಸಾಹದಿಂದ ಗೊಂದಲಿಗರ ಆಟಗಳನ್ನು ನೋಡುತ್ತಿದ್ದರು. ಟಿಲಿವಿಷನ್ ಪರಿಚಯ ಆದನಂತರ ಎಲ್ಲರೂ

ಅದಕ್ಕೆ ಜೋತು ಬಿದ್ದಿದ್ದಾರೆ. ಇನ್ನು ಕೆಲವರು ಅದರಲ್ಲೇನಿದೆ? ಹಳೆಯ ಆಟವನ್ನು ಆಡಿ ತೋರಿಸುತ್ತಾರೆ. ಅದನ್ನೇಕೆ ನೋಡಬೇಕು ಬದಲಿಗೆ ಯಾವುದಾದರೂ ಮಾಧ್ಯಮವನ್ನು ಹುಡುಕೋಣ ಎಂಬಂಥ ಭಾವನೆಗಳನ್ನು ತಳಿದಿದ್ದಾರೆ.

ಈ ಸಮಾಜ ವ್ಯವಸ್ಥೆಯಲ್ಲಿ ಆದ ತೀವ್ರವಾದಂತಹ ಬದಲಾವಣೆಗಳು ನಮ್ಮ ಸಮಾಜವು ಹಿಂದೆ ರಾಜಮಹಾರಾಜರ ಆಳ್ವಿಕೆಗೆ ಒಳಪಟ್ಟಿತ್ತು. ರಾಜರಕಾಲದಲ್ಲಿ ಗೊಂದಲಿಗರ ಆಟಗಳನ್ನು ಆಡುವವರಿಗೆ ಚೆನ್ನಾಗಿ ಪೋಷಣೆ ಸಿಗುತ್ತಿತ್ತು. ಇದರಿಂದಾಗಿ ಈ ಪ್ರದರ್ಶನ ಕಲೆಯೂ ಜೀವಂತವಾಗಿತ್ತು. ರಾಜಮಹಾರಾಜರು ಅಷ್ಟೇಯೇಕೆ ಜನಸಾಮಾನ್ಯರು ಕೂಡ ಈ ಆಟಗಳನ್ನು ಆಡಿಸುತ್ತಿದ್ದರು ಇದರ ಜೀವಂತಿಕೆಗೆ ಜನಪದರೂ ಜನಸಾಮಾನ್ಯರು ಸಹ ಕಾರಣರೆಂದು ಹೇಳಬಹುದಾಗಿದೆ.

ಈ ಆಟವನ್ನು ಆಡುವವರು ನಿರ್ದಿಷ್ಟವಾಗಿ ಗೊಂದಲಿಗರ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಅಂದಿನ ದಿನಗಳಲ್ಲಿ ಇವರು ಸೈನ್ಯದಲ್ಲಿದ್ದು ತರಬೇತಿಯನ್ನು ಪಡೆಯುತ್ತಿದ್ದರೆಂದು ಅನೇಕ ಮೂಲಗಳಿಂದ ತಿಳಿದು ಬರುತ್ತವೆ. ಇವರನ್ನು ಗೂಡಾಚಾರಿಗಳನ್ನಾಗಿ ಬಳಸಿಕೊಂಡು ಅಲ್ಲಿನ ರಾಜಕೀಯ ಆಸ್ತಿರತೆಯನ್ನು ತಿಳಿದುಕೊಳ್ಳುವ ಪದ್ದತಿ ಇತ್ತು ಬ್ರಿಟೀಷರ ಆಗಮನದಿಂದಾಗಿ ರಾಜರ ಸಂತತಿಯು ಸಹ ಕಡಿಮೆಯಾಗಿ ವಿದೇಶಿ ಸಂಸ್ಕೃತಿಯು ವಿಜೃಂಬಿಸತೊಡಗಿತು. ಎಲ್ಲದರ ಮೇಲೂ ಇಂಗ್ಲೀಷ್‌ರ ಪ್ರಭಾವ ಬೀರಿತು. ಈ ದೆಸೆಯಿಂದ ನಮ್ಮ ಅದೆಷ್ಟೋ ಜನಪದ ಕಲೆಗಳು ಕಣ್ಮರೆಯಾಗ ಹತ್ತಿದವು.

ಪ್ರಸ್ತುತ ಸಂದರ್ಭದಲ್ಲಿ ಗೊಂದಲಿಗರಿಗೆ ಸರಿಯಾದ ಪೊಷಣೆಸಿಗುತ್ತಿಲ್ಲ ಅವರನ್ನು ಕರೆಸಿ ಆಡಿಸುವ ರೂಢಿ ಬಹಳ ಕಡಿಮೆಯಾಗುತ್ತ ಬಂದಿದೆ ಎಲ್ಲವೂ ಸಹ ಅನಿವಾರ್ಯ ಎಂಬಂತೆ ನಡೆದುಕೊಂಡು ಬಂದಿದೆ. ಇದನ್ನು ನಂಬಿಕೊಂಡು ಬದುಕುತ್ತಿದ್ದ ಇವರು ಇದರಿಂದ ತಮ್ಮ ಜೀವನವೇನು ನಡೆಯದು ಎಂದು ತಿಳಿದು ತಮ್ಮ ಆಟಗಳನ್ನು ನಿಲ್ಲಿಸುತ್ತಿದ್ದಾರೆ. ಹಿಂದೆ ಗೊಂದಲಿಗರನ್ನು ಕರೆಯಿಸಿ ಗೊಂದಲ ಹಾಕಿಸುವ ಸಂಪ್ರದಾಯವೊಂದಿತ್ತು. ಅವರೂ ಸಹ ಹಳ್ಳಿಗಳಿಗೆ ಹೋಗಿ ಆಟಗಳನ್ನು ತೋರಿಸಿ ತಮಗೆ ಬೇಕಾದ ದವಸ ದಾನ್ಯಗಳನ್ನು ಪಡೆಯುತ್ತಿದ್ದರು ಈಗಿನ ಸಂದರ್ಭದಲ್ಲಿ ಇವರನ್ನು ಕೇಳುವವರೇ ಇಲ್ಲದಂತಾಗಿದೆ. ಮೊದಲಿದ್ದ ಗೌರವಾದರಗಳು ಕಡಿಮೆಯಾಗಿವೆ. ಇವರೆ ಹಳ್ಳಿಗಳಿಗೆ ಹೋಗಿ ತಮ್ಮ ಆಟವನ್ನು ಆಡಿ ತೋರಿಸಿದರೆ ಸೂಕ್ತ ಸಂಭಾವನೆಯೂ ದೊರೆಯುತ್ತಿಲ್ಲ ನೋಡುವವರ ಸಂಖ್ಯೆಯು ಸಹ ಇಳಿ ಮುಖವಾಗಿದೆ. ಹಿಂದೆ ಈ ಕಲೆಗೆ ರಾಜಾಶ್ರಯ ದೊರೆಯುತ್ತಿದ್ದು. ಈಗ ಯಾವುದೂ ಇಲ್ಲದಂತಾಗಿದೆ. ಈ ಹಿನ್ನಲೆಯಲ್ಲಿ ಎಷ್ಟೋ ಪ್ರದರ್ಶನ ಕಲೆಗಳು ಕಣ್ಮರೆಯಾಗುತ್ತಿವೆ. ಕೆಲವು ಅಸ್ತಿತ್ವದಲ್ಲಿಲ್ಲ ಹಿಂದೆ ಜನರು ಯಾವುದೇ ಕಲೆಯನ್ನು

ಆಸ್ವಾದಿಸುತ್ತಿದ್ದರು. ಕಲೆಯನ್ನು ಪೋಷಿಸುತ್ತಿದ್ದರು. ಅವುಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುತ್ತಿದ್ದರು. ಕಾಲದ ಬದಲಾವಣೆಯಿಂದಾಗಿ ಈ ಪ್ರವೃತ್ತಿ ಕಡಿಮೆಯಾಗುತ್ತಿದೆ. ಅನಿವಾರ್ಯವೆಂಬಂತೆ ಕಾಲಕ್ಕನುಗುಣವಾಗಿ. ಅವರು ಸಹ ಹೊಂದಿಕೊಂಡಿದ್ದಾರೆ. ಕಲೆಗೆ ಮಾನ್ಯತೆದೊರೆಯುತ್ತಿಲ್ಲ ಎಂದು ತಿಳಿದಾಗ ಅನೇಕ ಕಲಾವಿದರು ಈ ಆಟಗಳನ್ನು ಆಡುವ ವೃತ್ತಿಯನ್ನು ಬಿಟ್ಟು ಬೇರೆ ಉಪಕಸಬುಗಳನ್ನು ಮಾಡ ಹೊರಟಿದ್ದಾರೆ.

ಗೊಂದಲಿಗರಿಗೆ ಸರಿಯಾದ ಸ್ಥಾನಮಾನ ದೊರೆಯುತ್ತಿಲ್ಲ ಹಳ್ಳಿಗಳಲ್ಲಿ ರೇಡಿಯೋ ಮತ್ತು ದೂರದರ್ಶನಗಳ ಪರಿಚಯ ಆದಾಗಿನಿಂದ ಈ ಆಟಗಳಿಗೆ ಮೊದಲಿದ್ದ ಸ್ಥಾನಮಾನಗಳು ದೊರೆಯದೇ ಇದ್ದುದು ವಿಪರ್ಯಾಸವೇ ಸರಿ. ಹಿಂದಿನ ದಿನಗಳಲ್ಲಿ ಗೊಂದಲಿಗರನ್ನು ಕರೆಯಿಸಿ ಆಟವನ್ನು ಆಡಲು ಸಕಲ ಸಿದ್ದತೆಗಳನ್ನು ಹಳ್ಳಿಗರೇ ಮಾಡುತ್ತಿದ್ದರು. ಈ ಪ್ರವೃತ್ತಿ ನಮ್ಮಲ್ಲಿ ಈಗ ಉಳಿದಿಲ್ಲ. ಇಂಥಯಾವುದೇ ಪ್ರದರ್ಶನ ಕಲೆಗಳಿರಬಹುದು. ಅವುಗಳನ್ನು ಉಳಿಸಿಕೊಳ್ಳಬೇಕೆಂದರೆ ಪ್ರದರ್ಶನ ಮಾಡಬೇಕು. ಪ್ರದರ್ಶನವನ್ನೇರ್ಪಡಿಸಲು. ಊರಿನ ಎಲ್ಲಾ ಜನರ ಸಹಕಾರಗಳು ಅಗತ್ಯವಾಗಿ ಬೇಕಿದೆ. ಎಷ್ಟೋ ಸಂದರ್ಭದಲ್ಲಿ ಪ್ರದರ್ಶನ ನಡೆದು ಮುಕ್ತಾಯವಾದಾಗ ಅವರಿಗೆ ಸೂಕ್ತವಾದ ಸಂಭಾವನೆ ದೊರೆಯದೇ ಇರುವುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವಂತಹದ್ದೇ ದೂರದರ್ಶನವು ಸಹ ಎಲ್ಲಾ ಪ್ರದರ್ಶನ ಕಲೆಗಳನ್ನು ಪ್ರದರ್ಶನ ಸಂದರ್ಭದಲ್ಲಿ ಚಿತ್ರೀಕರಿಸಿಕೊಂಡು ಅವುಗಳನ್ನು ಬಿತ್ತರಿಸುತ್ತವೆ. ಆದರೆ ಅದು ಯಾವಗಲೋ ಇಂಥವುಗಳನ್ನು ತೋರಿಸುವ ಬದಲಿಗೆ ಕನಿಷ್ಠ ಪಕ್ಷ ತಿಂಗಳಿಗೆ ಒಮ್ಮೆಯಾದರೂ ತೋರಿಸಿದರೆ ಜನರಿಗೆ ಉತ್ತಮವಾಗುತ್ತದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಇವರು ಭಾಗವಹಿಸಿ ಪ್ರದರ್ಶನವನ್ನು ತೋರಿಸಿ ಯಶಸ್ವಿಯಾಗಿದ್ದಾರೆ. ಇಂಥ ಕಲಾವಿದರು ನಮ್ಮಲ್ಲಿದ್ದಾರೆ. ಅವರನ್ನು ಗುರುತಿಸುವ ಜವಾಬ್ದಾರಿ ನಮ್ಮದು ಪರಿಸ್ಥಿತಿಗೆ ಅನುಗುಣವಾಗಿ ಅವರೂ ಸಹ ಅನೇಕ ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಇದು ತಪ್ಪಾಗಿ ಕಾಣಿಸುವುದಿಲ್ಲ ಏಕೆಂದರೆ ಪರಿಸ್ಥಿತಿ ಮತ್ತು ಸಂದರ್ಭಕ್ಕೆ ತಕ್ಕಂತೆ ಅವರು ಜೀವನ ನಡೆಸುತ್ತಿರುವುದು ಸ್ವಾಭಾವಿಕ.

ಆಧುನಿಕತೆಯಿಂದಾಗಿ ಎಷ್ಟೋ ಗೊಂದಲಿಗರು ತಮ್ಮ ಡಪ್ಪಿನ ವಾದ್ಯಗಳನ್ನು ಮೂಲಿಗೆ ಬೀಸಾಕಿ ಕೂಲಿ ಕೆಲಸಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇವುಗಳಿಂದ ನಮಗೇನು ಪ್ರಯೋಜನ? ಎಂಬ ನಿಲುವನ್ನು ತಳೆದಿದ್ದಾರೆ. ಹಿಂದೆ ಇಂತಹ ಕಲಾವಿದರಿಗೆ ಉಂಬಳಿ ಜಮೀನನ್ನು ಕೊಟ್ಟು ಪ್ರೋತ್ಸಾಹಿಸುತ್ತಿರುವ ಸಂಗತಿ ನಮಗೆಲ್ಲಾ ತಿಳಿದಿದೆ. ಆಧುನಿಕ ದಿನಗಳಲ್ಲಿ ಇಂತಹ ಸೌಕರ್ಯಗಳು ಸಿಗದೇ ಹೋಗಿರುವುದು ನಮಗೆ ಕಂಡುಬರುತ್ತದೆ. ಸರಕಾರದಲ್ಲಿ ಇವರಿಗೆ ಯಾವುದೇ ಸೌಲಭ್ಯಗಳಿಲ್ಲ ಆದ್ದರಿಂದ ಇವರು

ತಾವು ಸಹ ಯಾವುದೇ ಬುಡಕಟ್ಟು ವರ್ಗಗಳಿಗೆ ಸೇರಿಕೊಂಡು ತಮಗೆ ಬರುವಂತಹ ಸೌಲಭ್ಯಗಳನ್ನು ಪಡೆದುಕೊಳ್ಳಲು ಹೋರಾಟ ನಡೆಸಿದ್ದಾರೆ. ಅದು ಅವರಿಗೆ ಅನಿವಾರ್ಯವೂ ಸಹ ಆಗಿದೆ.

ಕಂಪ್ಯೂಟರ್ ಯುಗ ಪ್ರಾರಂಭವಾದಾಗಿನಿಂದ ಎಷ್ಟೋ ಬದಲಾವಣೆಗಳು ಆಗಿವೆ. ಪ್ರತಿದಿನವೂ ಹೊಸ ಹೊಸ ಜಗತನ್ನು ಹೊಸ ಆವಿಸ್ಕಾರಗಳನ್ನು ತೋರಿಸುವ ಈ ಸಾಧನದಿಂದಾಗಿ. ಅನಿವಾರ್ಯ ಎಂಬಂತೆ ಜನಪದ ಕಲೆಗಳು ಕಡಿಮೆ ಆಗಿ ಪರಿಣಮಿಸಿದವು ಕೆಲವೆಡೆ ಈ ಆಟಗಳನ್ನು ಕುಟುಂಬ ಯೋಜನೆ ಮತ್ತು ಸಣ್ಣ ಉಳಿತಾಯ ಯೋಜನೆಗಳ ಪ್ರಚಾರಕ್ಕೆ ಬಳಸಿಕೊಂಡಿದ್ದಾರೆ. ಬಳಸಿಕೊಳ್ಳಬೇಕು ಇದು ತಪ್ಪಲ್ಲ ಆದರೆ ಇಂತಹ ಪ್ರದರ್ಶನ ಕಲೆಗಳನ್ನು ಮೂಲ ಸ್ವರೂಪದಲ್ಲೇ ಉಳಿಸಿಕೊಳ್ಳಬೇಕೆಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಯಾವುದೇ ಕಲೆಯನ್ನು ಜೀವಂತವಾಗಿ ಉಳಿಸಿಕೊಳ್ಳಬೇಕೋ ಅಥವಾ ಮೂಲ ಸ್ಥಿತಿಯಲ್ಲಿಯೇ ಉಳಿಸಿಕೊಳ್ಳಬೇಕೋ ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಒಟ್ಟಿನಲ್ಲಿ ಕಲೆ ಉಳಿಯಬೇಕು. ಅದು ಯಾವುದೇ ಸ್ವರೂಪದಲ್ಲಿಯಾದರೂ ಸಹ ಆದರೆ. ಆ ಕಲೆಯ ಎಲ್ಲಾ ರೂಪಲಕ್ಷಣಗಳನ್ನು ಪಡೆದಿರಬೇಕು. ಯಾವುದೇ ಕಲೆಯೂ ಕಾಲಮಾನದ ಅಗತ್ಯಕ್ಕೆ ತಕ್ಕಂತೆ ಬದಲಾವಣೆ ಹೊಂದುತ್ತ ಹೋಗುವುದು ಸಾಮಾನ್ಯವಾಗಿ ಕಂಡುಬರುತ್ತವೆ.

ಇಂತಹ ಪ್ರದರ್ಶನ ಕಲೆಗಳನ್ನು ಕಲಿಯಲು ವಿದ್ಯಾವಂತರು ಪ್ರವೇಶಿಸಬೇಕು. ವಿದ್ಯಾವಂತರು ಪ್ರವೇಶ ಮಾಡಿದಾಗ ಈ ಕಲೆಗಳ ಬಗ್ಗೆ ಕೀಳಿರಿಮೆಯನ್ನು ತೆಗೆದು ಹಾಕಲು ಸಹಾಯಕವಾಗುತ್ತದೆ. ಬರಿ ಹಿಂದೂಸ್ತಾನಿ ಸಂಗೀತ, ಗೀತಗಾಯನ, ಸಿನಿಮಾ ಹಾಡುಗಳಂತವುಗಳಿಗೆ, ಪ್ರೋತ್ಸಾಹ ಕೊಡದ್ದೇನೆ. ಇಂತಹ ಕಲೆಗಳಿಗೆ ಸ್ಪರ್ಧೆಗಳು ಸಮಾರಂಭಗಳು. ನಡೆಯಬೇಕು. ಈ ಕಲೆಯಲ್ಲಿ ನಿಪುಣರಾಧವರಿಗೆ ಗೌರವವನ್ನು ಅರ್ಪಿಸುವಂತಹ ಕೆಲಸಗಳು ನಡೆಯಬೇಕಾಗಿದೆ ಯಾವುದೇ ಪ್ರದರ್ಶನ ಕಲೆ ಒಂದು ನಿರ್ದಿಷ್ಟ ಸಮುದಾಯಗಳಿಗೆ ಸೀಮಿತವಾಗಬಾರದು. ಎಲ್ಲರೂ ಸಹ ಕಲೆಯನ್ನು ಕಲಿಯಬೇಕು. ಅದಕ್ಕೆ ಸೂಕ್ತವಾದ ವಾತಾವರಣವನ್ನು ಕಲ್ಪಿಸಬೇಕು ಸರಕಾರವೂ ಕೂಡ ಜನಪದ ಕಲಾವಿದರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡುವುದರ ಮೂಲಕ ಅವರನ್ನು ಪ್ರೋತ್ಸಾಹಿಸಬೇಕು. ಎಷ್ಟೋ ಜನಪದ ಕಲಾವಿದರು. ನಮ್ಮಲ್ಲಿ ಇದ್ದಾರೆ. ಅವರನ್ನು ಗುರುತಿಸಿ ಪ್ರೋತ್ಸಾಹಿಸುವ ಗುರುತರ ಜವಾಬ್ದಾರಿ ನಮ್ಮ ನಿಮ್ಮೆಲ್ಲರದ್ದಾಗಿವೆ. ನಾವೀಗ ೨೧ನೇ ಶತಮಾನದಲ್ಲಿ ಬದುಕುತ್ತಿದ್ದೇವೆ. ಇಂಥಹ ಕಲೆಗಳನ್ನು ಮೆಲುಕು ಹಾಕುವ ಮೂಲಕ ನಮ್ಮಲ್ಲಿ ಜೀರ್ಣಿಸಿಕೊಳ್ಳಬೇಕು ಅಂದರೆ ಕರಗತ ಮಾಡಿಕೊಳ್ಳಬೇಕಾಗಿದೆ.

ಅದರಂತೆ ಇವೆಲ್ಲವೂಗಳೂ ನಮ್ಮ ಪ್ರತಿ ನಿತ್ಯದ ಒಡನಾಡಿಗಳು ಹಾಗೆಯೇ ಇವುಗಳೊಂದಿಗೆ ಆರಾಮವಾಗಿ ಜೊತೆ ಜೊತೆ ಹೆಜ್ಜೆ ಹಾಕುವುದನ್ನು ಭಾರತದ ಪ್ರತಿಯೊಬ್ಬ

ಪ್ರಜೆಯು ಅರ್ಥಮಾಡಿಕೊಂಡಿದ್ದಾನೆ. ಆದುದರಿಂದ ಪರಂಪರೆಗಳು, ಸ್ಥಳಿಯ ಅಭಿರಚಿಗಳು, ಆಚರಣೆಗಳು, ಜನಪದ ಸತ್ಯಗಳು ಮುಂತಾದ ಪಾರಂಪರಿಕ ವ್ಯವಸ್ಥೆಗಳತ್ತ ದೃಷ್ಟಿಕೋನಗಳನ್ನು ಅತಂತ್ರಸ್ಥಿತಿಯಲ್ಲಿ ಬದುಕುವ ಯಾವೊಬ್ಬ ಸೃಜನಶೀಲ ವ್ಯಕ್ತಿಯು ಗಮನ ಹರಿಸುವುದು ಸಹಜವೆನಿಸುತ್ತದೆ. ಪ್ರಸ್ತುತ ಅಧ್ಯಯನದ ಮೂಲ ಉದ್ದೇಶವು ಇದೇ ಆಗಿದೆ. ೨೧ನೇ ಶತಮಾನದಲ್ಲಿ ಗೊಂದಲಿಗರ ಆಟಕ್ಕೆ ಸ್ಥಾನವಿದೆಯೇ? ಇದ್ದರೆ ಹೇಗಿರುತ್ತಿತ್ತು. ಪ್ರದರ್ಶನ ಕಲೆಯಾಗಿ ಗೊಂದಲಿಗರ ಆಟವು ಹೆಚ್ಚಿನ ಬದಲಾವಣೆಯೊಂದಿಗೆ ಮತ್ತೊಮ್ಮೆ ಮೇಲ್ಮಟ್ಟದ ಸ್ಥಿತಿಯನ್ನು ತಲುಪೀತೆ? ಅಥವಾ ನಶಿಸಿ ಹೋಗುತ್ತದೆಯೇ? ಹೀಗೆ ಹಲವು ಹತ್ತು ಸಾಧ್ಯತೆಗಳತ್ತ ಜನಪದ ಕಲಾಸಕ್ತರ ಗಮನ ಹರಿಯುತ್ತದೆ.

ಮೂಲ ಕೃತಿಯಲ್ಲಿ ಆಧುನಿಕ ನಗರದವರ ಮೆಚ್ಚುಗೆಯನ್ನು ಪಡೆಯುವುದು ತುಂಬಾಕಷ್ಟಾಕರವಾಗಿರುವುದರಿಂದ ಕೆಲವು ಮಾರ್ಪಾಡುಗಳು ಅನಿವಾರ್ಯವಾಗಿವೆ. ಹಾಗಿದ್ದರೆ. ಆ ಮಾರ್ಪಾಡುಗಳು ಎಂಥವು? ಎಂಬ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ? ಜನಪದ ಕಲೆಯನ್ನು, ವಿದ್ಯಾವಂತರು ಕೈಗೆತ್ತಿಕೊಳ್ಳುವುದು ಉತ್ತಮ ಕಲಾ ಪ್ರದರ್ಶನಕ್ಕೆ ಕಾಲದ ಮಿತಿ ಇರಬೇಕು ಹೀಗೆ ಕಲಿತವರಿಂದ ಸಂಸ್ಕೃತಿ ಮತ್ತು ಕಲೆಯನ್ನು ಉಳಿಸಿಕೊಳ್ಳುವ ಪ್ರಯತ್ನಗಳು ನಡೆದಿರುವಂತೆಯೇ. ಗೊಂದಲಿಗರ ಆಟಗಳಲ್ಲಿಯ ಸಹ ಆಧುನಿಕ ಯುಗದ ಪ್ರಭಾವಗಳನ್ನು ನಾವು ಗಮನಿಸಬಹುದು. ಈ ಆಟಗಾರರು ಪ್ರದರ್ಶನದ ಸಂದರ್ಭವನ್ನು ಆಧಾರವಾಗಿಟ್ಟುಕೊಂಡು ಆಟಗಳನ್ನು ನಿರೂಪಿಸುವಂತಹ ಕಲಾ ಚಾತುರ್ಯತೆಯು ಇವರಲ್ಲಿದೆ. ಆಟಗಳನ್ನು ಆಯಾಗತ್ತಿಗೆ ತಿರುಗಿಸಿಕೊಂಡು ಆಟವಾಡುವಂತಹವರು ಇವರಾಗಿದ್ದಾರೆ. ಇವರು ಮೂಲ ಕಥೆಯನ್ನು ಹೇಳುವದರ ಜೊತೆಯಲ್ಲಿಯೇ ಜನರಿಗೆ ಪ್ರಸ್ತುತ ಸಂದರ್ಭಕ್ಕೆ ತಕ್ಕಂತೆ ನಡೆಯುವ ಘಟನೆಗಳನ್ನು ಅರಿವಂತಹ ಲೋಕದೃಷ್ಠಿ ಇವರಲ್ಲಿದೆ. ಹಾಗೆಯೇ ಕಥೆಗಳನ್ನು ಹೇಳುವ ಶೈಲಿ ಬದಲಾವಣೆಯಾಗುತ್ತದೆ. ಸರಳವಾಗಿ ಜೀವನದ ಆಗುಹೋಗುಗಳನ್ನು ಬಹಳ ಮನೋಜ್ಞನವಾಗಿ ಚಿತ್ರಿಸುವಂತಹದ್ದು ಇವರಿಗೆ ಕರಗತವಾಗಿದೆ ಎಂದು ನನಗನ್ನಿಸುತ್ತದೆ. ಅಷ್ಟರ ಮಟ್ಟಿಗೆ ಇವರು ಆಧುನಿಕತೆಗೆ ಹೊಂದಿಕೊಂಡಿದ್ದಾರೆ. ಇವರ ಸಂಭಾಷಣೆಗಳಲ್ಲಿ ಹಿಂದೆ ಇದ್ದಂತಹ ನಾವಿನ್ಯತೆಯ ಜೊತೆಗೆ ಹಿಂದೆ ಇದ್ದಂತಹ ಸಂಭಾಷಣೆಗಳು ಈಗ ಪ್ರದರ್ಶಿಸುವ ಆಟಗಳಲ್ಲಿ ಕಂಡು ಬರುವುದಿಲ್ಲ. ಬಾಯಿ ಪಾಠ ಮಾಡುವ ಸಂಪ್ರದಾಯವೂ ಇಲ್ಲ ವೈಜ್ಞಾನಿಕ ಯುಗದಲ್ಲಿ ಜನಪದವೂ ವೈಜ್ಞಾನಿಕವಾಗಿ ಬಿಡುತ್ತದೆ. ಇವರು ಸಂಪ್ರದಾಯವನ್ನು ಮುರಿಯುತ್ತಿದ್ದಾರೆ. ಎಂದು ಹಲವು ಮೂಲಗಳು ಹೇಳುತ್ತವೆ ಮತ್ತು ವಿರೋಧವನ್ನು ವ್ಯಕ್ತಪಡಿಸಿರುವುದು ಕಂಡುಬಂದಿದೆ. ಒಟ್ಟಿನಲ್ಲಿ ಹೇಳುವುದಾದರೆ ಆಧುನಿಕ ನಗರ ವ್ಯವಸ್ಥೆಗಳಿಗೆ ಈ ರೀತಿಯ ಪ್ರಯೋಗಗಳು ಸೂಕ್ತವೆಂದು ಹೇಳಬಹುದಾಗಿದೆ.

ಅಧ್ಯಾಯ–ಏಳು

ಸಮಾರೋಪ

ಅಧ್ಯಾಯ–ಏಳು

ಸಮಾರೋಪ

ಕನ್ನಡ ಜನಪದ ಸಂಸ್ಕೃತಿ ರೂಪಿಸುವಲ್ಲಿ ಗೊಂದಲಿಗರ ಆಟಗಳು ಮಹತ್ವದ ಸ್ಥಾನವನ್ನು ಪಡೆದಿವೆ. ಜನಪದ ಕಲಾ ಪ್ರಕಾರದ ಪ್ರಮುಖ ಅಂಗವಾದ ಗೊಂದಲಿಗರ ಆಟಗಳು ಶತಮಾನಗಳ ಹಿಂದಿನಿಂದ ಭಾರತೀಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸುತ್ತಾ ವಿಶ್ವದ ಗಮನವನ್ನು ಸೆಳೆದಿವೆ ಗ್ರಾಮೀಣ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿರುವ ಗೊಂದಲಿಗರ ಆಟಗಳು ಇತಿಹಾಸವನ್ನು ಸಾಮಾನ್ಯ ಜನರಿಗೆ ಮನವರಿಕೆ ಮಾಡಿಕೊಡುವಲ್ಲಿ ಉತ್ತಮ ಪಾತ್ರವಹಿಸಿವೆ.

ಶಾತವಾನ, ಚಾಲುಕ್ಯ, ರಾಷ್ಟ್ರಕೂಟ ಹಾಗೂ ವಿಜಯನಗರ ಸಾಮ್ರಾಜ್ಯಗಳ ಪ್ರೋತ್ಸಾಹದಿಂದ ವಿಶ್ವವ್ಯಾಪಿಯಾಗಿ ಪ್ರಚಾರಗಿಟ್ಟಿಸಿಕೊಂಡ ಗೊಂದಲಿಗರ ಆಟಗಳು ಇಂದು ಉನ್ನತ ಸ್ಥಿತಿಯಿಂದ ಕೇವಲ ಹೆಸರಿಗೆ ಮಾತ್ರ ಉಳಿದೆವೆ ಇದು ಪ್ರಪಂಚದಾದ್ಯಂತ ಪ್ರಚಲಿತವಾಗಿರುವ ಒಂದು ಕಲೆ, ಪ್ರಚೀನವಾದುದು ಕೂಡ ಇದು ಎಲ್ಲರಿಗೂ ಮನರಂಜನೆಯನ್ನು ಕೊಡುತ್ತದೆ. ಹಿಂದೆ ಮಳೆ ಬರದಿದ್ದಾಗ ದನಕರುಗಳಿಗೆ ರೋಗ ರುಜಿನಗಳು ಬಂದಾಗ ಮತ್ತು ಮನೆಯ ಮಕ್ಕಳು, ಮೈನೆರೆದಿರುವಾಗ, ಮದುವೆ, ಮುಂಜಿ, ನಾಮಕರಣ, ಇನ್ನೂ ಮುಂತಾದ ಉದ್ದೇಶಗಳಿಗೆ ಕರೆಯಿಸಿ ಆಡಿಸುವುದು ನಮಗೆ ಹಿಂದಿನಿಂದಲೂ ತಿಳಿದುಬರುತ್ತದೆ. ಈ ಆಟವನ್ನು ಆಡಿಸಲು ಸೂಕ್ತ ಏರ್ಪಾಟುಗಳನ್ನು ಮಾಡುತ್ತಿದ್ದರು ಇದರಿಂದ ಊರು ಸುಭಿಕ್ಷೆಯಾಗಿರುತ್ತದೆ ಎಂಬಮನವರಿಕೆ ಅವರದಾಗಿತ್ತು.

ಜಾನಪದ ಜಗತ್ತಿನ ಮೂಲದಿಂದ ಬೆಳೆದು ಬಂದಿರುವ ಗೊಂದಲಿಗರ ಆಟಗಳು ಇಂದಿಗೂ ಒಂದು ಜೀವಂತ ಸೃಜನಶೀಲ ಪ್ರದರ್ಶನ ಕಲೆಯಾಗಿ ಉಳಿದಿದೆ. ಈಗ ಆಧುನಿಕ

ಸಿನಿಮಾ ನಾಟಕ, ಮತ್ತು ಟೆಲಿವಿಷನ್‌ಗಳಂತಹ ಸಮೂಹ ಸಂವಹನ ಮಾಧ್ಯಮಗಳಿದ್ದು ಇವುಗಳಿಗೆ ಇವುಗಳ ಪರಂಪರೆಗೆ ದಕ್ಕೆಯುಂಟಾಗುತ್ತದೆ ಎಂದು ನೋಡಬಹುದಾಗಿದೆ. ಆದರೆ ಭಾರತೀಯ ಜನಪದ ಕಲೆಗಳು ವಿಶಿಷ್ಟ ಸ್ಥಾನವನ್ನು ಗಳಿಸಿವೆ ಇವು ಬಹುತೇಕ ನಾಗರೀಕರ ಹೃದಯಾಂತರಾಳವನ್ನು ಹೊಕ್ಕು ಬೇರೂರಿವೆ ಈ ಗೊಂದಲಿಗರ ಆಟಗಳಂತೆ ದಕ್ಷಿಣ ಭಾರತದ ಕಲೆಯು ತನ್ನ ಪ್ರಾದೇಶಿಕ ಸೀಮೆಗಳನ್ನು ಮೀರಿ ಬೆಳೆದು ಬಂದಂತಹವುಗಳಾಗಿವೆ ಅದರಂತೆ ಅವು ಕರ್ನಾಟಕದಲ್ಲಿ ಹೆಚ್ಚಾಗಿ ಇರುವುದು ನಮಗೆ ಕಂಡುಬರುತ್ತವೆ. ಕರ್ನಾಟಕವಲ್ಲದೆ, ಆಂಧ್ರ, ತಮಿಳುನಾಡು ಇನ್ನಿತರ ಪ್ರದೇಶಗಳಲ್ಲಿ ತಮ್ಮ ಸೊಗಡನ್ನು ಹರಡಿ ಆಯಾ ದೇಶಗಳ, ರಾಜ್ಯಗಳ, ಸಾಂಸ್ಕೃತಿಕ ಬದುಕಿನಲ್ಲಿ ಪ್ರಭಾವ ಬೀರಿವೆ, ಸ್ಥಿತ್ಯಂತರಗಳಿಂದಾಗಿ ನಮ್ಮಲ್ಲಿ ಅನೇಕ ಬದಲಾವಣೆಗಳುಂಟಾದವು ಅವರನ್ನು ಊರಿಗೆ ಕರೆಯಿಸಿ ಆಟ ಆಡಿಸುವ ವಾತವರಣ ಕ್ರಮೇಣ ಕ್ಷೀಣಿಸುತ್ತಾ ಬಂದಿದೆ.

ಒಂದ ಕಡೆ ವೀಕ್ಷಕರಿಗೆ ಪರಿಚಿತವಾದ ಪುರಾಣ ಪಾತ್ರಗಳಿದ್ದರೂ ಪ್ರದರ್ಶನವನ್ನು ನಡೆಸುವ ಸಂದರ್ಭ ಮತ್ತು ಕಲಾವಿದನು ಈ ಪಾತ್ರಗಳ ಹಿನ್ನಲೆಯಲ್ಲಿ ನೆಲೆಸಿರುವ ಅವರ ವೈಶಿಷ್ಟ್ಯವನ್ನು ಪ್ರಾಮುಖ್ಯತೆಯನ್ನ ಗಾದೆ ಮತ್ತು ಒಗಟುಗಳ ಮೂಲಕ ಪರಿಚಯಿಸುತ್ತಾರೆ. ಹಾಡು, ನೃತ್ಯ, ವಾದ್ಯ, ಮಾತು, ಮತ್ತು ಗೊಂದಲಿಗರಲ್ಲಿ ಇಷ್ಟನ್ನು ಒಂದೇ ಕ್ಷಣದಲ್ಲಿ ನೋಡುವವರಿಗೆ ತಲುಪುವಂತೆ ಆಗುವುದೇ ಗೊಂದಲಿಗರ ಆಟದ ಬಹುಮುಖ್ಯ ಅಂಶವಾಗುತ್ತದೆ ಸ್ವಾಭಾವಿಕವಾಗಿ ಈ ರೀತಿಯ ಪ್ರದರ್ಶನ ಕಲೆಯು ಜನಸಾಮಾನ್ಯರ ಜೀವನದ ಸಮಗ್ರ ಕಲ್ಪನೆಯ ಪರಿಧಿಯೊಳಗೆ ಪ್ರವೇಶಿಸಿ ಆತನ ಆತ್ಮ ವಿಮರ್ಶೆಯೊಂದಿಗೆಯೇ ಗೊಂದಲಿಗರ ಆಚರಣೆಗಳಿಗೆ ಮೇಲಿಂದ ಮೇಲೆ ಹೊಸ ಹೊಸ ಮೌಲ್ಯಗಳನ್ನು ಪೋಣಿಸುತ್ತಾ ಈ ಆಟಕ್ಕೊಂದು ಸೈದ್ಧಾಂತಿಕ ನೆಲೆಯೊಂದನ್ನು ನಿರ್ಮಿಸಿಕೊಡುತ್ತದೆ. ಆದುದರಿಂದಲೇ ಈ ಕಲೆಗೆ ದೀರ್ಘವಾದ ಇತಿಹಾಸವಿದೆ ಎನ್ನಬಹುದು ಹೀಗಿರುವುದರಿಂದಲೇ ಇದಕ್ಕೆ ಐತಿಹಾಸಿಕವಾಗಿ ಉತ್ತೇಜನ ದೊರಕಿದೆ.

ಜಾನಪದ ಸಾಹಿತ್ಯ ಸಂಗ್ರಹದಂತಹ ಕೆಲಸಗಳು ನಡೆದರು ಸಂಪಾದನೆಯ ಹಂತದಲ್ಲಿಯೇ ಉಳಿದುಕೊಂಡಿವೆ. ವಿವರಣೆ ಮತ್ತು ವಿಶ್ಲೇಷಣೆಯ ಹಂತಕ್ಕೆ ತರುವ ಕೆಲಸ ಈ ಅಧ್ಯಯನದಿಂದ ಆಗಬೇಕೆನ್ನುವುದು ನನ್ನ ಬಯಕೆ. ಆ ಕಾರಣದಿಂದಾಗಿ 'ಗೊಂದಲಿಗರ ದೇವೆಂದ್ರಪ್ಪನ ಆಟಗಳು' ಸಂಪಾದಿತ ಕೃತಿಯನ್ನು ಹಲವಾರು ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

೧. **ಗೊಂದಲಿಗರ ದೇವೇಂದ್ರಪ್ಪನ ಆಟಗಳು,** (ಸಂ) ಮುದೇನೂರು ಸಂಗಣ್ಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩

೨ **ಕರ್ನಾಟಕ ಜಾನಪದ ಕಲೆಗಳು,** (ಸಂ) ಗೋ.ರು.ಚೆನ್ನಬಸವಪ್ಪ, ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ೫೬೦೦೧೮

೩ **ಬಳ್ಳಾರಿಯ ಜಿಲ್ಲೆಯ ತೊಗಲುಗೊಂಬೆ ಆಟ,** ನಾಗವರ್ಮ, ೨೦೦೭ ಎಂ.ಫಿಲ್. ಪ್ರಬಂಧ

೪. **ಜಾನಪದ ಕರ್ನಾಟಕ ಸಂಪುಟ–೧, ಸಂಚಿಕೆ–೨,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫ **ಕರ್ನಾಟಕ ಜಾನಪದಗಳ ಕೋಶ,** (ಸಂ) ಹಿ.ಜಿ.ಬೋರಲಿಂಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೬ **ಉತ್ತರ ಕರ್ನಾಟಕದ ಬಯಲಾಟಗಳು,** ಡಾ.ಬಸವರಾಜ ಮಲಶೆಟ್ಟಿ, ಸಂಶೋಧನಾ ಗ್ರಂಥಮಾಲೆ, ೪೪, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೧೯೮೨

೭ **ಜಾನಪದ ಲೋಕ,** ಡಾ.ಚೆನ್ನಣ್ಣ ವಾಲೀಕಾರ, ದಲಿತ ಬಂಡಾಯ ಪ್ರಚಾರ ಸಮಿತಿ, ಗುಲಬರ್ಗಾ ೫೮೫ ೧೦೫

೮ **ಉತ್ತರ ಕರ್ನಾಟಕದ ಜಾನಪದ ವಾದ್ಯಗಳು** ಡಾ.ಬಸವರಾಜಮಲಶೆಟ್ಟಿ, ಪ್ರಾದೇಶಿಕ ಜನಪದ ಕಲೆಗಳ ಅಧ್ಯಯನ ಕೇಂದ್ರ, ಉಡುಪಿ

೯. **ತುಳುನಾಡಿನ ಗೊಂದೂಳ್ ಪೂಜೆ,** ಮೋಹನ್ ಎಸ್., ಎಂ.ಫಿಲ್ ಪ್ರಬಂಧ ೨೦೦೨

೧೦. **ಉತ್ತರ ಕರ್ನಾಟಕದ ಜನಪದ ಪದ್ಯಸಾಹಿತ್ಯ,** ಡಾ.ಎಂ.ಎಂ.ಕಲಬುರ್ಗಿ, ಸಮಾಜ ಪುಸ್ತಕಾಲಯ, ಧಾರವಾಡ

೧೧. **ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ,** ಮೈಸೂರು ವಿಶ್ವವಿದ್ಯಾಲಯ, ಮೈಸೂರು

೧೨. **ಜಾನಪದ ಕೈಪಿಡಿ,** ಜಾನಪದ ಮಾಲೆ–೧, ಡಾ.ಲಕ್ಕಪ್ಪಗೌಡ, ಎಚ್.ಜೆ. ಪ್ರಧಾನ, (ಸಂ) ಪುರುಷೋತ್ತಮ ಬಿಳಿಮಲೆ, ತಿ.ನಂ.ಶಂಕರನಾರಾಯಣ, ಅಂಬಳಿಕೆ ಹಿರಿಯಣ್ಣ, ಎ.ವಿ.ನಾವಡ, ಶ್ರೀರಾಮ ಇಟ್ಟಣ್ಣನವರು.

೧೩. **ಜಾನಪದ ಕೈಪಿಡಿ ಸಂಪುಟ–೧,** ಡಾ.ಎಚ್.ಜೆ.ಲಕ್ಕಪ್ಪಗೌಡ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೧೪. **ಕನ್ನಡ ಜಾನಪದ ಪ್ರಜ್ಞೆ,** ಡಾ.ವೀರಣ್ಣ ದಂಡೆ, ಕವಿಮಾರ್ಗ ಪ್ರಕಾಶನ ತೇಜಶ್ವಿನಿ, ಸಂಸ್ಕೃತಿ ಪುರ, ವಿಶ್ವವಿದ್ಯಾಲಯ, ಅಂಚೆ, ಗುಲಬರ್ಗ–೧೯೯೩.

೧೫. **ಉತ್ತರ ಕರ್ನಾಟಕದ ಜನಪದ ಕಥೆಗಳು,** ಡಾ.ಸಿಂಪಿಲಿಂಗಣ್ಣ, ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೬. **ದಲಿತ ತತ್ವಪದಕಾರ ಜಂಬಗಿ ಶರಣ**, ಡಾ.ಹರಿಶ್ಚಂದ್ರ ದಿಗ್ಗಂಗೀಕರ್, ಅಕ್ಷಯ ಪ್ರಕಾಶನ, ಗುಲಬರ್ಗಾ.

೧೭. **ಜಾನಪದ ಸೃಷ್ಟಿ-ದೃಷ್ಟಿ**, ಹಾಸನಬೀಳಗಿ, ಸಾಹಿತ್ಯ ಪ್ರಕಾಶನ, ಧಾರವಾಡ, ೨೦೦೦

೧೮. **ಜಾನಪದ ಬನಸಿರಿ**, ಡಾ.ಹೆಬ್ಬಾಲೆ ಕೆ.ನಾಗೇಶ್, ಕುಟಿರ ಪ್ರಕಾಶನ, ಎಂ.ಪಿ.ಪ್ರಕಾಶನಗರ, ಹೊಸಪೇಟೆ.

೧೯. **ಗೊಂದಲಿಗರ ಕಥೆಗಳು**, ಡಾ.ಕ್ಯಾತನಹಳ್ಳಿ ರಾಮಣ್ಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೨

೨೦. **ಜಾನಪದ ವೈಭವ**, ಡಾ.ನಿಂಗಣ್ಣ ಸಣ್ಣಕ್ಕಿ, ಪೂರ್ಣಿಮಾ ಪ್ರಕಾಶನ ಗೋಕಾಕ, ಬೆಳಗಾವಿ ಜಿಲ್ಲೆ.

೨೧. **ಜನಪದ ಸುತ್ತ-ಮುತ್ತ**, ಮಾ.ನಾ.ನಂದಾವರ, ಪ್ರಜಾಬಂದು ಪ್ರಕಾಶನ, ಮಂಗಳೂರು

೨೨. **ಬಳ್ಳಾರಿಗೆ ತೆಲುಗರ ವಲಸೆ**, ಮಹಾದೇವಯ್ಯ ಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. **ಪ್ರದರ್ಶನಾತ್ಮಕ ಜಾನಪದ ಕಲೆಗಳು**, ಕಲ್ಲಪ್ಪ ಎಂ.ಎಸ್, ಸಖಿ ಪ್ರಕಾಶನ, ಬೆಂಗಳೂರು , ೧೯೯೮

೨೪. **ಸೂರ್ಯಕಾಂತಿ ಸ್ಮರಣ ಸಂಚಿಕೆ**, ಬಳ್ಳಾರಿ ಜಿಲ್ಲಾ ೮ನೇ ಕನ್ನಡ ಸಾಹಿತ್ಯ ಸಮ್ಮೇಳನ, ಕನ್ನಡ ಸಾಹಿತ್ಯ ಪರಿಷತ್ತು, ನೇತಾಜಿ ರಸ್ತೆ, ರಾಮನಗರ, ಹ.ಬೊ.ಹಳ್ಳಿ ೫೮೩ ೨೦೨. ೧೯೯೩

೨೫. **'ಸಣ್ಣಾಟಗಳು,'** (ಪೂ) ಎಚ್.ಆಯ್ ತಿಮ್ಮಾಪುರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರಸಾರಾಂಗ ಜೂನ್ ೧೯೯೯.

೨೬. **ಮೌಖಿಕ**, ಡಾ.ವೀರಣ ದಂಡೆ, ಕವಿಮಾರ್ಗ, ಪ್ರಕಾಶನ, ತೆಜಸ್ವಿನಿ ಸರಸ್ವತಿಪುರ, ವಿಶ್ವವಿದ್ಯಾಲಯ ಅಂಚೆ, ಗುಲಬರ್ಗ ೫೮೫ ೧೦೬

೨೭ **ಗೊಂದಲಿಗರ ಸಂಸ್ಕೃತಿ**, ನಿಂಗಣ್ಣ ಸಣ್ಣಕ್ಕಿ, ಕನ್ನಡ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ ಬೆಂಗಳೂರು ೧೯೯೩

೨೮. **ಸಣ್ಣಾಟಗಳ ಹುಟ್ಟು ಬೆಳವಣಿಗೆ**. ಡಾ.ಗಂಗಧಾರ ದೈವಜ್ಞ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೬

೨೯. **ಜಾನಪದ ಅಧ್ಯಯನದ ಲೇಖನಗಳು**, ಡಾ.ಪುರುಷೋತ್ತಮ ಬಿಳಿಮಲೆ,

೩೦. **ಜಾನಪದ ಶಾಸ್ತ್ರ ಸಿದ್ಧಾಂತಗಳು**, (ಸಂ) ವೀರಣ್ಣದಂತೆ, ನೆಲಮನೆ ಪ್ರಕಾಶನ, ರಂಗನಾಥನಗರ ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ, ೧೯೯೯

೩೧. **ಜಾನಪದ ಅಧ್ಯಯನ**, ಡಾ.ದೇ.ಜ.ಗೌ, ಕನ್ನಡ ಪುಸ್ತಕ ಪ್ರಾಧಿಕಾರ ಮೂರನೇ ಮುದ್ರಣ, ೨೦೦೧

೩೨. **ಜಾನಪದ ಸ್ವರೂಪ**, ಡಾ.ಹಾ.ಮಾ.ನಾಯಕ, ಇ.ವಿ.ಸ್ಮಾರಕ ಗ್ರಂಥ ಮಾಲೆ, ೧೯೭೧